# ಹಸಿರು ಪುಟಗಳು

## ಈ ಪುಸ್ತಕದಲ್ಲಿ ಹೇಳಿದ ಔಷಧಗಳ ಉಪಯೋಗ, ತೆಗೆದುಕೊಳ್ಳಬೇಕಾದ ಪ್ರಮಾಣ ಮತ್ತು ಮುನ್ನೆಚ್ಚರಿಕೆಗಳು



ಈ ಪುಟಗಳಲ್ಲಿ ಆಯಾ ಔಷಧಗಳನ್ನು ಅವುಗಳ ಉಪಯೋಗಕ್ಕೆ ಅನುಗುಣವಾಗಿ ಗುಂಪು ಮಾಡಲಾಗಿದೆ. ಉದಾಹರಣೆಗೆ ಜಂತುಗಳ ಸೋಂಕಿನ ಎಲ್ಲಾ ಔಷಧಗಳೂ **ಜಂತುಗಳು** ಎಂಬ ತಲೆಬರಹದ ಕೆಳಗೆ ಕಾಣುತ್ತವೆ.

ನಿಮಗೆ ಬೇಕಾದ ಔಷಧ, ಯಾವ ರೋಗಕ್ಕೆ ಎಂಬುದು ತಿಳಿದಿದ್ದರೆ ಕೂಡಲೇ ಆಯಾ ತಲೆಬರಹದ ಅಡಿಯಲ್ಲಿ ಹುಡುಕಿದರೆ ಸಿಗುತ್ತದೆ.

ಇಲ್ಲಿ ಕೊಟ್ಟಿರುವ ಔಷಧಗಳು ಮೂಲ ಹೆಸರಿನಲ್ಲಿವೆ ಅದರೆ ಕೆಲವು ಬ್ರಾಂಡ್ ಹೆಸರುಗಳನ್ನು (brand name) ಕೊಟ್ಟಿದೆ. ಜಗತ್ತಿನ ಎಲ್ಲ ಕಡೆಗೂ ಔಷಧದ ಮೂಲ ಹೆಸರು (ಅಥವಾ ಜೆನೆರಿಕ್ ಹೆಸರು generic name) ಒಂದೇ. ಬ್ರಾಂಡ್ ಹೆಸರುಗಳು ಮಾತ್ರ ಬೇರೆ ಬೇರೆ ಇರುತ್ತವೆ. ಬ್ರಾಂಡ್ ಹೆಸರು ಉತ್ಪಾದಿಸುವ ಔಷಧ ಕಂಪನಿ ಇಟ್ಟ ಹೆಸರು. ಅವುಗಳು ಬಹಳಷ್ಟು ಇವೆ. ಅಲ್ಲದೇ ಔಷಧಗಳ ಬ್ರಾಂಡ್ ಕೇಳುತ್ತ ಹೋಗುವುದಕ್ಕಿಂತ ಮೂಲ ಹೆಸರಲ್ಲೇ ಖರೀದಿಸಿದರೆ ನಮಗೆ ಹೆಚ್ಚು ಸುಲಭ ಬೆಲೆಯಲ್ಲೇ ಅವು ಸಿಗುತ್ತವೆ. ಈ ಪುಸ್ತಕದಲ್ಲಿ ಕೊಟ್ಟಿರುವ ಬ್ರಾಂಡ್ ಹೆಸರುಗಳಲ್ಲಿ (brand name), ಆದಷ್ಟು ಸ್ವದೇಶಿ ಔಷಧ ಕಂಪನಿಗಳದ್ದೇ. ಬಹುರಾಷ್ಟ್ರೀಯ ಔಷಧ ಕಂಪನಿಗಳ ಬ್ರಾಂಡ್ ಹೆಸರನ್ನು ಸಾಧ್ಯವಾದಷ್ಟು ಬಿಡಲಾಗಿದೆ.

ಪ್ರತಿಯೊಂದು ಔಷಧದ ಮಾಹಿತಿಯ ಜೊತೆಗೆ ಅದರ ಪ್ರಮಾಣ, ಸಿಗುವ ಬ್ರಾಂಡಿನ ಹೆಸರು ಮತ್ತು ಬೆಲೆಯನ್ನು ನೀವೇ ಬರೆಯಲು ಜಾಗ ಬಿಡಲಾಗಿದೆ. ಉದಾ: **ಟೆಟ್ರಾಸೈಕ್ಲಿನ್**ನ (Tetracycline) ಅತಿ ಕಡಿಮೆ ಬೆಲೆಯ ಬ್ರಾಂಡ್ ನಿಮ್ಮಲ್ಲಿ **ರೆಸ್ಟಿಕ್ಲಿನ್** (Resteclin) ಅಂತಿದ್ದರೆ ಅದನ್ನು ನೀವು ಕೆಳಗಿನಂತೆ ಬರೆದು ತುಂಬಬೇಕು.

ಹೆಸರು: ಕ್ಯಾಪ್ಸೂಲ್ ರೆಸ್ಟಿಕ್ಲಿನ್ (Capsule Resteclin) ಪ್ರಮಾಣ: ೨೫೦ ಮಿ.ಗ್ರಾ. ಮಾತ್ರೆಗಳಿಗೆ: ೧೦ ಬೆಲೆ: ರೂ ೭. ಪೈ. ೬೪

**–:ಸೂಚನೆ:–**


ಹಸಿರು ಪುಟಗಳಲ್ಲಿ ಕೊಟ್ಟಿರುವ ಎಲ್ಲಾ ಔಷಧಗಳೂ, ನಿಮ್ಮ ಹಳ್ಳಿಯ ಔಷಧ ಪೆಟ್ಟಿಗೆಯಲ್ಲಿ ಇರಬೇಕಾಗಿಲ್ಲ. ಯಾಕೆಂದರೆ, ಬೇರೆ ಬೇರೆ ಪ್ರದೇಶಗಳಲ್ಲಿ ಸಿಗುವ ಔಷಧಗಳು ಬೇರೆ ಇರಬಹುದು ಹಾಗೂ ಒಂದೇ ರೀತಿಯ ಕೆಲಸ ಮಾಡುವ ಅನೇಕ ಔಷಧಗಳು ಇರಬಹುದು. ಅದರೆ ನೆನಪಿಡಿ. :–

**ಕಡಿಮೆ ಔಷಧಗಳನ್ನು ಇಟ್ಟುಕೊಂಡು ಉಪಯೋಗಿಸುವುದೇ ಬುದ್ಧಿವಂತಿಕೆ.**

ಔಷಧ ಕೊಳ್ಳುವ ಮೊದಲು ಅದರ ಕೊನೆಯ ತಾರೀಖನ್ನು (Date of expiry) ಮರೆಯದೆ ನೋಡಿಕೊಳ್ಳಿ. ಹಾಗೆಯೇ ಔಷಧ ಕೊಡುವಾಗ ಕೊನೆಯ ತಾರೀಖು ಮುಗಿದಿದ್ದರೆ ಅಂಥವನ್ನು ಕೊಡಬೇಡಿ, ನಾಶಮಾಡಿ.


**ಔಷಧ ಪ್ರಮಾಣದ ಮಾಹಿತಿ:**

೧ ಮಾತ್ರೆ – ಒಂದು ಮಾತ್ರೆ




ಕೆಲವೊಮ್ಮೆ ೧/೨, ೧/೪ ಹೀಗೆ ಭಾಗ ಮಾಡುವುದನ್ನು ಬರೆಯುವ ಬಗೆ:–


೧/೨ ಮಾತ್ರೆ – ಮಾತ್ರೆಯ ಅರ್ಧ ಭಾಗ



೧ ೧/೨ ಮಾತ್ರೆ – ಒಂದು ಮತ್ತು ಅರ್ಧ



೧/೪ ಮಾತ್ರೆ – ಮಾತ್ರೆಯ ಕಾಲು ಭಾಗ



೧/೮ ಮಾತ್ರೆ – ಮಾತ್ರೆಯ ಎಂಟನೇ ಒಂದು ಭಾಗ (ಎಂಟು ಭಾಗ ಮಾಡಿ ಒಂದನ್ನು ತೆಗೆದುಕೊಳ್ಳುವುದು).



## ವ್ಯಕ್ತಿಯ ತೂಕದ ಮೇಲೆ ಔಷಧದ ಪ್ರಮಾಣ:–

ಹೆಚ್ಚಾಗಿ ವ್ಯಕ್ತಿಯ ವಯಸ್ಸಿನ ಆಧಾರದ ಮೇಲೆ ಔಷಧ ತೆಗೆದುಕೊಳ್ಳುವ ಪ್ರಮಾಣ ಹೇಳುತ್ತೇವೆ. ಮಕ್ಕಳು ದೊಡ್ಡವರಿಗಿಂತ ಕಡಿಮೆ ಪ್ರಮಾಣದ ಔಷಧ ನುಂಗುತ್ತಾರೆ. ಆದರೆ ಆಯಾ ವ್ಯಕ್ತಿಯ ತೂಕದ ಅಧಾರದ ಮೇಲೆ ಔಷಧ ಕೊಡುವುದು ಹೆಚ್ಚು ಯೋಗ್ಯ. ತೂಕ ಮಾಪನ ಸಾಮಗ್ರಿಗಳಿರುವ ಆರೋಗ್ಯ ಕಾರ್ಯಕರ್ತರಿಗೆ ಈ ಮಾಹಿತಿ ಉಪಯುಕ್ತ.

**೧೦೦ ಮಿ.ಗ್ರಾಂ/ಕೆ.ಜಿ./ದಿನಕ್ಕೆ** ಅಂದರೆ ಒಂದು ಕಿಲೋ ತೂಕಕ್ಕೆ ಒಂದು ದಿನಕ್ಕೆ ೧೦೦ ಮಿಲಿಗ್ರಾಂ ಎಂದರ್ಥ. ೨೪ ತಾಸುಗಳಲ್ಲಿ ವ್ಯಕ್ತಿಯ ಪ್ರತಿ ಒಂದು ಕೆ.ಜಿ.ಗೆ ೧೦೦ ಮಿ.ಗ್ರಾಮ್‌ನಂತೆ ಔಷಧ ಕೊಡಬೇಕು.

೩೬ ಕೆ.ಜಿ. ತೂಕದ ರ್‍ಯುಮಾಟಿಕ್ ಜ್ವರ ಇರುವ ಮಗುವಿಗೆ ಎಸ್ಪಿರಿನ್ (Aspirin) ಕೊಡಬೇಕು. ರ್‍ಯುಮಾಟಿಕ್ ಜ್ವರಕ್ಕೆ ಆ್ಯಸ್ಪಿರಿನ್ ಪ್ರಮಾಣ ೧೦೦ ಮಿ.ಗ್ರಾಂ/ಕೆ.ಜಿ./ದಿನ ಅಂದರೆ:

೧೦೦ಮಿ.ಗ್ರಾಂ * ೩೬ = ೩೬೦೦ ಮಿ.ಗ್ರಾಂ.

ಆ ಮಗುವಿಗೆ ೩೬೦೦ ಮಿ.ಗ್ರಾಂ. ಔಷಧ ಕೊಡಬೇಕು. ಒಂದು ಆ್ಯಸ್ಪಿರಿನ್ (Aspirin) ಮಾತ್ರೆ ೩೦೦ ಮಿ.ಗ್ರಾಂ. ಇರುತ್ತದೆ. ೩೬೦೦ ಮಿ.ಗ್ರಾಂ ಅಂದರೆ ೧೨ ಮಾತ್ರೆಗಳಾದವು. ಅಂದರೆ ಆ ಮಗುವಿಗೆ ದಿನಕ್ಕೆ ೬ ಬಾರಿ ಎರಡರಂತೆ ಮಾತ್ರೆ ಕೊಡಿ. ಔಷಧದ ಪ್ರಮಾಣ ತಿಳಿಯಲು ಇದು ಒಂದು ವಿಧಾನ. ೮ ನೇ ಅಧ್ಯಾಯದಲ್ಲೇ ಪ್ರಮಾಣದ ಕುರಿತು ಹೆಚ್ಚು ಮಾಹಿತಿ ಕೊಟ್ಟಿದೆ.

**ಸೂಚನೆ:** ಆರೋಗ್ಯ ಕಾರ್ಯಕ್ರಮ ಆಯೋಜಿಸಿ ತರಬೇತಿ ನೀಡುವುದು ಮತ್ತು ಹಳ್ಳಿಗಳಲ್ಲಿ ಈ ಪುಸ್ತಕ ವಿತರಣೆ ಮಾಡುವವರಿಗೆ;

ಈ ಪುಸ್ತಕವನ್ನು ಆರೋಗ್ಯ ಕಾರ್ಯಕ್ರಮದಲ್ಲಿ ಉಪಯೋಗಿಸುವುದಾದರೆ/ಅಥವಾ ಹಳ್ಳಿಯ ಆರೋಗ್ಯ ಕಾರ್ಯಕರ್ತರಲ್ಲೇ ಹಂಚಬೇಕಾದರೆ, **ಆಯಾ ಪ್ರದೇಶದಲ್ಲಿ ಸಿಗುವ ಬ್ರಾಂಡುಗಳು ಮತ್ತು ಅವುಗಳ ಬೆಲೆಯನ್ನು ಈ ಪುಸ್ತಕದಲ್ಲಿ ನಮೂದಿಸಿ ಕೊಡಬೇಕು.**

ಮಾಹಿತಿ ಇರುವ ಈ ಪುಟಗಳ ಪ್ರತಿಗಳನ್ನು ಮಾಡಿ ಪುಸ್ತಕದ ಜೊತೆಗೆ ಇಟ್ಟು ವಿತರಿಸಿದರೆ, ಪುಸ್ತಕ ಉಪಯೋಗಿಸುವವರು ಅದನ್ನು ಪುಸ್ತಕದಲ್ಲಿ ಬರೆದುಕೊಳ್ಳಬಹುದು. ಸಾಧ್ಯವಿದ್ದಲ್ಲಿ ಮೂಲ ಔಷಧ ಅಥವಾ ಅತಿ ಕಡಿಮೆ ಬೆಲೆಯ ಔಷಧ ಎಲ್ಲಿ ಸಿಗುತ್ತದೆಂಬ ಮಾಹಿತಿಯನ್ನು ಒದಗಿಸಿ.

# ಔಷಧಗಳ ಮಾಹಿತಿ

## ಜೀವಿರೋಧಕಗಳು

**ಪೆನಿಸಿಲಿನ್–**

**ಅತಿಮುಖ್ಯ ಜೀವಿರೋಧಕ**

ಪೆನಿಸಿಲಿನ್ ಅತಿ ಮುಖ್ಯವಾದ ಜೀವಿರೋಧಕ. ಕೀವನ್ನುಂಟು ಮಾಡುವ, ಮತ್ತಿತರ ಬ್ಯಾಕ್ಟೀರಿಯಾ ಸೋಂಕುಗಳ ವಿರುದ್ಧ ಇದು ಕೆಲಸ ಮಾಡುತ್ತದೆ. ಆದರೆ ವೈರಸ್ ಸೋಂಕಿನಿಂದ ಬರುವ ಭೇದಿ, ನೆಗಡಿ, ಗಣಜಿಲೆ, ಅಲ್ಲದೇ ತರಚಿದ್ದು, ಬೆನ್ನು ನೋವು ಇವುಗಳಗೆ ಅನುಪಯುಕ್ತ (೨೯–೩೦ನೇ ಪುಟಗಳನ್ನು ನೋಡಿ).

ಮಿ.ಗ್ರಾಂ ಅಥವಾ ಯುನಿಟ್‌ಗಳಲ್ಲಿ ಇದನ್ನು ಅಳೆಯುತ್ತಾರೆ.

ಪೆನಿಸಿಲಿನ್ ೨೫೦ ಮಿ.ಗ್ರಾಂ = ೪,೦೦,೦೦೦ ಯುನಿಟ್‌ಗಳು.

**ಅಪಾಯ/ಮುನ್ನೆಚ್ಚರಿಕೆಗಳು**

ಅತಿ ಹೆಚ್ಚು ಜನರಿಗೆ ಪೆನಿಸಿಲಿನ್ ಅತ್ಯಂತ ಕ್ಷೇಮಕರ ಔಷಧ. ಜಾಸ್ತಿ ಕೊಟ್ಟರೆ, ಹಣ ಹಾಳೇ ಹೊರತು ಅಪಾಯವಿಲ್ಲ. ಅತೀ ಕಡಿಮೆ ಕೊಟ್ಟರೆ ರೋಗ ಗುಣ ಆಗುವುದಿಲ್ಲ. ಬದಲಿಗೆ ಆ ಬ್ಯಾಕ್ಟೀರಿಯಾಗಳು ಇದಕ್ಕೆ ಪ್ರತಿರೋಧ ಬೆಳೆಸಿಕೊಳ್ಳುತ್ತದೆ. ಸಾಧಾರಣ ಅಲರ್ಜಿಯಿಂದ ಚರ್ಮದ ಮೇಲೆ ತುರಿಕೆಯಿರುವ ಗಂಧೆಗಳೇಳುತ್ತವೆ. ಇವು ಪೆನಿಸಿಲಿನ್ ಕೊಟ್ಟು ಅನೇಕ ತಾಸು/ದಿನಗಳ ನಂತರ ಕಾಣಿಸಿಕೊಂಡು ಕೆಲವು ದಿನ ಇರಬಹುದು. ತುರಿಕೆಗೆ ಎಂಟಿಹಿಸ್ಟಮಿನ್ ನುಂಗಬೇಕು.

ಅಪರೂಪಕ್ಕೆ ಪೆನಿಸಿಲಿನಿಂದ ಅಲರ್ಜಿ ಆಘಾತ ಆಗುತ್ತದೆ. ಪೆನಿಸಿಲಿನ್ ಚುಚ್ಚಿದ ಸ್ವಲ್ಪ ಹೊತ್ತಿಗೇ ರೋಗಿ ಒಮ್ಮೆಲೇ ಬಿಳಿಚಿಗೊಂಡು, ಉಸಿರಾಟ ಕಷ್ಟವಾಗಿ, ಆಘಾತಕ್ಕೊಳಗಾಗುತ್ತಾರೆ. (೯೭ ನೇ ಪುಟ). ತಕ್ಷಣ ಅಡ್ರೆನಾಲಿನ್ ಇಂಜೆಕ್ಷನ್ (Injection Adrenaline) ಕೊಡಿ. ಪೆನಿಸಿಲಿನ್ ಚುಚ್ಚುವ ಮೊದಲು ಪ್ರತಿಕ್ರಿಯಾ ಪರೀಕ್ಷೆ ಮಾಡಿಕೊಳ್ಳಿ (೯೭ ನೇ ಪುಟ).

ಪೆನಿಸಿಲಿನ್ ಚುಚ್ಚುವ ಪೂರ್ವದಲ್ಲಿ ಹತ್ತಿರವೇ ಅಡ್ರೆನಾಲಿನ್ ಇಂಜೆಕ್ಷನ್ (Injection Adrenaline) ತಯಾರಿಟ್ಟುಕೊಂಡಿರಬೇಕು.

ಒಮ್ಮೆ ಪೆನಿಸಿಲಿನ್ ಅಲರ್ಜಿ ತೋರಿಸಿದವರು ಮತ್ತೆ ಎಂದೂ ಪೆನಿಸಿಲಿನ್ ತೆಗೆದುಕೊಳ್ಳಬಾರದು, ಏಕೆಂದರೆ ಎರಡನೇ ಬಾರಿ ಅಲರ್ಜಿ ತುಂಬ ತೀವ್ರತೆಯಲ್ಲಿದ್ದು ಅವರನ್ನು ಕೊಂದೇ ಬಿಡಬಹುದು.

ಪೆನಿಸಿಲಿನ್ ಕೊಡಬಹುದಾದ ಬಹುತೇಕ ಎಲ್ಲಾ ಕಾಯಿಲೆಗಳಿಗೂ ಮಾತ್ರೆ ರೂಪದಲ್ಲಿ ಬೇರೆ ಜೀವಿರೋಧಕಗಳನ್ನು ಕೊಡಬಹುದು.

ಅತಿ ತೀವ್ರವಾದ, ಅತಿ ಭಯಂಕರವಾದ ಸೋಂಕು ರೋಗಗಳಿಗೆ ಮಾತ್ರ ಪೆನಿಸಿಲಿನ್ ಇಂಜೆಕ್ಷನ್ ಕೈಗೊಳ್ಳಿ.

ಪೆನಿಸಿಲಿನ್ ಕೊಡುವ ಮೊದಲು ೯೪ನೇ ಪುಟದಲ್ಲಿ ಹೇಳಿದ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನೂ ತೆಗೆದುಕೊಳ್ಳಿ.

**ಪೆನಿಸಿಲಿನ್‌ಗೆ ಪ್ರತಿರೋಧ**

ಕೆಲವೊಮ್ಮೆ ಪೆನಿಸಿಲಿನ್‌ನಿಂದ ಗುಣ ಆಗಬಹುದಾದ ಕಾಯಿಲೆಗೆ ಅದನ್ನು ಕೊಟ್ಟರೂ ಏನೂ ಗುಣ ಆಗುವುದೇ ಇಲ್ಲ. ಇದಕ್ಕೆ ಕಾರಣ ಆ ಬ್ಯಾಕ್ಟೀರಿಯಾಗಳು ಪೆನಿಸಿಲಿನ್‌ಗೆ ಪ್ರತಿರೋಧ ಬೆಳೆಸಿಕೊಂಡಿದ್ದು, ಪೆನಿಸಿಲಿನ್ ಔಷಧ ಅವಕ್ಕೇನೂ ಮಾಡಲಾರದು. ಇಂಪೆಟಿಗೋ, ಚರ್ಮದ ಮೇಲಿನ ಹುಣ್ಣುಗಳು, ಎಲುಬಿನ ಸೋಂಕುಗಳು ಇದಕ್ಕೆ ಉದಾಹರಣೆಗಳು.

ಈ ಸೋಂಕುಗಳು ಪೆನಿಸಿಲಿನ್‌ಗೆ ಗುಣ ತೋರಿಸದಿದ್ದರೆ ಬೇರೆ ಜೀವಿರೋಧಕ ಉಪಯೋಗಿಸಬಹುದು. ಅಥವಾ ಪೆನಿಸಿಲಿನ್‌ದೇ ಬೇರೆ ರೂಪವನ್ನು (ಉದಾ: ಕ್ಲೊಕ್ಸಾಸಿಲಿನ್ Cloxacillin, ಬದಲಿಗೆ ಡೈಕ್ಲೊಕ್ಸಾಸಿಲಿನ್ Dicloxacillin) ಕೊಟ್ಟರೆ ಸಹಾಯಕವಾಗಬಹುದು.

**ಎಚ್ಚರಿಕೆ:** ಚರ್ಮದ ಮೇಲೆ ಪೆನಿಸಿಲಿನ್ ಮುಲಾಮು ಹಚ್ಚಬೇಡಿ. ಅದರಿಂದ ದೇಹ ಪೆನಿಸಿಲಿನ್‌ಗೆ ಅಲರ್ಜಿ ಬೆಳೆಸಿಕೊಳ್ಳಬಹುದು. ಪೆನಿಸಿಲಿನ್‌ಗೆ ಪ್ರತಿರೋಧವನ್ನೂ ಬೆಳೆಸಿಕೊಳ್ಳಬಹುದು. ಮತ್ತೆ ಪೆನಿಸಿಲಿನ್ ಕೊಡಬೇಕಾದ ಸಂದರ್ಭದಲ್ಲಿ ಹೆಚ್ಚು ಪ್ರಮಾಣದ, ದುಬಾರಿಯದನ್ನು ಅತಿ ಸಾಧಾರಣ ಕಾಯಿಲೆಗೂ ಉಪಯೋಗಿಸಬೇಕಾಗಬಹುದು.

**ಪೆನಿಸಿಲಿನ್ ಇಂಜೆಕ್ಷನ್**

ಅತಿ ತೀವ್ರವಾದ ರೋಗಗಳಿಗೆ ಮಾತ್ರ ಪೆನಿಸಿಲಿನ್ ಇಂಜೆಕ್ಷನ್ ಕೂಡಬೇಕು. ಮೆನಿಂಜೈಟಿಸ್ (ಮಿದುಳು ಜ್ವರ), ಸೆಪ್ಟಿಸೀಮಿಯಾ, ಧನುರ್ವಾಯು, ಹುಣ್ಣಾದ ದೊಡ್ಡ ಗಾಯ, ಗ್ಯಾಂಗ್ರಿನ್ (ಕೊಳೆತ), ಎಲುಬಿಗೆ ಸೋಂಕು ಅಥವಾ ಚರ್ಮವು ಹರಿದು ಎಲುಬು ಮುರಿದಾಗ ಸೋಂಕು ತಡೆಯಲು, ಪರಮಾ (ಸಿಫಿಲಿಸ್) ಗಳಲ್ಲಿ ಪೆನಿಸಿಲಿನ್ ಇಂಜೆಕ್ಷನ್‌ಗಳು ಬೇರೆ ಬೇರೆ ರೀತಿಯಲ್ಲಿ ಬರುತ್ತವೆ. ಚುಚ್ಚುವ ಮೊದಲು ಎಷ್ಟಿದೆ ಮತ್ತು ಯಾವ ರೀತಿಯದು ಎಂಬ ಕಡೆ ಲಕ್ಷ್ಯವಿರಲಿ.

**ಸರಿಯಾದ ಪೆನಿಸಿಲಿನ್ ಇಂಜೆಕ್ಷನ್ ಆರಿಸುವುದು:–** ಕೆಲವು ಪೆನಿಸಿಲಿನ್ ಇಂಜೆಕ್ಷನ್ ಬಲು ಬೇಗ ಕೆಲಸ ಮಾಡುತ್ತವೆ. ಆದರೆ ಹೆಚ್ಚು ಕಾಲ ಪ್ರಭಾವ ಇರುವದಿಲ್ಲ. ಇನ್ನು ಕೆಲವು ನಿಧಾನ ಕೆಲಸ ಆರಂಭಿಸಿ ಬಹಳ ಕಾಲ ಪ್ರಭಾವ ಬಿರುವವು. ಕೆಲವೊಮ್ಮೆ ಇದು ಒಳ್ಳೆಯದು ಕೆಲವೂಮ್ಮೆ ಅದು, ಕಾಯಿಲೆ ಯಾವುದೆಂದರೆ ಮೇಲೆ ನಿರ್ಧಾರ ಮಾಡಿ.

**ಕಡಿಮೆ ಕಾಲ ಪ್ರಭಾವ ಬೀರುವಂಥ ಪೆನಿಸಿಲಿನ್:**

ಇದಕ್ಕೆ ಹೆಸರು ಅನೇಕ, ಕ್ರಿಸ್ಟಲೈನ್ ಪೆನಿಸಿಲಿನ್ (Crystalline penicillin): ಬೆನ್‌ಝೈಲ್ ಪೆನಿಸಿಲಿನ್ (Benzyl penicillin), ಸೊಲ್ಯುಬಲ್ ಪೆನಿಸಿಲಿನ್ (Soluble penicillin), ಸೋಡಿಯಂ ಪೆನಿಸಿಲಿನ್ (Sodium penicillin), ಪೆನಿಸಿಲಿನ್ ಜಿ (Penicillin G). ಇವೆಲ್ಲ ಬೇಗ ಕೆಲಸ ಮಾಡಿ ನಿಷ್ಕ್ರಿಯ ಆಗಿಬಿಡುವ ಗುಂಪಿಗೆ ಸೇರಿದವು.

ತೀವ್ರ ರೋಗಕ್ಕೆ ಹೆಚ್ಚಿನ ಪ್ರಮಾಣದ ಪೆನಿಸಿಲಿನ್ ಬೇಕಾಗಿದ್ದಾಗ ಇವು ಅತ್ಯುತ್ತಮ. ಉದಾಹರಣೆಗೆ ಗ್ಯಾಂಗ್ರಿನ್ ಮತ್ತು ಚರ್ಮ ಹರಿದು ಎಲುಬು ಮುರಿದಿರುವಾಗ.

**ಮಧ್ಯಮ ಕಾಲ ಪ್ರಭಾವ ಬೀರುವಂಥ ಪೆನಿಸಿಲಿನ್:** ಪ್ರೋಕೇನ್ ಪೆನಿಸಿಲಿನ್ (Procain penicillin), ಇವು ಒಂದು ದಿನದ ಕಾಲ ಪ್ರಭಾವ ಉಳಿಯುತ್ತದೆ, ಆದ್ದರಿಂದ ಪ್ರೋಕೆನ್ ಪೆನಿಸಿಲಿನ್‌ನ್ನು ದಿನಕ್ಕೆ ಒಂದು ಬಾರಿ ಕೊಡಬೇಕು. ಪ್ರೋಕೇನ್ ಪೆನಿಸಿಲಿನ್ ಹಾಗು ಮೇಲೆ ಹೇಳಿದ ಕಡಿಮೆ ಕಾಲ ಪ್ರಭಾವ ಬೀರುವಂಥ ಜಾತಿಯ ಪೆನಿಸಿಲಿನ್‌ಗಳನ್ನು ಜೊತೆಯಾಗಿ ಕೊಟ್ಟಾಗ ಸೋಂಕುಗಳಿಗೆ ಅತ್ಯುತ್ತಮ.

**ಬಹುಕಾಲ ಪ್ರಭಾವ ಬೀರುವ ಪೆನಿಸಿಲಿನ್:** ಬೆಂಝಥೀನ್ ಪೆನಿಸಿಲಿನ್ (Benzathine penicillin): ಇದು ಬಲು ನಿಧಾನವಾಗಿ ಕೆಲಸ ಪ್ರಾರಂಭಿಸಿ ಒಂದು ತಿಂಗಳ ಕಾಲ ತನ್ನ ಪ್ರಭಾವನ್ನಿಟ್ಟುಕೊಳ್ಳುತ್ತದೆ. ಸ್ಟ್ರೆಪ್ಟೋಕೋಕಲ್ ಬ್ಯಾಕ್ಟೀರಿಯಾ (ಇದು ಒಂದು ಜಾತಿಯ ಸೂಕ್ಷ್ಮ ಜೀವಾಣು) ಅಥವಾ ರ್‍ಯುಮಾಟಿಕ್ ಜ್ವರ ತಡೆಯವದಕ್ಕೆ ಇದು ಉತ್ತಮ. ದಿನವೂ ಮಾತ್ರೆ ನುಂಗಲು

ಮರೆಯುವವರು ಹಾಗು ಬಲು ದೂರದಿಂದ ಆರೋಗ್ಯ ಕೇಂದ್ರಕ್ಕೆ ಬರುವವರಿಗೆ ಇದು ಸಹಾಯಕ. ಸಾಧಾರಣ ಸೋಂಕಿಗೆ ಒಂದು ಇಂಜೆಕ್ಷನ್ ಸಾಕು. ಕೆಲವೊಮ್ಮೆ ಬೆಂಝಥಿನ್ ಪೆನಿಸಿಲಿನ್ ಬೇಗ ಪ್ರಭಾವ ಬೀರುವ ಪೆನಿಸಿಲಿನ್ ಜೊತೆಗೆ ಮಿಶ್ರವಾಗಿ ಬರಬಹುದು.

## ಕ್ರಿಸ್ಟಲೈನ್ ಪೆನಿಸಿಲಿನ್ (Crystalline penicillin):

(ಕಡಿಮೆ ಕಾಲ ಪ್ರಭಾವ ಬೀರುವಂಥಾದ್ದು)
ಜನಪ್ರಿಯ ಬ್ರಾಂಡ್ :
ಬೆಂಝೈಲ್ ಪೆನಿಸಿಲಿನ್ (Benzyl penicillin).
ನಿಮ್ಮ ಭಾಗದಲ್ಲಿ ಸಿಗುವ
ಬ್ರಾಂಡ್______ಪ್ರಮಾಣ_____ಬೆಲೆ______
ಹೆಚ್ಚಾಗಿ ೧೦,೦೦,೦೦೦ ಯುನಿಟ್ (೬೨೫ ಮಿ.ಗ್ರಾಂ.) ನದ್ದು ಇರುತ್ತದೆ.
**ಪ್ರಮಾಣ:** ಕಡಿಮೆ ಕಾಲ ಬೇಕಾಗುವ ಹಾಗೂ ತೀವ್ರ ಪ್ರಮಾಣದ ಯಾವುದೇ ಸೋಂಕಿಗೆ,
ಪ್ರತಿ ೪–೬ ತಾಸಿಗೊಮ್ಮೆ ಒಂದು ಇಂಜೆಕ್ಷನ್.

ಪ್ರತಿ ಇಂಜೆಕ್ಷನ್‌ನಲ್ಲಿ:
ದೊಡ್ಡವರಿಗೆ: ೫,೦೦,೦೦೦ ಯುನಿಟ್
೪–೧೨ ವಯಸ್ಸಿನವರಿಗೆ: ೧,೦೦,೦೦೦ ಯುನಿಟ್
೨–೩ ವಯಸ್ಸಿನವರಿಗೆ: ೫೦,೦೦೦ ಯುನಿಟ್
೧ ವರ್ಷದ ಒಳಗಿನವರಿಗೆ: ೫೦,೦೦೦ ಯುನಿಟ್ ದಿನಕ್ಕೆ ೨ ಬಾರಿ.

## ಪ್ರೋಕೇನ್ ಪೆನಿಸಿಲಿನ್ (Procain penicillin).

(ಮಧ್ಯಮ ಕಾಲ ಪ್ರಭಾವ ಬೀರುವ)
ಜನಪ್ರಿಯ ಬ್ರಾಂಡ್ : ಬಿಸ್ಟ್ರಪಿನ್ (Bistrepen).
ನಿಮ್ಮ ಭಾಗದಲ್ಲಿ ಸಿಗುವ ಬ್ರಾಂಡ್
ಹೆಸರು_____ಪ್ರಮಾಣ_____ಬೆಲೆ_____
ಅತಿ ತೀವ್ರವಲ್ಲದ ರೋಗಗಳಿಗೆ **ಪ್ರಮಾಣ:**
ದಿನಕ್ಕೆ ಒಂದು ಇಂಜೆಕ್ಷನ್
ಒಂದೊಂದು ಇಂಜೆಕ್ಷನ್‌ನಲ್ಲಿ,
ವಯಸ್ಕರಿಗೆ: ೩,೦೦,೦೦೦–೬,೦೦,೦೦೦ ಯುನಿಟ್
ಮಕ್ಕಳಿಗೆ: ೩,೦೦,೦೦೦ ಯುನಿಟ್
೩–೭ ವರ್ಷದವರಿಗೆ: ೧,೫೦,೦೦೦ ಯುನಿಟ್
೩ಕ್ಕಿಂತ ಕೆಳಗೆ ೭೫,೦೦೦ ಯುನಿಟ್

**ನವಜಾತ ಶಿಶುಗಳಿಗೆ ಕೊಡಬಾರದು.** ಎಂಪಿಸಿಲಿನ್ (Ampicillin) ಅಥವಾ ಬೇರೆ ಪೆನಿಸಿಲಿನ್ ಸಿಗದ ತುರ್ತು ಪರಿಸ್ಥಿತಿಯಲ್ಲಿ ಮಾತ್ರ ೭೫,೦೦೦ ಯುನಿಟ್ ಕೊಡಿ.

ಸೋಂಕು ಬಹಳ ತೀವ್ರವಾಗಿದ್ದರೆ ಇದರ ಎರಡು ಪಟ್ಟು ಪ್ರಮಾಣ ಉಪಯೋಗಿಸಿ. ಆದರೆ ಕಡಿಮೆ ಕಾಲ ಪ್ರಭಾವ ಇರುವಂಥವುಗಳೇ ಉತ್ತಮ.
ಪ್ರೊಕೇನ್ ಪೆನಿಸಿಲಿನ್ (Procain penicillin) + ಕಡಿಮೆ ಕಾಲ ಪ್ರಭಾವದ ಪೆನಿಸಿಲಿನ್ ಎರಡರ ಸಂಯುಕ್ತವು ಸೋಂಕು ತೀವ್ರವಾಗಿದ್ದಾಗ ಉತ್ತಮ.

## ಬೆಂಝಥೀನ್ ಪೆನಿಸಿಲಿನ್ (Benzathine penicillin)

(ಹೆಚ್ಚು ಕಾಲ ಪ್ರಭಾವ ಬೀರುವಂಥಾದ್ದು)
ಜನಪ್ರಿಯ ಬ್ರಾಂಡ್:
ಪೆನ್‌ಕೋಂ (Pencom),
ಪೆನಿಡ್ಯೂರ್ (Penidure).
ನಿಮ್ಮ ಭಾಗದಲ್ಲಿ ಸಿಗುವ ಬ್ರಾಂಡ್ ಹೆಸರು______ಪ್ರಮಾಣ_________ಬೆಲೆ___
**ಪ್ರಮಾಣ:** ಸಾಧಾರಣ ಮತ್ತು ಅತಿ ತೀವ್ರವಲ್ಲದ ಸೋಂಕುಗಳಿಗೆ ೪ ವಾರಕ್ಕೆ ೧ ಇಂಜೆಕ್ಷನ್
ಒಂದೇ ಇಂಜೆಕ್ಷನ್ ಸಾಕಾಗಬಹುದು.

ದೊಡ್ಡವರಿಗೆ–೬,೦೦,೦೦೦–೧೨,೦೦,೦೦೦ ಯುನಿಟ್‌ಗಳು
೮–೧೨ ವರ್ಷದ ಮಕ್ಕಳು–೩,೦೦,೦೦೦–೬,೦೦,೦೦೦ ಯುನಿಟ್‌ಗಳು
೩–೭ ವರ್ಷದ ಮಕ್ಕಳು–೧,೫೦,೦೦೦–೩,೦೦,೦೦೦ ಯುನಿಟ್‌ಗಳು
೧–೩ ವರ್ಷದ ಮಕ್ಕಳು–೧,೫೦,೦೦೦ ಯುನಿಟ್‌ಗಳು
೧ ವರ್ಷಕ್ಕಿಂತ ಕೆಳಗಿನವರಿಗೆ ಕೊಡಬಾರದು.

**ರ್‍ಯುಮಾಟಿಕ್ ಜ್ವರಕ್ಕೆ:**

**ಚಿಕಿತ್ಸೆ:** ೧೨ ವರ್ಷದೊಳಗಿನ ಮಗುವಿಗೆ ರ್‍ಯುಮಾಟಿಕ್ ಜ್ವರವಿದ್ದರೆ ಪ್ರೊಕೇನ್ ಪೆನಿಸಿಲಿನ್ (Procain penicillin) ಕೊಡಿ. ೩,೦೦,೦೦೦ ಯುನಿಟ್‌ಗಳು.
೧೨ ವರ್ಷದ ಮೇಲಿನವರಿಗೆ ದಿನಕ್ಕೆ ೧ ರಂತೆ ೧೦ ದಿನಗಳ ವರೆಗೆ ೬,೦೦,೦೦೦ ಯುನಿಟ್ ಗಳು

ಮುಂದೆ ಸೋಂಕು ಮತ್ತೆ ಬಾರದಂತೆ ತಡೆಯಲು ಬೆಂರಘುಥೀನ್ ಪೆನಿಸಿಲಿನ್ ೬,೦೦,೦೦೦ – ೯,೦೦,೦೦೦ ಯುನಿಟ್ ಗಳು ತಿಂಗಳಿಗೆ ಒಮ್ಮೆ.

ಪರಮಾ (ಸಿಫಿಲಿಸ್) ರೋಗಕ್ಕೆ ಬೆಂರಘುಥೀನ್ ಪೆನಿಸಿಲಿನ್ ಉತ್ತಮ.

೨೪,೦೦,೦೦೦ ಯುನಿಟ್‌ಗಳು ಬೆಂರಘುಥೀನ್ ಪೆನಿಸಿಲಿನ್ ಒಮ್ಮೆ, ಒಂದೊಂದು ಬದಿಯ ಸೊಂಟಕ್ಕೂ ೧/೨–೧/೨ ಕೊಡಿ. ಇದೇ ರೀತಿ ವಾರಕ್ಕೊಮ್ಮೆಯಂತೆ ೩ ವಾರ ಕೊಡಿ.

## ಎಂಪಿಸಿಲಿನ್ (Ampicillin) ಮತ್ತು ಎಮೋಕ್ಸಿಸಿಲಿನ್ (Amoxicillin)

(ಬ್ರಾಡ್ ಸ್ಪೆಕ್ಟ್ರಂ ಪೆನಿಸಿಲಿನ್).

ಜನಪ್ರಿಯ ಎಂಪಿಸಿಲಿನ್ ಬ್ರಾಂಡ್:

ರೋಸ್ಸಿಲಿನ್ (Roscillin),

ಡಾಬ್‌ಸಿಲಿನ್ (Dabcillin).

ಜನಪ್ರಿಯ ಎಮೋಕ್ಸಿಸಿಲಿನ್ ಬ್ರಾಂಡ್:

ಮೊಕ್ಸ (Mox),

ನೋವೊಮೊಕ್ಸ (Novamox).

ನಿಮ್ಮ ಭಾಗದಲ್ಲಿ ಸಿಗುವ ಬ್ರಾಂಡ್

ಹೆಸರು________ಪ್ರಮಾಣ_______ಬೆಲೆ______

ಬೇರೆ ಪೆನಿಸಿಲಿನ್‌ಗಳು ಕೊಲ್ಲುವುದಕ್ಕಿಂತ ಹೆಚ್ಚು ಜಾತಿಯ ಬ್ಯಾಕ್ಟೀರಿಯಾಗಳನ್ನು ಕೊಲ್ಲುವ ಪೆನಿಸಿಲಿನ್ ಇದು. ಅದಕ್ಕೆ ಬ್ರಾಡ್ ಸ್ಪೆಕ್ಟ್ರಂ ಪೆನಿಸಿಲಿನ್ ಎನ್ನುತ್ತಾರೆ. ಇನ್ನಾವುದೆ ಬ್ರಾಡ್ ಸ್ಪೆಕ್ಟ್ರಂ ಜೀವಿರೋಧಕಕ್ಕಿಂತ ಇದು ಕ್ಷೇಮಕರ. ಶಿಶುಗಳಿಗೆ ಅತ್ಯಂತ ಉಪಯುಕ್ತ.

ಇದು ದುಬಾರಿ. ಕೆಲವೊಮ್ಮೆ ಭೇದಿ ಉಂಟುಮಾಡುವುದರಿಂದ ಬೇರೆ ಪೆನಿಸಿಲಿನ್ ಉಪಯೋಗಿಸಬಹುದಾದ ಕಡೆ ಇದನ್ನು ಉಪಯೋಗಿಸಬೇಡಿ.

ಎಂಪಿಸಿಲಿನ್ ಮಾತ್ರೆಗಳು ಬಲು ಚೆನ್ನಾಗಿ ಕೆಲಸ ಮಾಡುತ್ತವೆ. ಕಾರಣ ಮೆನಿಂಜೈಟಿಸ್, ಪೆರಿಟೋನೈಟಿಸ್, ಅಪೆಂಡಿಸೈಟಿಸ್ ಮುಂತಾದ ಅತಿ ತೀವ್ರ ರೋಗಗಳಿಗೆ ಮಾತ್ರ ಇಂಜೆಕ್ಷನ್ ಉಪಯೋಗಿಸಿ. ನುಂಗುತ್ತಲೇ ವಾಂತಿ ಮಾಡುವ ಅಥವಾ ನುಂಗಲಿಕ್ಕೆ ಸಾಧ್ಯವಿಲ್ಲದ ರೋಗಿಗಳಿಗೆ ಇಂಜೆಕ್ಷನ್ ಎಂಪಿಸಿಲಿನ್ (Injection Ampicillin) ಕೊಡಬಹುದು.

ಈ ಕೆಳಗಿನ ರೋಗಕ್ಕೆ ಇದು ಉಪಯುಕ್ತ.

ನವಜಾತ ಶಿಶುಗಳಲ್ಲಿ ಸೆಪ್ಟಿಸೀಮಿಯಾ ಅಥವಾ ಹೇಳಲಾಗದ ಕಾಯಿಲೆಗಳಿಗೆ, ೬ ವರ್ಷದೊಳಗಿನವರಲ್ಲಿ ನ್ಯುಮೋನಿಯಾ ಮತ್ತು ಕಿವಿ ಬೇನೆಯೊಂದಿಗೆ ಜ್ವರ ಅಥವಾ ಅತಿ ತೀವ್ರ ಭೇದಿ ಆಗಿದ್ದರೆ, ಜ್ವರ ಇಲ್ಲದ ಸಾಧಾರಣ ಭೇದಿಗೆ ಎಂಪಿಸಿಲಿನ್ ಅಥವಾ ಎಮೋಕ್ಸಿಸಿಲಿನ್ ಉಪಯೋಗಿಸಬೇಡಿ.

ತೀವ್ರ ಭೇದಿ ಅಥವಾ ರಕ್ತ ಭೇದಿ–ಜ್ವರ, ಮೆನಿಂಜೈಟಿಸ್, ಟೈಫಾಯಿಡ್ ಜ್ವರ (ಕ್ಲೋರಂಫೆನಿಕಾಲ್ ಉಪಯೋಗಿಸಿ ರೋಗವನ್ನು ಹತೋಟಿಗೆ ತಂದ ನಂತರ, ಅಥವಾ ರೋಗ ಕ್ಲೋರಂಫೆನಿಕಾಲ್‌ಗೆ ಪ್ರತಿರೋಧ ಬೆಳೆಸಿಕೊಂಡಿದ್ದರೆ).

ಎಂಪಿಸಿಲಿನ್‌ಗೆ ಅಥವಾ ಎಮೋಕ್ಸಿಸಿಲಿನ್‌ಗೆ ಒಮ್ಮೆ ಅಲರ್ಜಿ ತೋರಿಸಿದವರು ಮತ್ತೆಂದೂ ಅದನ್ನು ತೆಗೆದುಕೊಳ್ಳಬಾರದು. (ಪೆನಿಸಿಲಿನ್‌ನ ಅಪಾಯ ಮತ್ತು ಮುನ್ನೆಚ್ಚರಿಕೆ: ಹಿಂದಿನ ಪುಟ ನೋಡಿ).

### ಎಂಪಿಸಿಲಿನ್ ಪ್ರಮಾಣ (ಡೋಸ್)

ಸಾಮಾನ್ಯವಾಗಿ ದ್ರಾವಣ ರೂಪದಲ್ಲಿ ಲಭ್ಯ.

೧೨೫ ಅಥವಾ ೨೫೦ ಮಿ.ಗ್ರಾಂ. ೧ ಟೀ ಚಮಚ

ಕ್ಯಾಪ್ಸೂಲ್ ೨೫೦ ಮಿ.ಗ್ರಾಂ

ಇಂಜೆಕ್ಷನ್ ೫೦೦ ಮಿ.ಗ್ರಾಂ

### ಎಮೋಕ್ಸಿಸಿಲಿನ್ (Amoxycillin)

ಇದು ಸಾಮಾನ್ಯವಾಗಿ ಕ್ಯಾಪ್ಸುಲ್ ಅಥವಾ ಮಾತ್ರೆ ರೂಪದಲ್ಲಿ ಲಭ್ಯ ಕ್ಯಾಪ್ಸೂಲ್ ಅಥವಾ ಮಾತ್ರೆ:

೨೫೦ ಅಥವಾ ೫೦೦ ಮಿ.ಗ್ರಾಂ

ದ್ರಾವಣ: ೧೨೫ ಮಿ.ಗ್ರಾಂ ೫ ಎಂ.ಎಲ್ ನಲ್ಲಿ

ಅಥವಾ ೨೫೦ ಮಿ.ಗ್ರಾಂ ೫ ಎಒ.ಎಲ್ ನಲ್ಲಿ.

**ಪ್ರಮಾಣ (ಡೋಸ್):–**
ಬಾಯಿಯ ಮುಖಾಂತರ (ಕೆಜಿಗೆ/ ದಿನಕ್ಕೆ/೨೫ ರಿಂದ ೫೦ ಮಿ.ಗ್ರಾಂ/
ಕ್ಯಾಪ್ಸೂಲ್ ೨೫೦ ಮಿ.ಗ್ರಾಮ್‌ನವು,
ದ್ರವ ರೂಪದಲ್ಲಿದ್ದರೆ ಪ್ರತಿ ೧ ಟೀ ಚಮಚದಲ್ಲಿ ೧೨೫ ಮಿ.ಗ್ರಾಂ.
ಎಂಪಿಸಿಲಿನ್ ದಿನಕ್ಕೆ ೪ ಬಾರಿ ಕೊಡಿ.
ಎಮೋಕ್ಸಿಸಿಲಿನ್ ದಿನಕ್ಕೆ ೩ ಬಾರಿ ಕೊಡಿ.
**ಪ್ರತಿಯೊಂದು ಸಲ ಕೆಳಗೆ ಹೇಳಿದ ಪ್ರಮಾಣ ಕೊಡಿ;–**
ದೊಡ್ಡವರು–೨ ಕ್ಯಾಪ್ಸೂಲ್ (೫೦೦ ಮಿ.ಗ್ರಾಂ)
ಮಕ್ಕಳು ೮–೧೨ ವರ್ಷ– ೧ ಕ್ಯಾಪ್ಸೂಲ್ ಅಥವಾ ೧ ಅಥವಾ ೨ ಟೀ ಚಮಚ (೨೫೦ ಮಿಗ್ರಾಂ).
ಮಕ್ಕಳು ೩–೭ ವರ್ಷ: ೧/೨ ಕ್ಯಾಪ್ಸೂಲ್ ಅಥವಾ ೧ ಟೀ ಚಮಚ (೧೨೫ ಮಿ.ಗ್ರಾಂ).
ಮಕ್ಕಳು ೩ ವರ್ಷದ ಕೆಳಗೆ: ೧/೪ ಕ್ಯಾಪ್ಸೂಲ್ ಅಥವಾ ೧/೨ ಟೀ ಚಮಚ.
ನವಜಾತ ಶಿಶುಗಳು– ೩ ವರ್ಷದವರ ಹಾಗೆ.

ಇಂಜೆಕ್ಷನ್: ತೀವ್ರ ಸೋಂಕಿಗೆ (ಉದಾಹರಣೆ ಮೆನಿಂಜೈಟಿಸ್‌ಗೆ) ಕೆ.ಜಿ.ಗೆ/ದಿನಕ್ಕೆ/೫೦–೧೦೦ ಮಿ.ಗ್ರಾಂ/
–ಕೆ.ಜಿ.ಗೆ/ದಿನಕ್ಕೆ/ ೩೦೦ ಮಿ.ಗ್ರಾಂ
೫೦೦ ಮಿ.ಗ್ರಾಂ ಟ್ಯೂಬಿನಲ್ಲಿ ಲಭ್ಯ.
೬ ತಾಸಿಗೊಂದರಂತೆ ದಿನಕ್ಕೆ ೪ ಬಾರಿ.

**ಒಂದೊಂದು ಡೋಸ್ ನಲ್ಲಿ,**
ವಯಸ್ಕರು– ೫೦೦ ರಿಂದ ೧೦೦೦ ಮಿ. ಗ್ರಾಂ (೫೦೦ ಮಿ.ಗ್ರಾ. ನ ೧ ಅಥವಾ ೨ ಕಿರು ಸೀಸೆ ಅಥವಾ ಟ್ಯೂಬಿನಲ್ಲಿ ಅಥವಾ ವಯಲ್‌ಗಳಲ್ಲಿ ಸಿಗುತ್ತವೆ).
ಮಕ್ಕಳು ೮–೧೨ ವರ್ಷ: ೨೫೦ ಮಿ.ಗ್ರಾಂ (೫೦೦ ಮಿ.ಗ್ರಾಂ ನ ಅರ್ಧ ಟ್ಯೂಬು).
ಮಕ್ಕಳು ೩–೭ ೧೨೫ ಮಿ.ಗ್ರಾಂ (೨೫೦ ಮಿ.ಗ್ರಾ. ನ ೧/ ೪ ಟ್ಯೂಬು).
ಮಕ್ಕಳು ೩ ವರ್ಷದ ಕೆಳಗೆ ೬೨ ಮಿ.ಗ್ರಾಂ (೧/೮ ಭಾಗ ೫೦೦ ಮಿ.ಗ್ರಾಂ ಟ್ಯೂಬು)
ನವಜಾತ ಶಿಶು– ೧೨೫ ಮಿ.ಗ್ರಾ. (೫೦೦ ಮಿ.ಗ್ರಾಂ ನ ೧/೨ ವಯಲ್ ದಿನಕ್ಕೆ ಎರಡು ಬಾರಿ ಮಾತ್ರ)

ಸೋಂಕಿನ ಲಕ್ಷಣ ಮಾಯವಾದ ನಂತರವೂ ೨ ದಿನಗಳ ವರೆಗೆ ಎಂಪಿಸಿಲಿನ್ ಕೊಡುತ್ತಿರಿ.

### ಸ್ಟ್ರೆಪ್ಟೋಮೈಸಿನ್ ಜೊತೆ ಪೆನಿಸಿಲಿನ್ (Streptomycin with Penicillin)

ಸ್ಟ್ರೆಪ್ಟೋಮೈಸಿನ್ (Streptomycin) ಕ್ಷಯ ರೋಗಕ್ಕೆ ಉಪಯುಕ್ತ ಔಷಧ, ಇದನ್ನು ಕ್ಷಯವಲ್ಲದೇ ಬೇರೆ ರೋಗಕ್ಕೆ ಪೆನಿಸಿಲಿನ್ (Penicillin) ಜೊತೆ ಸೇರಿಸಿ ಕೊಡುತ್ತಿದ್ದರೆ ಆಸುಪಾಸಿನ ಕ್ಷಯದ ರೋಗಾಣುಗಳು ಸ್ಟ್ರೆಪ್ಟೋಮೈಸಿನ್ (Streptomycin)ಗೆ ಪ್ರತಿರೋಧ ಬೆಳೆಸಿಕೊಂಡು ಬಿಡುತ್ತವೆ. ಮುಂದೆ ಅಲ್ಲಿ ಯಾರಿಗಾದರೂ ಕ್ಷಯ ತಗುಲಿತೆಂದರೆ ಆತನಿಗೆ ಕ್ಷಯ ಗುಣಪಡಿಸಲು ಇನ್ನೂ ಹೆಚ್ಚಿನ ದುಬಾರಿಯ ಔಷಧಗಳು ಬೇಕಾಗುತ್ತವೆ.
**ಯಾವುದೇ ರೋಗಕ್ಕೂ ಪೆನಿಸಿಲಿನ್ ಜೊತೆಗೆ ಸ್ಟ್ರೆಪ್ಟೋಮೈಸಿನ್ ಸೇರಿಸಿ ಕೊಡಬೇಡಿ.**

### ಎರಿಥ್ರೋಮೈಸಿನ್ (Erythromycin)

**(ಪೆನಿಸಿಲಿನ್‌ಗೆ ಬದಲೀ ಔಷಧ.)**

ಜನಪ್ರಿಯ ಬ್ರಾಂಡುಗಳು:
ಆಲ್‌ಥ್ರೋಸಿನ್ (Althrocin),
ಥ್ರೊಮೈಸಿನ್ (Thromycin) ಹಾಗು
ಎರಿಥ್ರೊಮೈಸಿನ್ (Erythromycin).

ನಿಮ್ಮ ಭಾಗದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______
ಪೆನಿಸಿಲಿನ್‌ಗೆ ಅಲರ್ಜಿ ಇರುವವರಿಗೆ ಇದನ್ನು ಕೊಡಬಹುದು. ಆದರಿದು ಬಲು ದುಬಾರಿ ಔಷಧ. ಇದು ಹೆಚ್ಚು ಕ್ಷೇಮಕರ ಔಷಧವಾದರೂ ಬೇಕಾದ ಪ್ರಮಾಣಕ್ಕಿಂತ ಜಾಸ್ತಿ ಕೊಡಬಾರದು. ೨ ವಾರಕ್ಕಿಂತ ಜಾಸ್ತಿ ಉಪಯೋಗಿಸಿದರೆ ಕಾಮಾಲೆ ಆಗುವ ಸಾಧ್ಯತೆ ಇದೆ. ಹೊಟ್ಟೆಯಲ್ಲಿ ಗಡಿಬಿಡಿ ಆಗದಂತೆ ಮಾಡಲು ಇದನ್ನು ಊಟದ ಜೊತೆ ತೆಗೆದುಕೊಳ್ಳಬೇಕು.

**ಪ್ರಮಾಣ (ಡೋಸ)**
ಪೆನಿಸಿಲಿನ್‌ಗೆ ಅಲರ್ಜಿ ಇರುವವರಿಗೆ,
ದಿನಕ್ಕೆ ೪ ಡೋಸ್ ಕೊಡಿ.

ಒಂದೊಂದು ಡೋಸ್ ನಲ್ಲಿ;
ವಯಸ್ಕರಿಗೆ–೫೦೦ ಮಿ.ಗ್ರಾ. (೨ ಮಾತ್ರೆ)
ಮಕ್ಕಳಿಗೆ ೮–೧೨ ವರ್ಷ–೨೫೦ ಮಿ.ಗ್ರಾಂ (೨ ಮಾತ್ರೆ ಅಥವಾ ೨ ಟೀ ಚಮಚ)
ಮಕ್ಕಳಿಗೆ ೩–೭ ವರ್ಷ–೧೫೦ ಮಿ.ಗ್ರಾಂ (೧/೨ ಮಾತ್ರೆ ಅಥವಾ ೧ ಟೀ ಚಮಚ)
೩ ವರ್ಷದೊಳಗಿನ ಮಕ್ಕಳಿಗೆ–೭೫–೧೫೦ ಮಿ.ಗ್ರಾಂ. (೧/೨ ಅಥವಾ ೧/೨ ಟೀ ಚಮಚ)

## <u>ಟೆಟ್ರಾಸೈಕ್ಲಿನ್ (Tetracycline)</u>

**(ಬ್ರಾಡ್ ಸ್ಪೆಕ್ಟ್ರಂ ಜೀವಿರೋಧಕ)**

ಜನಪ್ರಿಯ ಬ್ರಾಂಡುಗಳು:
ರೆಸ್ಟಿಕ್ಲಿನ್ (Resteclin),
ಥ್ರಿಯೋಸೈಕ್ಲಿನ್ (Threocycline).

ನಿಮ್ಮ ಭಾಗದಲ್ಲಿಯ ಬ್ರಾಂಡ್
ಹೆಸರು________ಪ್ರಮಾಣ______ಬೆಲೆ______

ಇದು ಕ್ಯಾಪ್ಸೂಲ್ ರೂಪದಲ್ಲಿ ಬರುತ್ತದೆ.
ಅನೇಕ ಜಾತಿಯ ಬ್ಯಾಕ್ಟೀರಿಯಾಗಳನ್ನು ಕೊಲ್ಲಲು ಟೆಟ್ರಾಸೈಕ್ಲಿನ್‌ಗಳನ್ನು ಉಪಯೋಗಿಸಬಹುದು. (ಬ್ರಾಡ್ ಸ್ಪೆಕ್ಟ್ರಂ)
ಇದನ್ನು ಇಂಜೆಕ್ಟ್ ಮಾಡಿದಾಗ ಬಾಯಿಂದ ಮಾತ್ರೆ ತೆಗೆದುಕೊಂಡಷ್ಟೇ ಪರಿಣಾಮಕಾರಿ. ಮಾತ್ರೆ ನುಂಗಿದರೆ ಸುರಕ್ಷಿತ. ಅದರಿಂದ ಯಾವ ತೊಂದರೆಯೂ ಇಲ್ಲದಿರುವದರಿಂದ ಮಾತ್ರೆ ನುಂಗುವುದೇ ಲೇಸು.
ಇದನ್ನು ಉಪಯೋಗಿಸಬಹುದಾದ ಕಾಯಿಲೆಗಳು:
ಬ್ಯಾಕ್ಟೀರಿಯಾ, ಅಮೀಬಾಗಳಿಂದ ಅಗುವ ಭೇದಿ, ರಕ್ತ ಭೇದಿಗಳು, ಸೈನೋಸೈಟಿಸ್, ಶ್ವಾಸಕೋಶದ ರೋಗಗಳು (ಬ್ರಾಂಕೈಟಿಸ್ ಮುಂತಾದವು),
ಮೂತ್ರನಾಳದ ಸೋಂಕು, ಕಾಲರಾ, ಟ್ರೈಕೋಮಾನಾಸ್ ಹಾಗು ಈಸುಬುಡ್ಡಿಯ ರೋಗಗಳು.
**ನೆಗಡಿಗೆ ಇದು ಅಪ್ರಯೋಜಕ.** ಪೆನಿಸಿಲಿನ್‌ನಂತೆ ಅನೇಕ ರೋಗಗಳಿಗೂ ಇದು ಪ್ರಯೋಜನವಿಲ್ಲ ಮತ್ತು ದುಬಾರಿಯೂ ಆಗಿರುವುದರಿಂದ ಬಹಳಷ್ಟು ಉಪಯೋಗಿಸಬಾರದು.

**ಅಪಾಯ ಮತ್ತು ಮುನ್ನೆಚ್ಚರಿಕೆ:**

೧. ೪ ತಿಂಗಳ ನಂತರ ಗರ್ಭಿಣಿಯರು ಟೆಟ್ರಾಸೈಕ್ಲಿನ್ ತೆಗೆದುಕೊಂಡರೆ ಶಿಶುವಿಗೆ ಹಲ್ಲು ಕಪ್ಪಾಗುವುದಲ್ಲದೇ ಹಾಳೂ ಆಗಬಹುದು.

೨. ಬಹಳ ದಿನಗಳ ಕಾಲ ತೆಗೆದುಕೊಂಡರೆ ಹೊಟ್ಟೆಯಲ್ಲಿ ತೊಂದರೆಯಾಗಿ ಭೇದಿ ಶುರುವಾಗುತ್ತದೆ.

೩. ಹಳೆಯ, ಅವಧಿ (date of expiry) ಮುಗಿದುಹೋದ ಟೆಟ್ರಾಸೈಕ್ಲಿನ್, ಮೂತ್ರ ಪಿಂಡವನ್ನು ಹಾಳು ಮಾಡುವುದರಿಂದ ಅವನ್ನು ತೆಗೆದುಕೊಳ್ಳಬಾರದು.

೪. ಪುಷ್ಟಿಗೇಡಿ ಮಗುವಿಗೆ ಕೊಟ್ಟರೆ ಅದರ ತೂಕ ಇನ್ನಷ್ಟು ಇಳಿಯುವುದು.

**ಪ್ರಮಾಣ (ಡೋಸ್):**

(೨೦–೪೦ ಮಿ.ಗ್ರಾಂ./ಕೆ.ಜಿ./ದಿನಕ್ಕೆ)–೨೫೦ ಮಿ.ಗ್ರಾಂ. ಕ್ಯಾಪ್ಸೂಲ್‌ಗಳು.
ದಿನಕ್ಕೆ ೪ ಬಾರಿ ಬಾಯಿಯ ಮೂಲಕ ಕೊಡಬೇಕು.
ಟೆಟ್ರಾಸೈಕ್ಲಿನ್ ದೇಹದಲ್ಲಿ ಪೂರ್ತಿ ಉಪಯೋಗ ಆಗಬೇಕೆಂದರೆ ಅದನ್ನು ತೆಗೆದುಕೊಂಡ ಒಂದು ಗಂಟೆ ಹಾಲು, ಎಂಟಾಸಿಡ್ (Antacid), ಕಬ್ಬಿಣಾಂಶದ ಮಾತ್ರೆಗಳನ್ನು ಸೇವಿಸಬಾರದು. ಸೋಂಕುಗಳು ಗುಣವಾಗಿ ೧–೨ ದಿನಗಳವರೆಗೂ ಟೆಟ್ರಾಸೈಕ್ಲಿನ್ ನುಂಗಬೇಕು. ಕೆಲವು ಜಾತಿಯ ಭೇದಿಗಳಿಗೂ ಇದು ಔಷಧವಾಗಬಹುದು. (ಭೇದಿಗೆ ಔಷಧಗಳು–೧೮೭–೧೮೯ ನೇ ಪುಟಗಳನ್ನು ನೋಡಿ).
ಪರಮಾ (ಸಿಫಿಲಿಸ್ ಅಥವಾ ಗೊನೋರಿಯಾ) ರೋಗಿಗಳಿಗೆ ಪೆನಿಸಿಲಿನ್ ಅಲರ್ಜಿ ಹೊಂದಿದ್ದರೆ ಅವರಿಗೆ ಈ ಕೆಳಗಿನಂತೆಯೇ ಟೆಟ್ರಾಸೈಕ್ಲಿನ್ ಕ್ಯಾಪ್ಸೂಲ್ (Capsule Tetracycline) ಕೊಡಿ.
ಪರಮಾ– ಒಮ್ಮೆ ಎರಡು ಕ್ಯಾಪ್ಸೂಲ್/ದಿನಕ್ಕೆ ನಾಲ್ಕು ಬಾರಿ/೨ ದಿನಗಳು
ಟೆಟ್ರಾಸೈಕ್ಲಿನ್ ಮುಲಾಮನ್ನು ಚರ್ಮದ ಸೋಂಕು ಅಥವಾ ಗಾಯಕ್ಕೆ ಉಪಯೋಗಿಸಿದರೆ ಅಲರ್ಜಿಯ ಪ್ರತಿಕ್ರಿಯೆ ಕಾಣಿಸಬಹುದು. ರವೆಗಣ್ಣಿಗೆ ಟೆಟ್ರಾಸೈಕ್ಲಿನ್ ಮುಲಾಮು ಉಪಯುಕ್ತ.

## ಕ್ಲೋರಂಫೆನಿಕಾಲ್
## (Chloramphenical)
## ಕ್ಲೋರೋಮೈಸಿಟಿನ್
## (Chloromycetin)

**(ಟೈಫಾಯಿಡ್ ನ ಜೀವಿರೋಧಕ.)**

ಜನಪ್ರಿಯ ಬ್ರಾಂಡ್ ಗಳು:
ಪೆರಾಕ್ಸಿನ್ (Paraxin),
ರೆಕ್ಲೋರ್ (Reclor).

ನಿಮ್ಮ ಭಾಗದಲ್ಲಿಯ ಬ್ರಾಂಡ್
ಹೆಸರು____ಪ್ರಮಾಣ_____ಬೆಲೆ______

ಇದೂ ಕೂಡ ಬಹಳಷ್ಟು ಜಾತಿಯ ರೋಗಾಣುಗಳನ್ನು ಕೊಲ್ಲಬಲ್ಲ ಜೀವಿರೋಧಕ. ಕಡಿಮೆ ಬೆಲೆಯದು ಆದರೆ ಬಹಳ ಉಪಯೋಗಿಸಿದರೆ ಅಪಾಯವೂ ಇರುವುದರಿಂದ ಕಡಿಮೆ ಉಪಯೋಗಿಸಬೇಕು.

ಕ್ಲೋರಂಫೆನಿಕಾಲ್‌ನ್ನು ಟೈಫಾಯಿಡ್‌ಗೆ ಮಾತ್ರ ಉಪಯೋಗಿಸಬೇಕು.

ಪೆನಿಸಿಲಿನ್ (Penicillin), ಟೆಟ್ರಾಸೈಕ್ಲಿನ್ (Tetracycline), ಎಂಪಿಸಿಲಿನ್ (Ampicillin) ಯಾವುದರಿಂದಲೂ ಗುಣವಾಗದ ತೀವ್ರ ಸೋಂಕಿಗೆ ಬಳಸಬಹುದು.

ಟೈಫಾಯಿಡ್ ಒಂದರ ಹೊರತಾಗಿ ಇನ್ನು ಎಲ್ಲಾ ಬ್ಯಾಕ್ಟೀರಿಯಾ ಸೋಂಕುಗಳಿಗೂ ಎಂಪಿಸಿಲಿನ್, ಕ್ಲೋರಂಫೆನಿಕಾಲ್‌ಗಿಂತ ಉತ್ತಮ ಮತ್ತು ಕ್ಷೇಮಕರ. ಆದರೆ ಎಂಪಿಸಿಲಿನ್ ಬಹಳ ದುಬಾರಿಯಾದ್ದರಿಂದ ಅದರ ಬದಲು ಕ್ಲೋರಂಫೆನಿಕಾಲ್ ಉಪಯೋಗಿಸಬೇಕಾಗುತ್ತದೆ.

**ಎಚ್ಚರಿಕೆ: ಕೆಲವರ ರಕ್ತಕ್ಕೆ ಕ್ಲೋರಂಫೆನಿಕಾಲ್ ಹಾನಿಕರ. ನವಜಾತ, ಇನ್ನೂ ದಿನ ತುಂಬದೆ ಹುಟ್ಟಿದ ಮಕ್ಕಳಿಗೆ ಅದು ಇನ್ನೂ ಅಪಾಯಕಾರಿ. ನವಜಾತ ಶಿಶುಗಳ ತೀವ್ರ ಸೋಂಕು ರೋಗಕ್ಕೆ ಕ್ಲೋರಂಫೆನಿಕಾಲ್ ಕೊಡಬೇಡಿ.** ಕ್ಲೋರಂಫೆನಿಕಾಲ್ ಬದಲಿಗೆ ಎಂಪಿಸಿಲಿನ್‌ನನ್ನೇ ಕೊಡಿ. ೧ ತಿಂಗಳೊಳಗಿನ ಶಿಶುಗಳಿಗೆ ಕ್ಲೋರಫೆನಿಕಾಲ್ ಕೊಡಬೇಡಿ.

ಕ್ಲೋರಂಫೆನಿಕಾಲ್‌ನ್ನೆಂದೂ ಹೇಳಿದ ಪ್ರಮಾಣಕ್ಕಿಂತ ಜಾಸ್ತಿ ಕೊಡಬೇಡಿ. ಪದೇ ಪದೇ ಬಹಳ ಕಾಲ ಇದನ್ನು ಉಪಯೋಗಿಸಬೇಡಿ.

ಟೈಫಾಯಿಡ್ ಕ್ಲೋರಂಫೆನಿಕಾಲ್‌ನಿಂದ ಹತೋಟಿಗೆ ಬರುತ್ತಲೇ ಕ್ಲೋರಂಫೆನಿಕಾಲ್‌ನ್ನು ಬಿಟ್ಟು ಎಂಪಿಸಿಲಿನ್ ಆರಂಭಿಸಿ. (ಕ್ಲೋರಂಫೆನಿಕಾಲ್‌ಗೆ ಟೈಫಾಯಿಡ್ ಗುಣ ಕಾಣುತ್ತಿಲ್ಲವೆಂದರೆ ಆ ಪ್ರದೇಶದಲ್ಲಿರುವ ಎಲ್ಲಾ ಟೈಫಾಯಿಡ್ ರೋಗಿಗಳಿಗೂ ಎಂಪಿಸಿಲಿನ್‌ನ್ನೇ ಕೊಡಬೇಕು).

ಕ್ಲೋರಂಫೆನಿಕಾಲ್ ಮಾತ್ರೆ ಇಂಜಕ್ಷನ್‌ಗಿಂತ ಪರಿಣಾಮಕಾರಿ ಮತ್ತು ಕಡಿಮೆ ಅಪಾಯಕಾರಿ. ರೋಗಿಗೆ ನುಂಗಲಿಕ್ಕೂ ಸಾಧ್ಯವಿಲ್ಲದಾಗ ಮಾತ್ರ ಇಂಜೆಕ್ಷನ್ ಕೊಡಿ.

**ಪ್ರಮಾಣ (ಡೋಸ);**

ವಯಸ್ಕರು–೫೦೦–೧೦೦೦ ಮಿ.ಗ್ರಾಂ (೨–೪ ಕ್ಯಾಪ್ಸೂಲ್‌ಗಳು. ಟೈಫಾಯಿಡ್, ಪೆರಿಟೋನೈಟಿಸ್ ಮತ್ತು ಇನ್ನಾವುದೇ ತೀವ್ರ ಸೋಂಕಿದ್ದರೆ ಹೆಚ್ಚಿನ ಪ್ರಮಾಣದಲ್ಲಿ ಕೊಡಬೇಕು, ದಿನಕ್ಕೆ ೪ ಬಾರಿ ೩–೪ ರಂತೆ).

ಮಕ್ಕಳು ೮–೧೨ ವರ್ಷ ೨೫೦ ಮಿ.ಗ್ರಾಂ. (೧ ಕ್ಯಾಪ್ಸೂಲ್ ಅಥವಾ ೨ ಚಮಚ ದ್ರಾವಣ).

ಮಕ್ಕಳು ೩–೭ ವರ್ಷ: ೧೨೫ ಮಿ.ಗ್ರಾಂ. (೧/೨ ಕ್ಯಾಪ್ಸೂಲ್ ಅಥವಾ ೧ ಚಮಚ ದ್ರವ)

೧ ತಿಂಗಳ–೨ ವರ್ಷ–೨೫ ಮಿ.ಗ್ರಾಂ. (೧/೫ ಚಮಚ ಅಥವಾ ೧/೧೦ ಭಾಗ ಕ್ಯಾಪ್ಸೂಲ್/೧ ಕೆ.ಜಿ. ತೂಕಕ್ಕೆ) (೫ ಕೆಜಿ ಮಗುವಿಗೆ ೧೨೫ ಮಿಲಿಗ್ರಾಂ ಅಥವಾ ೧ ಟೀ ಚಮಚ ಅಥವಾ ೧/೨ ಕ್ಯಾಪ್ಸೂಲ್ ಪ್ರತಿ ದಿನ.)

ಇಷ್ಟನ್ನು ನಾಲ್ಕು ಭಾಗ ಮಾಡಿ. ಒಂದೊಂದು ಭಾಗದಲ್ಲಿ ಮಗುವಿಗೆ ೧/೨ ಕ್ಯಾಪ್ಸೂಲ್ ಅಥವಾ ೧/೪ ಚಮಚ ದ್ರವ ಸಿಗುತ್ತದೆ.

**ಕೊ-ಟ್ರೈಮೊಕ್ಸಿಜ಼ೊಲ್**
**(ಸಲ್ಫಾಮೆಥೋಕ್ಸಿರ್ಸೊಲ್ ಜೊತೆ**
**ಟ್ರೈಮೆಥೋಪ್ರಿಂ).**
**Co-trimoxazole (Sulphamethoxazole**
**+ Trimethoprim** 5:1 ratio).

ಜನಪ್ರಿಯ ಬ್ರಾಂಡ್‌ಗಳು:
ಸಿಪ್ಲಿನ್ (Ciplin),
ಕೊಸುಲ್ಫ್ ಎಸ್‌ಎಸ್ (Cosulf SS),
ಬ್ಯಾಕ್ಟ್ರಿಂ (Bactrim).

ನಿಮ್ಮ ಭಾಗದಲ್ಲಿಯ ಬ್ರಾಂಡ್
ಹೆಸರು_____ಪ್ರಮಾಣ_______ಬೆಲೆ_____.

**ಸಾಮಾನ್ಯವಾಗಿ ಹೀಗೆ ಲಭ್ಯ:**
೧೦೦ ಮಿ.ಗ್ರಾಂ ಸಲ್ಫಾಮೆಥೋಕ್ಸಿರ್ಸೊಲ್ ಜೊತೆ ೨೦ ಮಿ.ಗ್ರಾಂ ಟ್ರೈಮೆಥೋಪ್ರಿಂ ಮಾತ್ರೆ.
೪೦೦ ಮಿ.ಗ್ರಾಂ ಸಲ್ಫಾಮೆಥೋಕ್ಸಿರ್ಸೊಲ್ ಜೊತೆ ೮೦ ಮಿ.ಗ್ರಾಂ ಟ್ರೈಮೆಥೋಪ್ರಿಂ ಮಾತ್ರೆ.
೨೦೦ ಮಿ.ಗ್ರಾಂ ಸಲ್ಫಾಮೆಥೋಕ್ಸಿರ್ಸೊಲ್ ಜೊತೆ ೪೦ ಮಿ.ಗ್ರಾಂ ಟ್ರೈಮೆಥೋಪ್ರಿಂ ಪ್ರತಿ ೫ ಎಂ.ಎಲ್ ನಲ್ಲಿ, ದ್ರವ ರೂಪದಲ್ಲಿ.
ಈ ಔಷಧಿ ಎರಡು ಪಟ್ಟು ಪ್ರಮಾಣದಲ್ಲಿ ಕೂಡಾ ಲಭ್ಯ. ಉದಾಹರಣೆ ಬ್ಯಾಕ್ಟ್ರಿಂ ಡಿ ಎಸ್ (Bactrim DS), ಸಿಪ್ಲಿನ್ ಡಿ ಎಸ್ (Cipiln DS). ೮೦೦ ಮಿ.ಗ್ರಾಂ ಸಲ್ಫಾಮೆಥೋಕ್ಸಿರ್ಸೊಲ್ ಜೊತೆ ೧೬೦ ಮಿ.ಗ್ರಾಂ ಟ್ರೈಮೆಥೋಪ್ರಿಂ ಇರುತ್ತದೆ. ಡಿ ಎಸ್ (DS) ಮಾತ್ರೆ, ಇದಲ್ಲಿ ಅರ್ಧ ಮಾತ್ರ ಕೊಡಿ.
ಈ ಸಂಯುಕ್ತ ಔಷಧಿ ಹಲವಾರು ಗುಂಪಿನ ಬ್ಯಾಕ್ಟೀರಿಯಾಗಳನ್ನು ನಾಶ ಮಾಡುತ್ತದೆ.

**ಗರ್ಭಿಣಿಯರು ಮೊದಲನೆ ೩ ತಿಂಗಳಲ್ಲಿ ಇದನ್ನು ಸೇವಿಸಬಾರದು.**
ಈ ರೋಗಗಳಿಗೆ ಉಪಯೋಗಿಸಬಹುದು:-
ಮೂತ್ರನಾಳದ ಸೋಂಕಿಗೆ
ಜ್ವರದ ಒಟ್ಟಿಗೆ ರಕ್ತ ಭೇದಿ.
ಟೈಫಾಯಿಡ್ ಜ್ವರ.
ಕಾಲರಾ.
ನ್ಯುಮೋನಿಯಾ (ಶ್ವಾಸಕೋಶದ ತೀವ್ರ ಸೋಂಕು).
ಇಂಪೆಟಿಗೋ (ಚರ್ಮದ ತೀವ್ರ ಸೋಂಕು).
ಕಿವಿಯ ಸೋಂಕು.
ಗೊನೋರಿಯಾ ಹಾಗು ಶೆಂಕ್ರಾಯಿಡ್.

**ಪ್ರಮಾಣ (ಡೋಸು):**
೪೦೦ ಮಿ.ಗ್ರಾಂ ಸಲ್ಫಾಮೆಥೋಕ್ಸಿರ್ಸೊಲ್ ಜೊತೆ ೮೦ ಮಿ.ಗ್ರಾಂ ಟ್ರೈಮೆಥೋಪ್ರಿಂ ಅಥವಾ ಟೀ ಚಮಚ ಮೇಲೆ ಹೇಳಿದ ಪ್ರಕಾರ:-
ಪ್ರತಿ ದಿವಸ ೨ ಸಾರೆ ಕೊಡಬೇಕು. ಪ್ರತಿ ಬಾರಿ ಹೀಗೆ ಕೊಡಿ:
ದೊಡ್ಡವರಲ್ಲಿ ಹಾಗು ೧೨ ವರ್ಷದ ಮೇಲಿನವರಿಗೆ: ೨ ಗುಳಿಗೆಗಳು ಅಥವಾ ೪ ಟೀ ಚಮಚ
೯-೧೨ ವರ್ಷ: ೧ ೧/೨ ಮಾತ್ರೆ ಅಥವಾ ೩ ಟೀ ಚಮಚ.
೪-೮ ವರ್ಷ: ೧ ಮಾತ್ರೆ ಅಥವಾ ೨ ಟೀ ಚಮಚ.
೧-೩ ವರ್ಷ: ೧/೨ಮಾತ್ರೆ ಅಥವಾ ೧ ಟೀ ಚಮಚ.
**೧ ವರ್ಷಕ್ಕಿಂತ ಚಿಕ್ಕ ಮಗುವಿಗೆ ಕೊಡಬೇಡಿ.**
ಅತಿ ಆವಶ್ಯವಿದ್ದಲ್ಲಿ ೧/೪ ಮಾತ್ರೆ ಅಥವಾ ೧/೨ ಟೀ ಚಮಚ, ದಿವಸಕ್ಕೆ ಎರಡು ಬಾರಿ ಕೊಡಿ.
ಮೂತ್ರಕೋಶದ ಸೊಂಕಿಗೆ ಇದೇ ಪ್ರಮಾಣದಲ್ಲಿ ೧೦ ರಿಂದ ೧೪ ದಿವಸ ಕೊಡಿ. ಬ್ರೊಂಕೈಟಿಸ್ ಹಾಗು ಟೈಫಾಯಿಡ್‌ಗೆ ೧೪ ದಿವಸ ಕೊಡಿ. ಶೆಂಕ್ರಾಯಿಡ್, ೭ ದಿವಸ ಕೊಡಿ.

**ಕೆನಾಮೈಸೀನ್ ಹಾಗು ಜೇಂಟಾಮೈಸಿನ್**
**(Kanamycin, Gentamicin).**
ಇವು ಕೇವಲ ಇಂಜೆಕ್ಷನ್ ರೂಪದಲ್ಲಿ ಲಭ್ಯ.
ಇವುಗಳನ್ನು ಅತ್ಯಂತ ಜಾಗರೂಕತೆಯಿಂದ ಉಪಯೋಗಿಸಬೇಕು. ಏಕೆಂದರೆ ಅನಾವಶ್ಯಕ ಬಳಕೆಯಿಂದ ಕಿವುಡುತನ ಹಾಗು ಮೂತ್ರ ಪಿಂಡಕ್ಕೆ ಹಾನಿ ಆಗಬಹುದು. ಅದಲ್ಲದೆ ಜೀವಿರೋಧಕಗಳು ಬಹು ಬೇಗನೆ ಪ್ರತಿರೋಧ ಬೆಳೆಸಿಕೊಂಡು ಬಿಡುತ್ತವೆ. ಅದುದರಿಂದ ನುರಿತ ಆರೋಗ್ಯ ಕಾರ್ಯಕರ್ತರು ಮಾತ್ರ ಇದನ್ನು ಉಪಯೋಗಿಸಬೇಕು.

**ಕೆನಾಮೈಸೀನ್** (Kanamycin):-
ಜನಪ್ರಿಯ ಬ್ರಾಂಡ್:
ಕಾನ್ಸಿನ್ (Kancin).

ನಿಮ್ಮ ಭಾಗದಲ್ಲಿಯ ಬ್ರ್ಯಾಂಡ್
ಹೆಸರು____ಪ್ರಮಾಣ______ಬೆಲೆ______.
ಸಾಮಾನ್ಯವಾಗಿ ಹೀಗೆ ಲಭ್ಯ:
೭೫ ಮಿ.ಗ್ರಾಂ, ೫೦೦ ಮಿ.ಗ್ರಾಂ, ಅಥವಾ ೧೦೦೦ ಮಿ.ಗ್ರಾಂ ದ್ರವ ಇರುವ ಟ್ಯೂಬ್‌ನಲ್ಲಿ.

**ಎಚ್ಚರಿಕೆ:- ಹೆಚ್ಚು ಪ್ರಮಾಣದಲ್ಲಿ ಹಾಗು ಬಹಳ ದಿವಸ ಉಪಯೋಗಿಸಿದರೆ ಕಿವುಡತನ ಆಗುತ್ತದೆ. ಕಿವಿಯಲ್ಲಿ ಗುಂಯ್‌ಗುಡುತ್ತಿದರೆ, ಔಷಧವನ್ನು ತಕ್ಷಣ ನಿಲ್ಲಿಸಿ.**

## ಕ್ಷಯದ ಔಷಧಗಳು

ಕ್ಷಯಕ್ಕೆ ೨-೩ ಅಥವಾ ೪ ರೀತಿಯ ಕ್ಷಯ ರೋಗದ ಔಷಧ ತೆಗೆದುಕೊಳ್ಳುತ್ತಿರಬೇಕು. ಒಂದೇ ರೀತಿಯ ಔಷಧ ಸೇವಿಸುತ್ತಿದ್ದರೆ ಕ್ಷಯದ ಬ್ಯಾಕ್ಟೀರಿಯಾಗಳು ಆ ಔಷಧಕ್ಕೆ ಪ್ರತಿರೋಧ ಬೆಳೆಸಿಕೊಂಡು ರೋಗ ಗುಣ ಮಾಡುವುದು ಇನ್ನೂ ಕಷ್ಟವಾಗುತ್ತದೆ.

ರೋಗ ಮತ್ತೆ ಬಾರದಂತೆ ಅದನ್ನು ಕನಿಷ್ಟ ೬ ರಿಂದ ೯ ತಿಂಗಳವರೆಗೆ ಅತವಾ ಇನ್ನೂ ಜಾಸ್ತಿ ಕಾಲ ಸೇವಿಸಬೇಕು. ಯಾವ ಯಾವ ಔಷಧಗಳ ಮಿಶ್ರವನ್ನು ಉಪಯೋಗಿಸುತ್ತಿದ್ದೀರೆನ್ನುವುದರ ಆಧಾರದ ಮೇಲೆ ಚಿಕಿತ್ಸೆ ಅದೆಷ್ಟು ಕಾಲ ಮಾಡಬೇಕೆನ್ನುವುದು ಅವಲಂಬಿಸಿರುತ್ತದೆ. ರೋಗವು ಪುನಃ ಹಿಂತಿರುಗಿ ಬರಬಾರದೆಂದರೆ ಧೀರ್ಘ ಕಾಲದ ಚಿಕಿತ್ಸೆಯು ಅತ್ಯಂತ ಮುಖ್ಯ.

ಕೆಲವು ಕ್ಷಯ ಔಷಧಗಳು ಬಹಳ ದುಬಾರಿ. ಉದಾ: ರಿಫಾಂಫಿಸಿನ್ (Rifampicin), ಪೈರಿಝಿನಮೈಡ್ (Pyrazinamide), ಎಥಾಂಬುಟಾಲ್ (Ethamutol), ಆದರೆ ಪ್ರಾಥಮಿಕ ಅರೋಗ್ಯ ಕೇಂದ್ರಗಳಲ್ಲಿ ಅಥವಾ ಅರೋಗ್ಯ ಕೇಂದ್ರದ ಕಾರ್ಯಕರ್ತನಿಂದ ಕ್ಷಯ ರೋಗ ಪರೀಕ್ಷೆ ಮತ್ತು ಔಷಧಗಳು ಪುಕ್ಕಟೆಯಾಗಿ ಸಿಗುತ್ತಿರುತ್ತವೆ.

ರೋಗದ ಬ್ಯಾಕ್ಟೀರಿಯಾಗಳು ಔಷಧಕ್ಕೆ ಪ್ರತಿರೋಧ ಬೆಳೆಸಿಕೊಳ್ಳುವ ಸಂಭವವಿರುತ್ತದೆ, ಆಗ ಔಷಧಗಳನ್ನು ಬದಲಾಯಿಸಬೇಕಾಗಬಹುದು. ಇದಕ್ಕೆ ಅನುಭವಿ ಆರೋಗ್ಯ ಕಾರ್ಯಕರ್ತರ ಮಾರ್ಗದರ್ಶನ ಕ್ಷಯದ ಚಿಕಿತ್ಸೆಯಲ್ಲಿ ಅತ್ಯಗತ್ಯ. ಇನ್ನು ಕೆಲವು ಚಿಕಿತ್ಸಾ ರೀತಿಯಲ್ಲಿ ವಾರಕ್ಕೆ ಮೂರು ದಿವಸ ಮಾತ್ರ ಔಷಧವನ್ನು ಕೊಡಲಾಗುತ್ತದೆ.

ಕ್ಷಯ ರೋಗ ಚಿಕಿತ್ಸೆಯಲ್ಲಿ ಐಸೋನಿಯಾಝಿಡ್ (ಐ.ಎನ್.ಎಚ್) ನ್ನು (Isoniazid, INH) ಉಪಯೋಗಿಸಲೇ ಬೇಕು. ರಿಫಾಂಫಿಸಿನ್ (Rifampicin) ಬಹಳ ಪರಿಣಾಮಕಾರಿಯಾದ ಔಷಧಿಯಾದುದರಿಂದ ಅದನ್ನೂ ಉಪಯೋಗಿಸಬೇಕು. ಎಥಾಂಬುಟಾಲ್ (Ethamutol) ಮತ್ತು ಸ್ಟ್ರೆಪ್ಟೋಮೈಸಿನ್ (Streptomycin) ಇವುಗಳನ್ನೂ ಕ್ಷಯ ರೋಗದ ಚಿಕಿತ್ಸೆಯಲ್ಲಿ ಉಪಯೋಗಿಸುತ್ತಾರೆ. ಐ.ಎನ್.ಎಚ್ (I.N.H) ಜೊತೆಗೆ ಪೈರಿಝಿನಮೈಡ್(Pyrazinamide) ಅಥವಾ ರಿಫಾಂಫಿಸಿನ್ (Rifampicin) ಗಳನ್ನು ಒಟ್ಟಾಗಿ ಸೇವಿಸುವುದರಿಂದ ಚಿಕಿತ್ಸೆಯ ಕಾಲ ಕಡಿಮೆ ಮಾಡಬಹುದು. ಥಿಯಾಸಿಟಾಸೋನ್ (Thiacetazone) ಒಂದು ಕಡಿಮೆ ಬೆಲೆಯ ಔಷಧ ಆದರೆ ಇದರಿಂದ ಅಡ್ಡ ಪರಿಣಾಮಗಳು ಬಹಳವಾಗಿ ಬಹಳಷ್ಟು ರೋಗಿಗಳಿಗೆ ಅದನ್ನು ಉಪಯೋಗಿಸಲು ಕಷ್ಟವಾಗುತ್ತದೆ.

ಔಷಧದಿಂದಾಗಿ ತುರಿಕೆ, ಕಾಮಾಲೆ, ಅಥವಾ ಹೊಟ್ಟೆ ನೋವುಗಳು ಶುರುವಾದುವೆಂದರೆ ಆರೋಗ್ಯ ಕಾರ್ಯಕರ್ತರನ್ನು ಕಂಡು ಔಷಧ'ವನ್ನು ಬದಲಾಯಿಸಬೇಕೋ ಅಥವಾ ಪ್ರಮಾಣವನ್ನು (ಡೋಸ್) ಬದಲಾಯಿಸಬೇಕೋ ಕೇಳಿ. ಮೈ ತುಂಬ ಗುಳ್ಳೆಗಳು ಏಳಲಾರಂಭಿಸಿದವೆಂದರೆ ಆರೋಗ್ಯ ಕಾರ್ಯಕರ್ತರನ್ನು ಕಾಣುವವರೆಗೆ ಔಷಧವನ್ನು ನಿಲ್ಲಿಸಬೇಕು. ಕ್ಷಯ ರೋಗಕ್ಕೆ ಚಿಕಿತ್ಸೆ, ಅದರಲ್ಲೂ ಐ.ಎನ್.ಎಚ್ (I.N.H), ತೆಗೆದುಕೊಳ್ಳುತ್ತಿರುವಾಗ ಸೆರೆ ಅಥವಾ ಸಾರಾಯಿ ಕುಡಿಯಬಾರದು.

### ಚಿಕಿತ್ಸೆ

ನಿಮ್ಮಲ್ಲಿ ಯಾವ ಔಷಧಗಳು ಸಿಗುತ್ತವೆ, ಅವುಗಳ ಬೆಲೆಯೇನು, ಯಾವುದು ದುಬಾರಿಯಲ್ಲ ಎನ್ನುವುದನ್ನೆಲ್ಲ ನೋಡಿ ಈ ಕೆಳಗಿನಂತೆ ಔಷಧಗಳ ಸಂಯುಕ್ತಗಳನ್ನು ನೀವು ತೆಗೆದುಕೊಳ್ಳಬಹುದು.

೧. ಮೊದಲ ೨ ತಿಂಗಳು ಐಸೋನಿಯರಿಝಿಡ್ (ಐ.ಎನ್.ಎಚ್) (Isoniazid, I.N.H), ರಿಫಾಂಫಿಸಿನ್ (Rifampicin), ಇಥಾಂಬುಟಾಲ್ (Ethambutol) ಮತ್ತು ಪೈರಿಝಿನಮೈಡ್ (Pyrazinamide) ಗಳ ಸಂಯುಕ್ತವನ್ನು ಕೊಡಿ. ನಂತರ ಪೈರಿಝಿನಮೈಡ್ ನ್ನು (Pyrazinamide) ನಿಲ್ಲಿಸಿ. ರಿಫಾಂಫಿಸಿನ್ (Rifampicin), ಐಸೋನಿಯಾಸಿಡ್ (Isoniazide) ಮತ್ತು ಎಥಾಂಬುಟಾಲ್ (Ethamutol) ಗಳನ್ನು ಇನ್ನೂ ನಾಲ್ಕು ತಿಂಗಳಕಾಲ ಮುಂದುವರೆಸಿ.

೨. ಐಸೋನಿಯಾರಿಝಿಡ್, ರಿಫಾಂಫಿಸಿನ್, ಎಥಾಂಬುಟಾಲ್‌ಗಳನ್ನು ೯ ತಿಂಗಳ ಕಾಲ ಕೊಡಿ.

೩. ಐಸೋನಿಯಾರಿಝಿಡ್, ರಿಫಾಂಫಿಸಿನ್ , ಸ್ಟ್ರೆಪ್ಟೋಮೈಸಿನ್ ಮತ್ತು ಪೈರಿಝಿನಮೈಡ್ ಸಂಯುಕ್ತವನ್ನು ೨ ತಿಂಗಳು ಕೊಡಿ. ನಂತರ ಎಥಾಂಬುಟಾಲ್, ಸ್ಟ್ರೆಪ್ಟೋಮೈಸಿನ್ ಅಥವಾ ಥಿಯಾಸಿಟಾರೋನ್ (Thiacetazone) ಗಳನ್ನು ೬ ತಿಂಗಳು ಕೊಡಿ. ಇದರಲ್ಲಿ ರಿಫಾಂಫಿಸಿನ್ ಕಡಿಮೆ ತೆಗೆದುಕೊಳ್ಳುವುದರಿಂದ ಈ ಚಿಕಿತ್ಸೆಯು ಸ್ವಲ್ಪ ಕಡಿಮೆ ಬೆಲೆಯದಾಗುತ್ತದೆ.

೪. ರಿಫಾಂಫಿಸಿನ್ ಬಹಳ ದುಬಾರಿ ಅಥವಾ ಸಿಗುತ್ತಿಲ್ಲವೆನಿಸಿದರೆ ಎಥಾಂಬುಟಾಲ್, ಐಸೋನಿಯಾರಿಝಿಡ್, ಸ್ಟ್ರೆಪ್ಟೋಮೈಸಿನ್‌ಗಳ ಸಂಯುಕ್ತವನ್ನು ೨ ತಿಂಗಳು ಅಥವಾ ಕಫದಲ್ಲಿ (ಎಂಜಲಿನಲ್ಲಿ ಅಲ್ಲಾ) ಕ್ಷಯದ ರೋಗಾಣುಗಳು ಮರೆಯಾಗುವವರೆಗೆ ಕೊಡಿ. ನಂತರ ಸ್ಟ್ರೆಪ್ಟೋಮೈಸಿನ್‌ನ್ನು ೨ ತಿಂಗಳು, ಆ ನಂತರ ಐ.ಎನ್.ಎಚ್ ಮತ್ತು ಎಥಾಂಬುಟಾಲ್‌ಗಳನ್ನು ಒಂದು ವರ್ಷ ಕಾಲ ಕೊಡಿ.

೫. ಗರ್ಭಿಣಿಯರಲ್ಲಿ ಕ್ಷಯವಿದ್ದರೆ ನುರಿತ ಆರೋಗ್ಯಕಾರ್ಯಕರ್ತರನ್ನೇ ಕಾಣಬೇಕು. ಅದಾಗದಿದ್ದರೆ ಐಸೋನಿಯಾಸಿಡ್ ಮತ್ತು ಎಥಾಂಬುಟಾಲ ಅಥವಾ ಐಸೋನಿಯಾರಿಝಿಡ್ ಮತ್ತು ರಿಫಾಂಫಿಸಿನ್ ಅಥವಾ ಥಿಯಾಸಿಟಾರೋನ್‌ಗಳ ಸಂಯುಕ್ತವನು ೧೮ ತಿಂಗಳುಗಳ ಕಾಲ ಕೊಡಿ. ಜೊತೆಗೆ ಪ್ರತಿ ದಿನ ೫೦ ಮಿ.ಗ್ರಾಂ ವಿಟಮಿನ್ ಬಿ೬ (Vitamin B6) ನ್ನು ಕೊಡಿ. **ಪೈರಿಝಿನಮೈಡ್ (Pyrazinamide) ಅಥವಾ ಸ್ಟ್ರೆಪ್ಟೋಮೈಸಿನ್ ಗಳನ್ನು ಗರ್ಭಿಣಿಯರಿಗೆಂದೂ ಕೊಡಬೇಡಿ.**

## <u>ಐಸೊನಿಯಾರಿಝಿಡ್ (ಐ.ಎನ್.ಎಚ್) (Isoniazid, I.N.H, Isonicotinic acid hydrazide).</u>

ಜನಪ್ರಿಯ ಬ್ರಾಂಡ್:
ಐಸೋಕಿನ್ (Isokin),
ಎರ್ಬಝೈಡ್ (Erbazide).
ನಿಮ್ಮ ಭಾಗದಲ್ಲಿಯ
ಹೆಸರು_____ಪ್ರಮಾಣ____ಬೆಲೆ___
೧೦೦ ಅಥವಾ ೩೦೦ ಮಿ.ಗ್ರಾಂ. ಮಾತ್ರೆಯ ರೂಪದಲ್ಲಿ ಬರುತ್ತದೆ.
ಇದು ಕ್ಷಯ ರೋಗಕ್ಕೆ ಅತಿ ಮಹತ್ವದ ಔಷಧ. ಜೊತೆಗೆ ಇನ್ನೊಂದು ಕ್ಷಯದ

ಔಷಧದೊಂದಿಗೇ ಇದನ್ನು ಕೊಡಬೇಕು. ಆದರೆ ರೋಗ ಹರಡುವುದನ್ನು ತಡೆಯಲು ಒಂದನ್ನು ಮಾತ್ರ ಕೊಡಬಹುದು.

**ಮುನ್ನೆಚ್ಚರಿಕೆಗಳು:**

ಐಸೋನಿಯಾರಿಖಡ್ ಒಮ್ಮೊಮ್ಮೆ ರಕ್ತಹೀನತೆ, ಕೈ ಮತ್ತು ಕಾಲುಗಳಲ್ಲಿ ನರದ ನೋವು, ಮಾಂಸಖಂಡಗಳು ಕುಣಿಯವುದು, ಆಹಾರ ಕೊರತೆಯಿದ್ದವರಿಗೆ ಕೆಲವೊಮ್ಮೆ ಫಿಟ್ಸ್‌ನ್ನು ಕೂಡ ಉಂಟುಮಾಡಬಹುದು. ೫೦ ಮಿ.ಗ್ರಾಂ ಪಿರಿಡೊಕ್ಸಿನ್ (Pyridoxine) (ವಿಟಮಿನ್ ಬಿ೬) ಜೊತೆಗೆ ಕೊಡುವುದರಿಂದ ಇವನ್ನು ಕಡಿಮೆ ಮಾಡಬಹುದು.

ಐಸೋನಿಯಾರಿಖಡ್, ಇದು ಪಿತ್ಥಕೋಶವನ್ನು ಹಾಳು ಮಾಡುವ ಸಾಧ್ಯತೆಯೂ ಅಪರೂಪಕ್ಕೊಮ್ಮೆ ಇದೆ. ರೋಗಿಯಲ್ಲಿ ಕಣ್ಣು, ಚರ್ಮವೆಲ್ಲ ಹಳದಿಯಾದಂತೆನಿಸಿದರೆ, ತುರಿಕೆ, ವಾಂತಿ ಬಂದಂತಾಗುವುದು, ಹಸಿವಾಗದಿರುವಿಕೆ, ಹೊಟ್ಟೆನೋವು ಇವೆಲ್ಲ ಕಂಡುಬಂದರೆ ಕೂಡಲೆ ಔಷಧ ತೆಗೆದುಕೊಳ್ಳುವುದನ್ನು ನಿಲ್ಲಿಸಿ.

**ಐಸೋನಿಯಾರಿಖಡ್‌ನ ಪ್ರಮಾಣ (ಡೋಸ್):**

(ದಿನಕ್ಕೆ/ಕೆ.ಜಿಗೆ/೫೦ ಮಿ.ಗ್ರಾಂ) ೧೦೦ ಗ್ರಾಂ ಮಾತ್ರೆಗಳನ್ನು ಬಳಸಿ,

ದಿನಕ್ಕೆ ಒಮ್ಮೆ ಕೊಡಿ.

ಪ್ರತಿ ಡೋಸ್ ನಲ್ಲಿ,

ದೊಡ್ಡವರಿಗೆ–೩೦೦ ಮಿ.ಗ್ರಾಂ

೫ ಕೆ.ಜಿ. ತೂಕದ ಮಕ್ಕಳಿಗೆ ೫೦ ಮಿ.ಗ್ರಾಂ (೧/೨ ಮಾತ್ರೆ

ಕ್ಷಯವು ತೀವ್ರವಾಗಿರುವ ಮಕ್ಕಳಿಗೆ ಅಥವಾ ಮಿದುಳುಕ್ಷಯ ಆಗಿರುವ ದೊಡ್ಡವರಿಗೆ ಈಗ ಹೇಳಿರುವುದಕ್ಕಿಂತ ಎರಡು ಪಟ್ಟು ಡೋಸ್ ಕೊಡಿ.

## ರಿಫಾಂಫಿಸಿನ್ (Rifampicin)

ಜನಪ್ರಿಯ ಬ್ರಾಂಡ್:

ಕೆವಿಡಿನ್ (Cavidin),

ರಿಂಪಿನ್(Rimpin),

ರಿಫೆಕಂ (Rifakem).

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್

ಹೆಸರು______ಪ್ರಮಾಣ_____ಬೆಲೆ____

೧೫೦, ೩೦೦, ೪೫೦ ಹಾಗು ೬೦೦ ಮಿ.ಗ್ರಾಂ ನ ಕ್ಯಾಪ್ಸೂಲ್‌ಗಳಾಗಿ ಬರುತ್ತವೆ.

ಇದು ದುಬಾರಿಯ ಜೀವಿರೋಧಕ. ಆದರೆ ಹೆಚ್ಚು ಪರಿಣಾಮಕಾರಿಯಾದುದು. ಇದೊಂದನ್ನೇ ಎಂದೂ ತೆಗೆದುಕೊಳ್ಳಬಾರದು ಏಕೆಂದರೆ ರೋಗವು ಈ ಔಷಧಕ್ಕೆ ಪ್ರತಿರೋಧ ಬೆಳೆಸಿಕೊಳ್ಳುವ ಸಾಧ್ಯತೆ ಇದೆ. ಐಸೋನಿಯಾರಿಖಡ್ ಅಥವಾ ಇನ್ನಾವುದೇ ಕ್ಷಯದ ಔಷಧದೊಂದಿಗೆ ಸೇರಿಸಿ ಕೊಟ್ಟಾಗ ಚಿಕಿತ್ಸೆಯನ್ನು ಕೆಲ ತಿಂಗಳುಗಳಷ್ಟು ಕಡಿಮೆ ಮಾಡಬಹುದು.

ರಿಫಾಂಫಿಸಿನ್‌ನ್ನು ಮಧ್ಯದಲ್ಲಿ ಬಿಡದೇ ನಿಯಮಿತವಾಗಿ ತೆಗೆದುಕೊಳ್ಳುವುದು ಅತಿ ಮುಖ್ಯ. ಮಾತ್ರೆಗಳು ಮುಗಿಯುವುದಕ್ಕೂ ಮೊದಲೆ ಇನ್ನಷ್ಟು ತಂದಿಟ್ಟುಕೊಳ್ಳುವುದನ್ನು ಮರೆಯಬೇಡಿ.

**ಮುನ್ನೆಚ್ಚರಿಕೆ:**

ಪಿತ್ಥಕೋಶದ ತೊಂದರೆ ಇದ್ದರೆ ರಿಫಾಂಫಿಸಿನ್ ಅದಕ್ಕೆ ತೀವ್ರ ಹಾನಿ ಮಾಡುವ ಸಂಭವವಿದೆ. ಗರ್ಭಿಣಿಯರು ವೈದ್ಯಕೀಯ ಮೇಲ್ವಿಚಾರಣೆಯಲ್ಲಿಯೇ ಔಷಧ ಸೇವಿಸುವುದೊಳಿತು.

**ಅಡ್ಡಪರಿಣಾಮಗಳು:**

ಮಲ, ಮೂತ್ರ, ಎಂಜಲು, ಕಣ್ಣೀರು, ಕಫ, ಬೆವರು ಇವೆಲ್ಲವೂ ಕೆಂಪು ಕಿತ್ತಳೆಯ ಬಣ್ಣಕ್ಕೆ ತಿರುಗುತ್ತವೆ. ಒಮ್ಮೊಮ್ಮೆ ಜ್ವರ, ಹಸಿವೆಯಾಗದಿರುವಿಕೆ ಅಥವಾ ಬಹಳ ಹಸಿವೆಯಾಗುವುದು, ವಾಂತಿ ಬರುವಂತೆನಿಸುವುದು, ಚರ್ಮದ ಮೇಲೆ ಗಾದರಿ ಮತ್ತು ಮುಟ್ಟಿನ ತೊಂದರೆಗಳು ಆಗಬಹುದು.

ರಿಫಾಂಫಿಸಿನ್ ಮಾತ್ರೆಗಳು ಗರ್ಭ ನಿರೋಧಕ ಮಾತ್ರೆಗಳ ಪರಿಣಾಮವನ್ನು ಕಡಿಮೆ ಮಾಡುತ್ತವೆ. **ಕಾರಣ ಗರ್ಭ ನಿರೋಧಕ ಮಾತ್ರೆಗಳನ್ನು ತೆಗೆದುಕೊಳ್ಳುತ್ತಿರುವ ಹೆಂಗಸರು ವೈದ್ಯಕೀಯ ಸಲಹೆ ಪಡೆದು ಇವನ್ನು ಸೇವಿಸಬೇಕು.** ಅಥವಾ ಇನ್ನಾವುದೆ ಗರ್ಭ ನಿರೋಧಕ ಸಾಧನಗಳನ್ನು ಉಪಯೋಗಿಸಬೇಕು.

## ಪೈರಿಝಿನಮೈಡ್
## (Pyrazinamide).

ಜನಪ್ರಿಯ ಬ್ರಾಂಡ್
ಪಿರಾಲ್ಡಿನಾ (Piraldina),
ಪಿ–ಝೈಡ್ (P-Zide).

ನಿಮ್ಮ ಪ್ರದೇಶದಲ್ಲಿಯ
ಹೆಸರು______ಪ್ರಮಾಣ_______ಬೆಲೆ______
೫೦೦ ಹಾಗು ೭೫೦ ಮಿ.ಗ್ರಾಂ ಮಾತ್ರೆ ರೂಪದಲ್ಲಿ ಬರುತ್ತದೆ.

**ಅಪಾಯ ಮತ್ತು ಮುನ್ನೆಚ್ಚರಿಕೆ:** ಇದನ್ನು ಬಸರಿ ಹೆಣ್ಮಕ್ಕಳು ತೆಗೆದುಕೊಳ್ಳಬಾರದು.

**ಅಡ್ಡ ಪರಿಣಾಮಗಳು:** ಸಂದುಗಳು ಬಾತು ನೋವಾಗಬಹುದು, ಹಸಿವಾಗದಿರುವಿಕೆ, ವಾಂತಿ ಬಂದಂತಾಗುವುದು, ವಾಂತಿಯಾಗುವುದು, ಮೂತ್ರ ಮಾಡುವಾಗ ನೋವು, ಸುಸ್ತು ಹಾಗು ಜ್ವರ.

**ಪ್ರಮಾಣ (ಡೋಸ್):**
ದಿನಕ್ಕೆ/ಕೆ.ಜಿ.ಗೆ/೨೦–೩೦ ಮಿ.ಗ್ರಾಂ.
ಎರಡು ತಿಂಗಳ ಕಾಲ ದಿನಕ್ಕೆ ೧ ಡೋಸ್‌ನ್ನು ಕ್ಷಯದ ಬೇರೆ ಔಷಧಗಳೊಂದಿಗೆ ಕೊಡಿ.
ಪ್ರತಿಯೊಂದು ಡೋಸ್‌ನಲ್ಲಿ,
ದೊಡ್ಡವರಿಗೆ; ೧೫೦೦ ಅಥವಾ ೨೦೦೦ ಮಿ.ಗ್ರಾಂ (೩–೪ ಮಾತ್ರೆಗಳು)
೮–೧೨ ವರ್ಷದ ಮಕ್ಕಳು: ೧೦೦೦ಮಿ.ಗ್ರಾಂ (೨ ಮಾತ್ರೆ)
೩–೭ ವರ್ಷ ಮಕ್ಕಳು: ೫೦೦ ಮಿ.ಗ್ರಾಂ (೧ ಮಾತ್ರೆ)
೩ ವರ್ಷದೊಳಗಿನ ಮಕ್ಕಳಿಗೆ: ೨೫೦ ಮಿ.ಗ್ರಾಂ (೧/೨ ಮಾತ್ರೆ) ಕೊಡಿ.

## ಎಥಾಂಬುಟಾಲ್
## (Ethambutol).

ಜನಪ್ರಿಯ ಬ್ರಾಂಡ್
ಅಲ್‌ಬ್ಯುಟಾಲ್ (Albutol),
ಈಟಿ (ET-400, ET-800).

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_______ಬೆಲೆ________
೧೦೦ ರಿಂದ ೪೦೦ ಮಿ.ಗ್ರಾಂ ಮಾತ್ರೆಗಳು ಲಭ್ಯ.

**ಅಪಾಯ ಮತ್ತು ಮುನ್ನೆಚ್ಚರಿಕೆ:**
ಎಥಾಂಬುಟಾಲ್‌ನ್ನು ಬಹಳ ಕಾಲದವರೆಗೆ ಹೆಚ್ಚಿನ ಪ್ರಮಾಣದಲ್ಲಿ (ಡೋಸೇಜ್‌ನಲ್ಲಿ) ತೆಗೆದುಕೊಂಡರೆ ಕಣ್ಣು ನೋವು ಮತ್ತು ಕಣ್ಣಿಗೆ ಅಪಾಯ ಮಾಡಬಹುದು. ಕಣ್ಣಿನ ತ್ರಾಸು ಶುರುವಾಗುತ್ತಲೇ ಮಾತ್ರೆ ತೆಗೆದುಕೊಳ್ಳುವುದನ್ನು ನಿಲ್ಲಿಸಬೇಕು. ಮಾತ್ರೆ ನಿಲ್ಲಿಸಿದ ಮೇಲೆ ನಿಧಾನವಾಗಿ ಅದು ಸರಿಯಾಗುತ್ತದೆ.

**ಪ್ರಮಾಣ (ಡೋಸ್):** (ಮೊದಲ ಎರಡು ತಿಂಗಳು ದಿನಕ್ಕೆ/ಕೆ.ಜಿ.ಗೆ/೨೫ ಮಿ.ಗ್ರಾಂ. ನಂತರ ದಿನಕ್ಕೆ/ಕೆ.ಜಿ.ಗೆ/ ೧೫ ಮಿ.ಗ್ರಾಂ)
೧೦೦ ಅಥವಾ ೪೦೦ ಮಿ.ಗ್ರಾಂನ ಮಾತ್ರೆಗಳು ಬರುತ್ತವೆ. ದಿನಕ್ಕೊಮ್ಮೆ ಕೊಡಿ.
ಮೊದಲ ಎರಡು ತಿಂಗಳು ಪ್ರತಿ ಡೋಸ್‌ನಲ್ಲಿ,
ದೊಡ್ಡವರಿಗೆ–೧೨೦೦ ಮಿ.ಗ್ರಾಂ (೪೦೦ ಮಿ.ಗ್ರಾಂ. ಮಾತ್ರೆಗಳು ೩ ಅಥವಾ ೧೦೦ ಮಿ.ಗ್ರಾಂ ಮಾತ್ರೆಗಳು ೧೨)
ಮಕ್ಕಳಿಗೆ: ಮಗುವಿನ ಒಂದು ಕೆ.ಜಿ. ತೂಕಕ್ಕೆ ೧೫ ಮಿ.ಗ್ರಾಂ ಕೊಡಿ. ಆದರೆ ಮಿದುಳು ಕ್ಷಯವಾಗಿದ್ದರೆ ಪ್ರತಿ ಒಂದು ಕೆ.ಜಿ. ತೂಕಕ್ಕೆ ೨೫ ಮಿ.ಗ್ರಾಂ ಮಾತ್ರೆ ಕೊಡಿ.
ಮೊದಲ ೨ ತಿಂಗಳ ನಂತರ
ದೊಡ್ಡವರಿಗೆ – ೮೦೦ ಮಿ.ಗ್ರಾಂ (೪೦೦ ಮಿ.ಗ್ರಾಂ ಮಾತ್ರೆಗಳು ೨ ಅಥವಾ ೧೦೦ ಮಿ.ಗ್ರಾಂ. ಮಾತ್ರೆಗಳು ೮)
ಮಕ್ಕಳಿಗೆ ಪ್ರತಿ ೧ ಕೆ.ಜಿ. ತೂಕಕ್ಕೆ ೧೫ ಮಿ.ಗ್ರಾಂ ಮಾತ್ರೆ

## ಸ್ಟ್ರೆಪ್ಟೋಮೈಸಿನ್
## Streptomycin)

ಜನಪ್ರಿಯ ಬ್ರಾಂಡ್
ಮೇರ್‌ಸ್ಟ್ರೆಪ್ (Merstrep),
ಎಂಬಿಸ್ಟ್ರೈನ್ (Ambistryn-S).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ________ಬೆಲೆ______

೧ ಗ್ರಾಮಿನ ಅಥವಾ ೭೫೦ ಮಿ.ಗ್ರಾಂ ಇಂಜೆಕ್ಷನ್ ಟ್ಯೂಬುಗಳಾಗಿ ಬರುತ್ತವೆ.
ಕ್ಷಯ ರೋಗದ ಚಿಕಿತ್ಸೆಗೆ ಸ್ಟ್ರೆಪ್ಟೋಮೈಸಿನ್ ಇಂದಿಗೂ ಒಂದು ಒಳ್ಳೆಯ ಔಷಧವೇ. ಇದು ರಿಫಾಂಫಿಸಿನ್‌ಗಿಂತಲೂ ಕಡಿಮೆ ಪರಿಣಾಮಕಾರಿಯಾಗಿದೆ ಮತ್ತು ಕಡಿಮೆ ಬೆಲೆಯದೂ ಕೂಡ.

**ಅಪಾಯ ಮತ್ತು ಮುನ್ನೆಚ್ಚರಿಕೆಗಳು:**
ಕೊಡಬೇಕಾದ ಪ್ರಮಾಣ (ಡೋಸ್)ಕ್ಕಿಂತಲೂ ಹೆಚ್ಚು ಪ್ರಮಾಣ (ಡೋಸ್) ಕೊಡದಂತೆ ತೀವ್ರ ಮುನ್ನೆಚ್ಚರಿಕೆಯನ್ನು ವಹಿಸಲೇಬೇಕು. ಬಹಳ ಕಾಲದವರೆಗೆ ಹೆಚ್ಚಿನ ಪ್ರಮಾಣದಲ್ಲಿ ಇದನ್ನು ಸೇವಿಸುತ್ತಿದ್ದರೆ ಕಿವುಡುತನ ಆಗುವ ಸಾಧ್ಯತೆ ಇದೆ. ಕಿವಿಯಲ್ಲಿ ಗುಂಯ್‌ಗುಡುವುದು ಆರಂಭವಾಗುತ್ತಲೇ, ಸ್ಟ್ರೆಪ್ಟೋಮೈಸಿನ್‌ನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸಿ.
**ಗರ್ಭಿಣಿಯರು ಮತ್ತು ಮೂತ್ರಕೋಶದ ತೊಂದರೆ ಇರುವವರು ಸ್ಟ್ರೆಪ್ಟೋಮೈಸಿನ್‌ನ್ನು ತೆಗೆದುಕೊಳ್ಳಬಾರದು.**

**ಪ್ರಮಾಣ:** ದಿನಕ್ಕೆ/ ಕೆ.ಜಿ.ಗೆ/ ೧೫ ಮಿ.ಗ್ರಾಂ.
ಟ್ಯೂಬುಗಳಲ್ಲಿ ಸ್ಟ್ರೆಪ್ಟೋಮೈಸಿನ್ ಔಷಧ, ಪೌಡರ್ (ಪುಡಿ) ರೂಪದಲ್ಲಿದ್ದರೆ, ಪೌಡರ್‌ನ್ನು ೨ ಮಿ.ಲಿ ನೀರಿನೊಂದಿಗೆ (ಶುದ್ದನೀರು, ಡಿಸ್ಟಿಲ್ಡ್ ವಾಟರ್, distilled water) ಮಿಶ್ರಣವನ್ನು ತಯಾರಿಸಿಕೊಂಡು ಇಂಜೆಕ್ಷನ್ ರೂಪದಲ್ಲಿ ಕೊಡಬೇಕು.

**ಕ್ಷಯದ ಚಿಕಿತ್ಸೆಗೆ:**
ರೋಗ ಬಹಳ ತೀವ್ರವಾಗಿದ್ದರೆ ದಿನಕ್ಕೆ ಒಂದು ಇಂಜೆಕ್ಷನ್‌ನ್ನು ೩–೮ ವಾರಗಳವರೆಗೆ ಕೊಡಿ.
ರೋಗ ತೀವ್ರವಿಲ್ಲದಿದ್ದರೆ ೨ ತಿಂಗಳ ಕಾಲ ವಾರಕ್ಕೆ ೨–೩ ಬಾರಿ ೧ ಇಂಜೆಕ್ಷನ್ ಕೊಡಿ.
ಒಂದು ಇಂಜೆಕ್ಷನ್ ಜೊತೆಗೆ:
ದೊಡ್ಡವರಿಗೆ: ೧ ಗ್ರಾಮ್ (೨ ಮಿ.ಲಿ.)
೫೦ ವರ್ಷ ಮೇಲ್ಪಟ್ಟವರಿಗೆ: ೫೦೦ ಮಿ.ಗ್ರಾಂ (೧ ಮಿ.ಲಿ.)
೮–೧೨ ವರ್ಷದ ಮಕ್ಕಳಿಗೆ: ೭೫೦ ಮಿ.ಗ್ರಾಂ (೧–೧/೨ ಮಿ.ಲಿ.)
೩–೭ ವರ್ಷದ ಮಕ್ಕಳಿಗೆ: ೫೦೦ ಮಿ.ಗ್ರಾಂ. (೧ ಮಿ.ಲಿ.
೩ ವರ್ಷದೊಳಗಿನ ಮಕ್ಕಳಿಗೆ: ೨೫೦ ಮಿ.ಗ್ರಾಂ (೧/೨ ಮಿ.ಲಿ.)
ಶಿಶುಗಳಿಗೆ: ೨೦ ಮಿ.ಗ್ರಾಂ. ಪ್ರತಿ ೧ ಕೆಜಿ ತೂಕಕ್ಕೆ. ೩ ಕೆಜಿಯ ಮಗುವಿದ್ದರೆ ೬೦ ಮಿ.ಗ್ರಾ. (೧/ ೮ ಮಿ.ಲಿ.)

## ಥಿಯಾಸಿಟಾರ್ಝೋನ್ (Thiacetazone)
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_______ಬೆಲೆ_____
೫೦ ಮಿ.ಗ್ರಾಂ ಮಾತ್ರೆಯಾಗಿ ಬರುತ್ತದೆ. (ಕೆಲವೊಮ್ಮೆ ೧೦೦–೧೩೩ ಮಿ.ಗ್ರಾಂ ಐಸೋನಿಯಾಝಿಡ್ ಜೊತೆ ಮಿಶ್ರವಾಗಿಯೂ ಬರುತ್ತದೆ.)
**ಅಡ್ಡ ಪರಿಣಾಮಗಳು:** ಮೈ ಮೇಲೆ ಗಾದರಿಗಳೇಳಬಹುದು. ವಾಂತಿ, ತಲೆತಿರುಗುವುದು, ಹಸಿವಾಗದಿರುವಿಕೆ ಮುಂತಾದ ಅಡ್ಡ ಪರಿಣಾಮಗಳಿವೆ. **ಏಡ್ಸ್ ರೋಗಿಗಳು ಈ ಔಷಧವನ್ನು ಸೇವಿಸಬಾರದು.** ಅವರಿಗೆ ಅಪಾಯಕಾರಿ ಅಲರ್ಜಿಯನ್ನುಂಟು ಮಾಡುತ್ತದೆ. ಚರ್ಮವನ್ನೇ ಸುಲಿಯುವಂತೆ ಮಾಡುತ್ತದೆ.

**ಥಿಯಾಸಿಟಾರ್ಝೋನ್‌ನ ಪ್ರಮಾಣ:**
೨.೫ ಮಿ.ಗ್ರಾಂ/ಕೆ.ಜಿ/ದಿನಕ್ಕೆ. ೫೦ ಮಿ.ಗ್ರಾಂ
ಥಿಯಾಸಿಟಾರ್ಝೋನ್ ಕೆಲವೊಮ್ಮೆ
ಐಸೋನಿಯಾಝಿಡ್ ಜೊತೆಗೆ ಮಿಶ್ರವಾಗಿ ಸಿಗುತ್ತದೆ.
ದಿನಕ್ಕೆ ಒಮ್ಮೆ ಕೊಡಿ.
ಪ್ರತಿ ಡೋಸ್‌ನ್ನು ಹೀಗೆ ಕೊಡಿ:–
ದೊಡ್ಡವರಿಗೆ: ೩ ಮಾತ್ರೆಗಳು (೧೫೦ ಮಿ.ಗ್ರಾಂ)
೮–೧೨ ವರ್ಷದ ಮಕ್ಕಳಿಗೆ: ೨ ಮಾತ್ರೆಗಳು (೧೦೦ ಮಿ.ಗ್ರಾಂ)
೩–೭ ವರ್ಷದ ಮಕ್ಕಳಿಗೆ: ೧ ಮಾತ್ರೆ (೫೦ ಮಿ.ಗ್ರಾಂ)
೩ ವರ್ಷದೊಳಗಿನ ಮಕಳಿಗೆ ೧/೨ ಮಾತ್ರೆ (೨೫ ಮಿ.ಗ್ರಾಂ).

**ಡಾಟ್ಸ್ (ನೇರ ವೀಕ್ಷಣೆಯಲ್ಲಿ ಕೊಡುವ ಚಿಕಿತ್ಸೆ) DOTS(ಡೈರೆಕ್ಟ್ಲಿ ಒಬ್ಸರ್ವಡ್ ಟ್ರೀಟ್‌ಮೆಂಟ್) Directly Obsereved Treatment.**

**ಚಿಕಿತ್ಸೆಯ ಮೊದಲನೆ ಎರಡು ತಿಂಗಳು** (ತೀವ್ರ ಚಿಕಿತ್ಸೆ ಹಂತ Intensive phase) ಸರ್ಕಾರಿ ಆಸ್ಪತ್ರೆಯಿಂದ ಬರುವ ಸರಕಾರಿ ಆರೋಗ್ಯ ಕಾರ್ಯಕರ್ತರು ರೋಗಿಗೆ, ಪ್ರತಿ ವಾರಕ್ಕೆ ಮೂರು ದಿವಸ, ಮಾತ್ರೆಗಳನ್ನು ಕೊಟ್ಟು ನುಂಗಿಸಿ ಹೋಗುತ್ತಾರೆ. ನಂತರದ ನಾಲ್ಕು ತಿಂಗಳಲ್ಲಿ, (ಮುಂದುವರಿಕೆಯ ಹಂತ Continuation phase). ಪ್ರತಿ ವಾರದ ವೊದಲನೆ ಡೋಸ್‌ನ್ನು ಆರೋಗ್ಯ ಕಾರ್ಯಕರ್ತರ ಎದುರಿಗೇ ರೋಗಿಯು ನುಂಗಬೇಕು. ಇನ್ನು ಬಾಕಿ ಎರಡು ದಿವಸದ ಔಷಧಿಯನ್ನು (ಡೋಸ್‌ನ್ನು), ರೋಗಿ ಸ್ವತಹ ನುಂಗಬೇಕು. ಮುಂದಿನ ವಾರದ ಔಷಧವನ್ನು ಕೊಡಲು ಬಂದಾಗ, ರೋಗಿ ತಾನು ಉಪಯೋಗಿಸಿದ ಔಷಧ ಸ್ಟ್ರಿಪ್‌ನ್ನು, ಆರೋಗ್ಯ ಕಾರ್ಯಕರ್ತರಿಗೆ ಹಿಂದಿರುಗಿಸಬೇಕು. ಈ ರೀತಿ ರೋಗಿಯುನ್ನು ಪೂರ್ತಿ ಗುಣವಾಗುವಂತೆ ಮಾಡಲು ಸಾಧ್ಯ.

ಒಟ್ಟೂ ಚಿಕಿತ್ಸೆಯು ೬ ತಿಂಗಳದ್ದು. ಮೊದಲ ಎರಡು ತಿಂಗಳು ತೀವ್ರ ಚಿಕಿತ್ಸೆ. ಈ ಅವಧಿಯಲ್ಲಿ ನಾಲ್ಕು ಔಷಧಿಗಳನ್ನು ವಾರಕ್ಕೆ ಮೂರು ಬಾರಿ ಕೆಳಗೆ ಸೂಚಿಸಿದ ಪ್ರಮಾಣದಲ್ಲಿ ಕೊಡಲಾಗುವುದು.

- ಐಸೋನಿಯಾರಿಝಿಡ್ ೬೦೦ ಮಿ.ಗ್ರಾಂ.
- ರಿಫಾಂಫಿಸಿನ್ ೪೫೦ ಮಿ.ಗ್ರಾಂ. (ವ್ಯಕ್ತಿಯು ೬೦ ಕೆ.ಜಿ.ಗಿಂತ ಮೇಲಿದ್ದರೆ ೬೦೦ ಮಿ.ಗ್ರಾಂ)
- ಪೈರಿಝಿನಮೈಡ್ ೧೫೦೦ ಮಿ.ಗ್ರಾಂ
- ಎಥಾಂಬುಟಾಲ್ ೧೨೦೦ ಮಿ.ಗ್ರಾಂ

ನಂತರದ ಮುಂದುವರೆದ ಹಂತ ನಾಲ್ಕು ತಿಂಗಳದ್ದು. ಐಸೋನಿಯಾರಿಝಿಡ್ ಮತ್ತು ರಿಫಾಂಫಿಸಿನ್ ಇವೆರಡೂ ವಾರಕ್ಕೆ ಮೂರು ಬಾರಿ. ಪ್ರಮಾಣ ಮೇಲೆ ಸೂಚಿಸಿದಂತೆ.

ಈಗ ಹೇಳಿದ್ದು ಸರಕಾರವು ಯೋಜಿಸಿರುವ ಚಿಕಿತ್ಸಾ ಪದ್ಧತಿ. ಇದರ ಹೊರತಾಗಿ ಖಾಸಗಿಯಾಗಿ ಚಿಕಿತ್ಸೆ ಪಡೆಯಬೇಕೆನ್ನುವವರು ಈ ಕೆಳಗಿನ ಕೆಲವು ಬ್ರಾಂಡುಗಳನ್ನು ಆರಿಸಿಕೊಳ್ಳಬಹುದು. ಇವುಗಳು ನಾಲ್ಕು ಕ್ಷಯದ ಔಷಧಗಳ ಸಂಯುಕ್ತ–

೧. ಟಿಬಿಕಿಟ್ ಪ್ಲಸ್ (Tibikit Plus).

೨. ಬಿನೆಕ್ಸ್ ಝಡ್ ಇ (Binex ZE).

ಎರಡು ಔಷಧಗಳ ಸಂಯುಕ್ತ:–

೧. ಟಿಬ್ರಿಂ ಐ.ಎನ್.ಎಚ್ (Tibrim INH).

೨. ಬಿನೆಕ್ಸ್ (Binex).

## ಕುಷ್ಠ ರೋಗಕ್ಕೆ ಔಷಧಗಳು

ಕುಷ್ಠ ರೋಗಕ್ಕೆ ಔಷಧ ಕೊಡುವಾಗ ಅದು ಯಾವ ರೀತಿಯ ಕುಷ್ಠವೆಂದು ತಿಳಿದುಕೊಳ್ಳುವುದು ಅತಿ ಮುಖ್ಯ. ಕೇವಲ ಚರ್ಮದ ಬಣ್ಣ ತೆಳುವಾಗಿದ್ದು ಅದರಲ್ಲಿ ಸ್ಪರ್ಶಜ್ಞಾನ ಇಲ್ಲವೆಂದರೆ, ಚರ್ಮ ದಪ್ಪಗಾಗಿಲ್ಲವೆಂದರೆ ಅವರಿಗೆ ಟ್ಯುಬರ್ಕ್ಯುಲಾಯಿಡ್ ಕುಷ್ಠವಿರಹುದು. ಇದಕ್ಕೆ ಎರಡು ಔಷಧಗಳು ಮಾತ್ರ ಸಾಕು. ಚರ್ಮ ದಪ್ಪಗಾಗಿದ್ದರೆ ಅವರಿಗಾಗಿದ್ದು ಲೆಪ್ರೋಮ್ಯಾಟಸ್ ಕುಷ್ಠವಿರಬಹುದು. ಅದಕ್ಕೆ ೩ ಔಷಧಗಳನ್ನು ತೆಗೆದುಕೊಳ್ಳಬೇಕು. **ರಾಷ್ಟ್ರೀಯ ಕುಷ್ಠ ನಿರ್ಮೂಲನಾ ಯೋಜನೆಯ ಪ್ರಕಾರ ರೋಗಿಯು ಒಬ್ಬ ಅನುಭವಿ ಆರೋಗ್ಯ ಕಾರ್ಯಕರ್ತರ ಸಮ್ಮುಖದಲ್ಲಿಯೇ ಔಷಧವನ್ನು ತೆಗೆದುಕೊಳ್ಳಬೇಕು. ಇದಕ್ಕೆ ಎಂ.ಡಿ.ಟಿ. (ಮಲ್ಟಿ ಡ್ರಗ್ ಟ್ರೀಟ್‌ಮೆಂಟ್– ಬಹು ಔಷಧಿ ಚಿಕಿತ್ಸೆ) M.D.T (Multi Drug Treatment)** ಎಂದು ಹೆಸರು.

ಟ್ಯುಬರ್ಕ್ಯುಲಾಯಿಡ್ ಕುಷ್ಠದ ಚಿಕಿತ್ಸೆಯು ೬ ತಿಂಗಳಿಗೆ ಮುಗಿಯಬೇಕು. ರೋಗಾಣುಗಳು ಔಷಧಕ್ಕೆ ಪ್ರತಿರೋಧ ಬೆಳೆಸಿಕೊಳ್ಳಬಾರದೆಂದರೆ ಪ್ರತಿ ನಿತ್ಯವೂ ತಪ್ಪದೇ ಔಷಧ ಸೇವಿಸುವುದು ಅತಿ ಮುಖ್ಯ. ತಂದಿಟ್ಟ ಔಷಧವು ಮುಗಿಯುವುದರೊಳಗೇ ಮುಂದಿನ ಸ್ಟಾಕನ್ನು ತರಬೇಕು.

ಟ್ಯುಬರ್ಕ್ಯುಲಾಯಿಡ್ ಕುಷ್ಠವಿದ್ದರೆ, ೬ ತಿಂಗಳುಗಳ ಕಾಲ, ೨ ಔಷಧಿ:

ಪ್ರತಿ ದಿನ ಡ್ಯಾಪ್ಸೋನ್ ೧೦೦ ಮಿ.ಗ್ರಾಂ. ಮಾತ್ರೆ ಹಾಗು ಪ್ರತಿ ತಿಂಗಳೂ ಒಂದು ರಿಫಾಂಫಿಸಿನ್ ೬೦೦

ಮಿ.ಗ್ರಾಂ ಕ್ಯಾಪ್ಸೂಲ್‌ನ್ನು ಆರೋಗ್ಯ ಕಾರ್ಯಕರ್ತರ ಸಮ್ಮುಖದಲ್ಲಿ ತೆಗೆದುಕೊಳ್ಳಬೇಕು.
ಲೆಪ್ರೋಮ್ಯಾಟಸ್ ಕುಷ್ಠಕ್ಕೆ ಕನಿಷ್ಟ ೨ ವರ್ಷಗಳ ಕಾಲ, ೩ ಔಷಧಗಳನ್ನು ತೆಗೆದುಕೊಳ್ಳಬೇಕು.
ಮಾತ್ರೆ ಡ್ಯಾಪ್ಸೋನ್ (Tablet Dapsone).
ಕ್ಯಾಪ್ಸೂಲ್ ಕ್ಲೊಫಾರಝಮೀನ್ (Capsule Clofazamine).
ಕ್ಯಾಪ್ಸೂಲ್ ರಿಫಾಂಫಿಸಿನ್ (Capsule Rifampicin).
ಕನಿಷ್ಟ ಎರಡು ವರ್ಷಗಳ ಚಿಕಿತ್ಸೆಯಾಗಬೇಕು.

- ಡ್ಯಾಪ್ಸೋನ್ (Dapsone) ೧೦೦ ಮಿ.ಗ್ರಾಂ ಮಾತ್ರೆ ಪ್ರತಿ ದಿನ, ಕನಿಷ್ಟ ಎರಡು ವರ್ಷಗಳ ಕಾಲ.
- ಕ್ಯಾಪ್ಸೂಲ್ ರಿಫಾಂಫಿಸಿನ್ (Rifampicin) ೬೦೦ ಮಿ.ಗ್ರಾಂ. ಮೊದಲ ೧೪ ದಿನಗಳ ಕಾಲ ಪ್ರತಿ ನಿತ್ಯವೂ. ನಂತರ ಎರಡು ವರ್ಷಗಳ ಕಾಲ ತಿಂಗಳಿಗೊಮ್ಮೆ. ಇವೆಲ್ಲವೂ ಆರೋಗ್ಯ ಕಾರ್ಯಕರ್ತರ ಸಮ್ಮುಖದಲ್ಲಿಯೇ ಆಗಬೇಕು.
- ಕ್ಲೊಫಾರಝಮೀನ್ (Clofazamine) ೩೦೦ ಮಿ.ಗ್ರಾಂ. ಮೊದಲ ೧೪ ದಿನಗಳ ಕಾಲ ಪ್ರತಿ ದಿನ. ನಂತರ  ಎರಡು ವರ್ಷಗಳ ಕಾಲ ತಿಂಗಳಿಗೊಮ್ಮೆ ೬೦೦ ಮಿ.ಗ್ರಾಂ.  ಹಾಗು ಇದರ ಜೊತೆ ಎರಡು ವರ್ಷಗಳ ಕಾಲ, ವಾರಕ್ಕೆ ಮೂರು ಬಾರಿ ೩೦೦ ಮಿ.ಗ್ರಾಂ.

## <u>ಡ್ಯಾಪ್ಸೋನ್ (ಡಿಡಿಎಸ್)</u>
## <u>Dapsone (DDS).</u>

ಜನಪ್ರಿಯ ಬ್ರಾಂಡ್
ಡ್ಯಾಪ್ಸೋನ್ (Dapsone).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು____ಪ್ರಮಾಣ_____ಬೆಲೆ____

೫೦ ಮತ್ತು ೧೦೦ ಮಿ.ಗ್ರಾಂ ಮಾತ್ರೆಯಾಗಿ ಬರುತ್ತವೆ. ಡ್ಯಾಪ್ಸೋನ್  ಚರ್ಮದ ಮೇಲೆ ಗಾದರಿ ಮತ್ತು ರಕ್ತ ಹೀನತೆಯನ್ನುಂಟು ಮಾಡಬಹುದು. ಚರ್ಮವು ಬಹಳವಾಗಿ ಸುಲಿಯಲಾರಂಭಿಸಿದರೆ ಔಷಧವನ್ನು ನಿಲ್ಲಿಸಿ.
**ಮುನ್ನೆಚ್ಚರಿಕೆ:** ಡ್ಯಾಪ್ಸೋನ್ ಅಪಾಯಕಾರಿಯಾದ **ಔಷಧ, ಮಕ್ಕಳಿಗೆ ಸಿಗದಂತೆ ಇಡಿ.**

ಪ್ರಮಾಣ: ಪ್ರತಿ ದಿನಕ್ಕೆ/ಕೆಜಿ.ಗೆ/೨ ಮಿ.ಗ್ರಾಂ
೧೦೦ ಮಿ.ಗ್ರಾಂ ಮಾತ್ರೆಯನ್ನುಪಯೋಗಿಸಿ,
ದಿನಕ್ಕೆ ಒಮ್ಮೆ ತೆಗೆದುಕೊಳ್ಳುವುದು.
ದೊಡ್ಡವರು: ೧೦೦ ಗ್ರಾಂ (ಒಮ್ಮೆ ೧೦೦ ಮಿ.ಗ್ರಾಂ ಮಾತ್ರೆ)
೧೩–೧೮ ವರ್ಷದವರು–೫೦ ಮಿ.ಗ್ರಾಂ (ಅರ್ಧ ಮಾತ್ರೆ)
೬–೧೨ ವರ್ಷದ ಮಕ್ಕಳು–೨೫ ಮಿ.ಗ್ರಾಂ (ಮಾತ್ರೆಯ ಕಾಲು ಭಾಗ)
೨–೫ ವರ್ಷದ ಮಕ್ಕಳು–೨೫ ಮಿ.ಗ್ರಾಂ. **ವಾರಕ್ಕೆ ಮೂರು ಬಾರಿ ಮಾತ್ರ.**

## <u>ರಿಫಾಂಪಿಸಿನ್</u>
## <u>(Rifampicin)</u>

ಜನಪ್ರಿಯ ಬ್ರಾಂಡ್:
ಕೆವಿಡಿನ್ (Cavidin),
ರಿಂಪಿನ್(Rimpin),
ರಿಫೆಕೆಂ (Rifakem).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ____

೧೫೦ ಅಥವಾ ೩೦೦ ಮಿ.ಗ್ರಾಂ. ಮಾತ್ರೆ ಅಥವಾ ಕ್ಯಾಪ್ಸೂಲ್‌ಗಳ ರೂಪದಲ್ಲಿ ಬರುತ್ತದೆ.
ಇದು ಬಹಳ ದುಬಾರಿಯಾದ ಔಷಧ. ಆದರೆ ಕುಷ್ಠ ಚಿಕಿತ್ಸೆಗೆ ಅತಿ ಕಡಿಮೆ ಔಷಧ ಸಾಕು. ಹೀಗಾಗಿ ಒಟ್ಟೂ ವೆಚ್ಚ ಬಹಳವಾಗುವುದಿಲ್ಲ. ಅನುಭವಿ ಆರೋಗ್ಯ ಕಾರ್ಯಕರ್ತ ಅಥವಾ ಡಾಕ್ಟರರ ಎದುರಿಗೇ ಔಷಧ ಸೇವಿಸಬೇಕು.

**ಕುಷ್ಠ ರೋಗ ಚಿಕಿತ್ಸೆಯಲ್ಲಿ ರಿಫಾಂಫಿಸಿನ್**
೩೦೦ ಮಿ.ಗ್ರಾಂ ಮಾತ್ರೆಯನ್ನು ಉಪಯೋಗಿಸಿ,

ಕುಷ್ಠಕ್ಕೆ ರಿಫಾಂಫಿಸಿನ್ ತಿಂಗಳಿಗೆ ಒಮ್ಮೆ ಮಾತ್ರ ಕೊಡಬೇಕು. ಊಟದ ೧ ತಾಸು ಮೊದಲು ಅಥವಾ ಎರಡು ತಾಸು ನಂತರವೇ ಇದನ್ನು ತೆಗೆದುಕೊಳ್ಳಬೇಕು.

**ತಿಂಗಳ ಪ್ರತಿ ಡೋಸ್‌ನಲ್ಲಿ:**

ದೊಡ್ಡವರಿಗೆ– ೬೦೦ ಮಿ.ಗ್ರಾಂ (೩೦೦ ಮಿ.ಗ್ರಾಂ ನ ಎರಡು ಮಾತ್ರೆಗಳು)
೮–೧೨ ವರ್ಷದ ಮಕ್ಕಳಿಗೆ– ೪೫೦ ಮಿ.ಗ್ರಾಂ (ಒಂದೂವರೆ ಮಾತ್ರೆ)
೩–೭ ವರ್ಷದ ಮಕ್ಕಳಿಗೆ–
೩೦೦ ಮಿ.ಗ್ರಾಂ (೧ ಮಾತ್ರೆ)
೩ ವರ್ಷದೊಳಗಿನ ಮಕ್ಕಳಿಗೆ– ೧೫೦ ಮಿ.ಗ್ರಾಂ ೧/ ೨ ಮಾತ್ರೆ

## <u>ಕ್ಲೊಫಾಝುಮಿನ್</u>
## <u>(Clofazimine)</u>

ಜನಪ್ರಿಯ ಬ್ರಾಂಡು
ಕ್ಲೊಫೊರಿಝಿನ್ (Clofozine),
ಹಾನ್ಸೆಪ್ರಾನ್ (Hansepran).

ನಿಮ್ಮ ಪ್ರದೇಶದಲ್ಲಿಯ
ಹೆಸರು______ಪ್ರಮಾಣ_______ಬೆಲೆ______

೫೦ ಮಿ.ಗ್ರಾಂ–೧೦೦ ಮಿ.ಗ್ರಾಂ ಮಾತ್ರೆಗಳು ಬರುತ್ತವೆ. ಇದೂ ಕೂಡ ಬಹಳ ದುಬಾರಿಯಾದ ಔಷಧ ಕುಷ್ಠದ ರೋಗಾಣುಗಳನ್ನು ಕೊಲ್ಲಲು ಇದು ಬಹಳ ಸಹಕಾರಿಯಾಗಿಲ್ಲದಿದ್ದರೂ ಲೆಪ್ರೊಮ್ಯಾಟಸ್ ಕುಷ್ಠದಲ್ಲಿ ಔಷಧಕ್ಕೆ ಪ್ರತಿಕ್ರಿಯೆಗಳನ್ನಿದು ನಿಯಂತ್ರಣದಲ್ಲಿ ಇಡುತ್ತದೆ.

**ಅಡ್ಡ ಪರಿಣಾಮಗಳು:** ಚರ್ಮವು ನೇರಳೆ ಕೆಂಪು ಬಣ್ಣಕ್ಕೆ ತಿರುಗುತ್ತದೆ. ಆದರಿದು ಔಷಧ ಮುಗಿಸಿದ ಒಂದೆರಡು ವರ್ಷಗಳಲ್ಲಿ ಮಾಯವಾಗುತ್ತದೆ. ಹೊಟ್ಟೆ ನೋವು, ಜೀರ್ಣದ ಸಮಸ್ಯೆಗಳನ್ನುಂಟು ಮಾಡಬಹುದು. **ಗರ್ಭಿಣಿಯರಿಗೆ ಕೊಡಬೇಡಿ.**

ಪ್ರಮಾಣ: (ದಿನಕ್ಕೆ/ ಕೆ.ಜಿ.ಗೆ/೧ ಮಿ.ಗ್ರಾಂ)
೫೦ ಮಿ.ಗ್ರಾಂ ಮಾತ್ರೆಯನ್ನುಪಯೋಗಿಸಿ,
ಪ್ರತಿ ದಿನವೂ ಒಂದು (ಅಥವಾ ವಾರಕ್ಕೆ ಕನಿಷ್ಟ ಮುರು ಬಾರಿ ಕೊಡಿ) ಮಾತ್ರೆ ಕ್ಲೋಫಾಝಿಮೀನ್‌ನ್ನು ಕೊಡಬೇಕು. ನಂತರ ತಿಂಗಳಿಗೊಂದು ಬಾರಿ ಒಂದು ಹೆಚ್ಚಿನ ಪ್ರಮಾಣದಲ್ಲಿ (ಡೋಸ್) ಕೊಡಬೇಕು.

ಪ್ರತಿ ನಿತ್ಯದ ಡೋಸ್‌ನಲ್ಲಿ,
ದೊಡ್ಡವರಿಗೆ– ೫೦ ಮಿ.ಗ್ರಾಂ (೫೦ ಮಿ.ಗ್ರಾಂ ನ ಒಂದು ಕ್ಯಾಪ್ಸೂಲ್)
೮–೧೨ ವರ್ಷದ ಮಕ್ಕಳಿಗೆ– ೩೭ ಮಿ.ಗ್ರಾಂ. (೩/ ೪ ಕ್ಯಾಪ್ಸೂಲ್
೩–೭ ವರ್ಷದ ಮಕ್ಕಳಿಗೆ– ೨೫ ಮಿ.ಗ್ರಾಂ. (೧/ ೨ ಕ್ಯಾಪ್ಸೂಲ್)
೩ ವರ್ಷದೊಳಗಿನ ಮಕ್ಕಳಿಗೆ– ೧೨ ಮಿ.ಗ್ರಾಂ. (೧/೪ ಕ್ಯಾಪ್ಸೂಲ್)

ತಿಂಗಳ ಡೋಸ್‌ನಲ್ಲಿ,
ದೊಡ್ಡವರಿಗೆ– ೩೦೦ ಮಿ.ಗ್ರಾಂ (೫೦ ಮಿ.ಗ್ರಾಂನ ೬ ಮಾತ್ರೆ).
೮–೧೨ ವರ್ಷದ ಮಕ್ಕಳಿಗೆ– ೨೨೫ ಮಿ.ಗ್ರಾಂ (ನಾಲ್ಕೂವರೆ ಮಾತ್ರೆಗಳು).
೩–೭ ವರ್ಷದ ಮಕ್ಕಳಿಗೆ: ೧೫೦ ಮಿ.ಗ್ರಾಂ (ಮೂರು ಮಾತ್ರೆಗಳು).
೩ ವರ್ಷದೊಳಗಿನ ಮಕ್ಕಳಿಗೆ–೭೫ ಮಿ.ಗ್ರಾಂ (ಒಂದೂವರೆ ಮಾತ್ರೆಗಳು).

ಕ್ಲೊಫಾಝುಮಿನ್‌ನ್ನು ಹೆಚ್ಚಿನ ಪ್ರಮಾಣದಲ್ಲಿ (ಡೋಸ್‌ನ್ನು) ನುಂಗುವಾಗ ಡಾಕ್ಟರು ಅಥವಾ ಆರೋಗ್ಯ ಕಾರ್ಯಕರ್ತರ ಎದುರಿನಲ್ಲಿಯೇ ತೆಗೆದುಕೊಳ್ಳುವುದು ಉತ್ತಮ.

## ಮಲೇರಿಯಾ

ಮಲೇರಿಯಾಕ್ಕೆ ಅನೇಕ ಔಷಧಗಳಿವೆ. ಆದರೀಗ ಜಗತ್ತಿನಲ್ಲಿ ಅನೇಕ ಪ್ರದೇಶಗಳಲ್ಲಿ ಒಳ್ಳೊಳ್ಳೆಯ ಔಷಧಗಳಿಗೆ ಮಲೇರಿಯಾ ಸೂಕ್ಷ್ಮ ಜೀವಿಗಳು ಪ್ರತಿರೋಧ ಬೆಳೆಸಿಕೊಂಡುಬಿಟ್ಟಿವೆ.

ನಿಮ್ಮ ಪ್ರದೇಶದಲ್ಲಿ ಮಲೇರಿಯಾದ ಯಾವ ಔಷಧಗಳು ಕೆಲಸ ಮಾಡುತ್ತವೆಂದು ನಿಮ್ಮ ಆರೋಗ್ಯ ಕೇಂದ್ರ ಅಥವಾ ಆರೋಗ್ಯ ಇಲಾಖೆಯನ್ನು ಕೇಳಿ ತಿಳಿದುಕೊಳ್ಳುವುದೊಳ್ಳೆಯದು.

ಹೊಸ ಔಷಧಗಳನ್ನು ತರಲಾಗುತ್ತಿದ್ದರೂ ಅವು ಕೆಲಕಾಲ ಮಾತ್ರ ಕೆಲಸ ಮಾಡುತ್ತವೆ. ಅಷ್ಟರಲ್ಲಿ

ರೋಗಾಣುಗಳು ಅದಕ್ಕೆ ಪ್ರತಿರೋಧ ಬೆಳೆಸಿಕೊಂಡು ಬಿಡುತ್ತವೆ.

**ಗಮನಿಸಿ: ಮಲೇರಿಯಾ ಪ್ರತಿರೋಧವಿಲ್ಲದವರನ್ನು ರೋಗವು ಒಮ್ಮೆಗೇ ಕೊಲ್ಲಬಹುದು. ಮಲೇರಿಯಾ ಇರುವ ಪ್ರದೇಶಕ್ಕೆ ಹೋಗುವಾಗ ಮಕ್ಕಳಿಗಂತೂ ಮಲೇರಿಯಾ ರೋಗ ತಡೆಯುವ ಔಷಧವನ್ನು ಕೊಡಿಸಿಕೊಂಡೇ ಹೋಗುವುದು ಒಳ್ಳೆಯದು.** ಅಥವಾ ಗೊತ್ತಾದ ಕೂಡಲೇ ಅವರನ್ನು ಚಿಕಿತ್ಸೆಗೊಳಪಡಿಸುವುದು ಉತ್ತಮ. ಔಷಧಗಳನ್ನು ಎರಡು ರೀತಿಯಲ್ಲಿ ಬಳಸಬಹುದು.

೧. ಚಿಕಿತ್ಸೆಗಾಗಿ–ರೋಗ ತಗುಲಿದವರಿಗೆ ಕೆಲ ದಿನಗಳ ಕಾಲ ಈ ಔಷಧವನ್ನು ಕೊಡಲಾಗುತ್ತದೆ.

೨. ರೋಗತಡೆ: ರಕ್ತದೊಳಗಿನ ಮಲೇರಿಯಾ ರೋಗಾಣುಗಳು ಇದ್ದರೂ ಅವು ರೋಗ ತರದಂತೆ ತಡೆಯಲು. ಮಲೇರಿಯಾ ವ್ಯಾಪಕವಾಗಿರುವ ಪ್ರದೇಶಗಳಲ್ಲಿ ತಡೆಗಾಗಿ ಔಷಧವನ್ನು ಮಕ್ಕಳಿಗಂತೂ ಕೊಡಲೇಬೇಕು. ಹೊರಗಿನಿಂದ ಮಲೇರಿಯಾ ಇರುವಲ್ಲಿಗೆ ಅಪರೂಪಕ್ಕೊಮ್ಮೆ ಹೋಗುವವರಿಗೂ ಇದನ್ನು ಕೊಡುತ್ತಾರೆ. ವಾರಕ್ಕೊಮ್ಮೆ ಔಧವನ್ನು ಕೊಡುತ್ತಾರೆ. ಮಲೇರಿಯಾ ತಡೆಗೆ ಸೊಳ್ಳೆಗಳು ಕಚ್ಚದಂತೆ ದೂರವಿಡುವುದೂ ಅತಿ ಮುಖ್ಯ.

ಮಲೇರಿಯಾದ ಕೆಲವು ಔಷಧಗಳನ್ನು ಚಿಕಿತ್ಸೆಗಾಗಿ ಮಾತ್ರ ಬಳಸುತ್ತಾರೆ. ಕೆಲವು ಕೇವಲ ರೋಗತಡೆಯಲ್ಲಿ ಕೆಲಸ ಮಾಡುತ್ತವೆ. ಕೆಲವು ಎರಡಕ್ಕೂ ಉಪಯೋಗಕ್ಕೆ ಬರುತ್ತವೆ.

ಕ್ಲೋರೋಕ್ವಿನ್ (Chloroquine) ಸತತವಾಗಿ ಉಪಯೋಗವಾಗುತ್ತಿದ್ದರೂ ಇಂದು ಜಗತ್ತಿನ ಕೆಲ ಭಾಗಗಳಲ್ಲಿ ರೋಗಾಣುಗಳು ಪ್ರತಿರೋಧವನ್ನು ಬೆಳೆಸಿಕೊಂಡುಬಿಟ್ಟಿವೆ. ಕ್ಲೋರೋಕ್ವಿನ್ ಪ್ರತಿರೋಧವಿರುವಲ್ಲಿ ಕ್ವಿನೈನ್‌ನ್ನು (Quinine) ಉಪಯೋಗಿಸುವುದು ಒಳಿತು. ಮಲೇರಿಯಾವು ಮಿದುಳಿಗೆ ಹರಡುತ್ತಿರುವಲ್ಲಿಯೂ ಇದೇ ಪರಿಣಾಮಕಾರಿಯಾದ ಔಷಧ.

ಕ್ಲೋರೋಕ್ವಿನ್‌ಗೆ ಪ್ರತಿರೋಧವಿರುವಲ್ಲಿ ರೋಗ ತಡೆಗೆ ಮತ್ತು ಚಿಕಿತ್ಸೆಗೂ ಮೆಫ್ಲೋಕ್ವಿನ್ (Mefloquine) ಮತ್ತು ಪೈರಿಮೀತಮಿನ್ + ಸಲ್ಫಾಡೋಕ್ಸಿನ್ (Pyrimethamine + Sulfadoxine) ಉತ್ತಮ ಔಷಧಗಳು. ಅಥವಾ ರೋಗ ತಡೆಗೆ ಕ್ಲೋರೋಕ್ವಿನ್ (Chloroquine) ಜೊತೆಗೆ ಪ್ರೊಗ್ವಾನಿಲ್ (Proguanil) ಉಪಯೋಗಿಸಬಹುದು. ರೋಗವು ಮತ್ತೆ ಮರುಕಳಿಸದಂತೆ ತಡೆಯಲು ಚಿಕಿತ್ಸೆಯು ಮುಗಿದ ನಂತರ ಪ್ರಿಮಾಕ್ವಿನ್ (Primaquine)ನ್ನು ಸೇವಿಸಬಹುದು. ಇತ್ತೀಚೆಗೆ ಮಲೇರಿಯಾಕ್ಕೆ ಟೆಟ್ರಾಸೈಕ್ಲಿನ್‌ನ್ನು ಕೂಡ ಬಳಸುತ್ತಾರೆ.

## ಕ್ಲೋರೋಕ್ವಿನ್ (Chloroquine)

ಕ್ಲೋರೋಕ್ವಿನ್ ಫಾಸ್ಫೇಟ್ (Chloroquine phosphate) ಮತ್ತು ಕ್ಲೋರೋಕ್ವಿನ್ ಸಲ್ಫೇಟ್ (Chloroquine sulphate) ಎರಡು ರೂಪದಲ್ಲಿ ಬರುತ್ತದೆ. ಅವುಗಳ ಪ್ರಮಾಣ ಬೇರೆ ಬೇರೆಯದಿವೆ. ಕಾರಣ ನೀವು ಯಾವುದನ್ನು ಉಪಯೋಗಿಸುತ್ತಿದ್ದೀರಿ, ಅದರ ಪ್ರಮಾಣವೇನು ನೋಡಿಕೊಳ್ಳಿ.

ಕೆಲವು ಪ್ರದೇಶಗಳಲ್ಲಿ ಮತ್ತು ಕೆಲವು ರೀತಿಯ ಮಲೇರಿಯಾಕ್ಕೆ ಕ್ಲೋರೊಕ್ವಿನ್ ಜೊತೆಗೆ ಇನ್ನೊಂದು ಔಷಧವನ್ನೂ ಉಪಯೋಗಿಸಬೇಕು. ಇದಕ್ಕೆ ಆರೋಗ್ಯ ಕಾರ್ಯಕರ್ತರ ಸಲಹೆ ಪಯಿರಿ.

## ಕ್ಲೋರೋಕ್ವಿನ್ ಫಾಸ್ಫೇಟ್ (Chloroquine phosphate).

ಜನಪ್ರಿಯ ಬ್ರಾಂಡ್: ಲಾರೋವರ್ (Larover), ಲಾರ್ಕ್ವಿನ್ (Larquin).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ____

೨೫೦ ಮಿ.ಗ್ರಾಂ ಮಾತ್ರೆಯಾಗಿ ಬರುತ್ತದೆ. ಅದರಲ್ಲಿ ೧೫೦ ಮಿ.ಗ್ರಾಂ. ಕ್ಲೋರೋಕ್ವಿನ್ ಇರುತ್ತದೆ. ಅಥವಾ ೫೦೦ ಮಿ.ಗ್ರಾಂ ಮಾತ್ರೆಯಲ್ಲಿ ೩೦೦ ಮಿ.ಗ್ರಾಂ ಕ್ಲೋರೋಕ್ವಿನ್ ಇರುತ್ತದೆ.

ಪ್ರಮಾಣ; ೨೫೦ ಮಿ.ಗ್ರಾಂ ಮಾತ್ರೆಯನ್ನು ಉಪಯೋಗಿಸಿ,
ಧಿಡೀರ್ ಮಲೇರಿಯಾ ಜೋರಾಗಿ ಬಂದರೆ
ಮೊದಲ ಡೋಸ್ ನಲ್ಲಿ:
ದೊಡ್ಡವರಿಗೆ ೪ ಮಾತ್ರೆಗಳು (೧೦೦೦ ಮಿ.ಗ್ರಾಂ)
೧೦-೧೫ ವರ್ಷದ ಮಕ್ಕಳಿಗೆ- ೩ ಮಾತ್ರೆಗಳು (೭೫೦ ಮಿ.ಗ್ರಾಂ)
೬-೧೨ ವರ್ಷದ ಮಕ್ಕಳಿಗೆ- ೨ ಮಾತ್ರೆಗಳು (೫೦೦ ಮಿ.ಗ್ರಾಂ)
೩-೫ ವರ್ಷದ ಮಕ್ಕಳಿಗೆ- ೧ ಮಾತ್ರೆ (೨೫೦ ಮಿ.ಗ್ರಾಂ)
೧-೨ ವರ್ಷದ ಮಕ್ಕಳಿಗೆ- ೧/೨ ಮಾತ್ರೆ (೧೨೫ ಮಿ.ಗ್ರಾಂ)
ಶಿಶುವಿಗೆ- ೧/೪ ಮಾತ್ರೆ (೬೩ ಮಿ.ಗ್ರಾಂ)
ಆ ನಂತರ ಕೆಳಗಿನ ಪ್ರಮಾಣದ ಮೊದಲ ಡೋಸ್ ಮುಗಿದ ೬ ತಾಸುಗಳ ನಂತರ, ೧ ದಿನದ ನಂತರ, ೨ ದಿನಗಳ ನಂತರ ಕೊಡಿ .
ದೊಡ್ಡವರಿಗೆ- ೨ ಮಾತ್ರೆಗಳು (೫೦೦ ಮಿ.ಗ್ರಾಂ)
೬-೯ ವರ್ಷದ ಮಕ್ಕಳಿಗೆ- ೧ ಮಾತ್ರೆ (೨೫೦ ಮಿ.ಗ್ರಾಂ)
೩-೫ ವರ್ಷದ ಮಕ್ಕಳಿಗೆ- ೧/೨ ಮಾತ್ರೆ (೧೨೫ ಮಿ.ಗ್ರಾಂ)
೧-೨ ವರ್ಷದ ಮಕ್ಕಳಿಗೆ- ೬೩ ಮಿ.ಗ್ರಾಂ)
೧ ವರ್ಷದ ಒಳಗಿನ ಮಗುವಿಗೆ- ೧/೮ ಮಾತ್ರೆ (೩೨ ಮಿ.ಗ್ರಾಂ)
ಮಲೇರಿಯಾ ತಡೆಗೆ: (ಕ್ಲೋರೋಕ್ವಿನ್‌ಗೆ ಪ್ರತಿರೋಧ ಬೆಳೆಸಿಕೊಂಡಿದ್ದರೆ)
ಆ ಪ್ರದೇಶಕ್ಕೆ ಹೊರಡುವುದಕ್ಕೂ ಒಂದು ವಾರ ಮೊದಲೇ ಆರಂಭಿಸಿ. ಅಲ್ಲಿಂದ ಹೊರಟ ನಂತರವೂ ನಾಲ್ಕು ವಾರಗಳ ಕಾಲ ತೆಗೆದುಕೊಳ್ಳಬೇಕು.
ದೊಡ್ಡವರಿಗೆ- ೨ ಮಾತ್ರೆಗಳು
೬-೯ ವರ್ಷ ಮಕ್ಕಳಿಗೆ-೧ ಮಾತ್ರೆ
೩-೫ ವರ್ಷದ ಮಕ್ಕಳಿಗೆ- ೧/ ೨ ಮಾತ್ರೆ
೧-೨ ವರ್ಷದ ಮಕ್ಕಳಿಗೆ- ೧/ ೪ ಮಾತ್ರೆ
೧ ವರ್ಷದೊಳಗಿನ ಮಗುವಿಗೆ ೧/ ೮ ಮಾತ್ರೆ

## ಕ್ಲೋರೋಕ್ವಿನ್ ಸಲ್ಫೇಟ್ (Chloroquine sulphate)

ಜನಪ್ರಿಯ ಬ್ರಾಂಡ್:
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ____

೨೦೦ ಮಿ.ಗ್ರಾಂ ಮಾತ್ರೆಗಳು ಬರುತ್ತವೆ (ಅದರಲ್ಲಿ ೧೫೦ ಮಿ.ಗ್ರಾಂ ಕ್ಲೋರೋಕ್ವಿನ್ ಇರುತ್ತದೆ.
ಪ್ರಮಾಣ : ೨೦೦ ಮಿ.ಗ್ರಾಮಿನ ಮಾತ್ರೆಗಳು ಬರುತ್ತವೆ.
ಧಿಡೀರನೆ ತೀವ್ರವಾಗಿ ಮಲೇರಿಯಾ ರೋಗ ಬಂದರೆ ಔಷಧದ ಪ್ರಮಾಣ:
ದೊಡ್ಡವರಿಗೆ- ೪ ಮಾತ್ರೆಗಳು (೮೦೦ ಮಿ.ಗ್ರಾಂ).
೧೦-೧೫ ವರ್ಷದ ಮಕ್ಕಳಿಗೆ- ೩ ಮಾತ್ರೆಗಳು (೬೦೦ ಮಿ.ಗ್ರಾಂ).
೬-೧೨ ವರ್ಷದ ಮಕ್ಕಳಿಗೆ (೨ ಮಾತ್ರೆಗಳು ೪೦೦ ಮಿ.ಗ್ರಾಂ).
೩-೫ ವರ್ಷದ ಮಕ್ಕಳಿಗೆ (೧ ಮಾತ್ರೆ ೨೦೦ ಮಿ.ಗ್ರಾಂ)
೧-೨ ವರ್ಷದ ಮಕ್ಕಳಿಗೆ- ೧/೨ ಮಾತ್ರೆ (೧೦೦ ಮಿಗ್ರಾಂ).
೧ ವರ್ಷದೊಳಗಿನ ಮಗುವಿಗೆ ೧/೪ ಮಾತ್ರೆ (೫೦ ಮಿ.ಗ್ರಾಂ).

ಆ ನಂತರ ಎರಡನೇ ಡೋಸ್‌ನ್ನು ಮೊದಲ ಡೋಸ್ ಕೊಟ್ಟ ೬ ತಾಸುಗಳ ನಂತರ, ಮುಂದಿನದು ೧ ದಿನದ ನಂತರ, ಆ ನಂತರದ್ದು ೨ ದಿನಗಳ ನಂತರ ಕೊಡಿ.
ದೊಡ್ಡವರು- ೨ ಮಾತ್ರೆಗಳು (೪೦೦ ಮಿ.ಗ್ರಾಂ)
೧೦-೧೫ ವರ್ಷದೊಳಗಿನ ಮಕ್ಕಳು- ೧ ಮತ್ತು ೧/ ೨ ಮಾತ್ರೆಗಳು (೩೦೦ ಮಿ.ಗ್ರಾಂ)
೬-೯ ವರ್ಷದೊಳಗಿನ ಮಕ್ಕಳು- ೧ ಮಾತ್ರೆ (೨೦೦ ಮಿ.ಗ್ರಾಂ)
೩-೫ ವರ್ಷದೊಳಗಿನ ಮಕ್ಕಳು ೧/೨ ಮಾತ್ರೆ (೧೦೦ ಮಿ.ಗ್ರಾಂ)
೧-೨ ವರ್ಷದೊಳಗಿನ ಮಕ್ಕಳು-೧/೪ ಮಾತ್ರೆ (೫೦ ಮಿ.ಗ್ರಾಂ)
೧ ವರ್ಷದೊಳಗಿನ ಮಕ್ಕಳು ೧/೮ ಮಾತ್ರೆ (೨೫ ಮಿ.ಗ್ರಾಂ)

**ರೋಗತಡೆಗೆ:**

ಆ ಪ್ರದೇಶಕ್ಕೆ ಹೋಗುವುದಕ್ಕೂ ೧ ವಾರ ಮೊದಲು ಆರಂಭಿಸಿ ಅಲ್ಲಿಂದ ಬಂದ ಮೇಲೆ ೪ ವಾರಗಳವರೆಗೆ ಮುಂದುವರೆಸಿ.

ದೊಡ್ಡವರಿಗೆ– ೨ ಮಾತ್ರೆಗಳು
೧೦–೧೫ ವರ್ಷದವರಿಗೆ–೧ ೧/೨ ಮಾತ್ರೆ
೬–೯ ವರ್ಷದ ಮಕ್ಕಳು ೧ ಮಾತ್ರೆ
೩–೫ ವರ್ಷದ ಮಕ್ಕಳು– ೧/೨ ಮಾತ್ರೆ
೧–೨ ವರ್ಷದೊಳಗಿನ ಮಗು–೧/೪
೧ ವರ್ಷದೊಳಗಿನ ಮಗು– ೧/೮ ಮಾತ್ರೆ
ಪಿತ್ಥಕೋಶದಲ್ಲಿ ಅಮೀಬಾಗಳಿಂದ ಹುಣ್ಣಾಗಿದ್ದರೆ ೨೦೦ ಮಿ.ಗ್ರಾಂ ಕ್ಲೋರೋಕ್ವಿನ್ ಫಾಸ್ಫೇಟ್‌ನ್ನು (Chloroquine phosphate) ಉಪಯೋಗಿಸಿ,
ದೊಡ್ಡವರಿಗೆ: ೩–೪ ಮಾತ್ರೆಗಳು ದಿನಕ್ಕೆ ಎರಡು ಬಾರಿ. ನಂತರ ೧ ೧/೨ ಮಾತ್ರೆ ಅಥವಾ ೨ ಮಾತ್ರೆ ಮೂರು ವಾರಗಳ ಕಾಲ ಪ್ರತಿ ದಿನ. ಮಕ್ಕಳ ವಯಸ್ಸು, ತೂಕಕ್ಕೆ ಅನ್ವಯಿಸಿ ಅವರಿಗೆ ಕಡಿಮೆ ಕೊಡಿ.

## ಕ್ವಿನೈನ್ (ಕ್ವಿನೈನ್ ಸಲ್ಫೇಟ್ ಅಥವಾ ಕ್ವಿನೈನ್ ಬೈ ಸಲ್ಫೇಟ್, Quinine sulphate ಅಥವಾ Quinine bisulphate).

ಜನಪ್ರಿಯ ಬ್ರಾಂಡ್: ಸಿಂಕೊನಾ (Cinkona), ಕ್ವಿನಾರ್ಸೊಲ್–೩೦೦ (Qinarsol-300), ಫಾಲ್ಸೀಕ್ವಿನ್ (Falciquin).

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ______ಬೆಲೆ________

೩೦೦ ಮಿ.ಗ್ರಾಂ ಅಥವಾ ೬೫೦ ಮಿ.ಗ್ರಾಂ ಮಾತ್ರೆಗಳು ಬರುತ್ತವೆ.

ಪ್ರತಿರೋಧ ಬೆಳೆಸಿಕೊಂಡಿರುವ ಮತ್ತು ತೀವ್ರ ಮಲೇರಿಯಾಕ್ಕೆ ಕ್ವಿನೈನ್ (Quinine) ಉಪಯೋಗಕ್ಕೆ ಬರುತ್ತದೆ. ಮಿದುಳನ್ನು ದಾಳಿ ಮಾಡುವ ಮಲೇರಿಯಾಕ್ಕೂ ಇದೇ ಉತ್ತಮ ಔಷಧ. ಬಾಯಿಯಿಂದಲೇ ಕೊಡುವುದು ಒಳ್ಳೆಯದು. ಬಾಯಿಂದ ಕೊಟ್ಟಾಗ ವಾಂತಿಯಾಗುತ್ತಿದ್ದರೆ ಪ್ರೊಮೆಥಾರಿಝೀನ್ (Promethazine) ನ ಸಹಾಯ ಪಡೆಯಿರಿ.

**ಅಡ್ಡ ಪರಿಣಾಮಗಳು:**
ಕ್ವಿನೈನ್(Quinine)ನಿಂದ ಮೈ ಬೆವರುತ್ತದೆ, ಕಿವಿಯಲ್ಲಿ ಗುಂಯ್‌ಗುಡುತ್ತದೆ, ಕೆಲವೊಮ್ಮೆ ಕಿವುಡುತನ, ದೃಷ್ಟಿಮಾಂದ್ಯ, ತಲೆತಿರುಗುವುದು, ವಾಂತಿಯಾದಂತೆನಿಸುವುದು ಹಾಗು ಭೇದಿಯಾಗುವುದು ಉಂಟಾಗಬಹುದು.

**ತೀವ್ರ ಮಲೇರಿಯಾದ ಚಿಕಿತ್ಸೆಗೆ ಕ್ವಿನೈನ್‌ನ ಉಪಯೋಗ:**
೩೦೦ ಮಿ.ಗ್ರಾಂ ಮಾತ್ರೆಯನ್ನುಪಯೋಗಿಸಿ,
೭ ದಿನ ದಿನಕ್ಕೆ ೩ ಬಾರಿ ಸೇವಿಸಿ.
ದೊಡ್ಡವರು: ೨ ಮಾತ್ರೆಗಳು (೬೦೦ ಮಿ.ಗ್ರಾಂ)
೧೦–೧೫ ವರ್ಷದ ಮಕ್ಕಳಿಗೆ: ೧ ೧/೨ ಮಾತ್ರೆ (೪೫೦ ಮಿ.ಗ್ರಾಂ)
೬–೯ ವರ್ಷ: ೧ ಮಾತ್ರೆ (೩೦೦ ಮಿ.ಗ್ರಾಂ)
೩–೫ ವರ್ಷದ ಮಕ್ಕಳು: ೧/೨ ಮಾತ್ರೆ (೧೫೦ ಮಿ.ಗ್ರಾಂ)
೧–೨ ವರ್ಷದ ಮಗು–೧/೪ ಮಾತ್ರೆ (೭೫ ಮಿ.ಗ್ರಾಂ)
೧ ವರ್ಷದೊಳಗಿನ ಮಗು– ೧/೮ ಮಾತ್ರೆ (೩೮ ಮಿ.ಗ್ರಾಂ)
ರೋಗಿಗೆ ವಾಂತಿ ಇದ್ದು ಔಷಧ ನುಂಗಲು ಆಗದಿದ್ದಲ್ಲಿ ಇಂಜೆಕ್ಷನ್ ತೆಗೆದುಕೊಳ್ಳುವುದು ಉತ್ತಮ.

## ಮೆಫ್ಲೊಕ್ವಿನ್ (Mefloquine)

ಜನಪ್ರಿಯ ಬ್ರಾಂಡ್: ಕೋನ್ಫಾಲ್ (Confal), ಮೆಫ್ಲೊಟಾಸ್ (Meflotas).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ______ಬೆಲೆ________
ಇವು ೨೫೦ ಮಿ.ಗ್ರಾಂ ಮಾತ್ರೆಗಳಾಗಿ ಬರುತ್ತವೆ.

ಕ್ಲೊರೊಕ್ವಿನ್‌ಗೆ ಪ್ರತಿರೋಧ ಬೆಳೆಸಿಕೊಂಡ ಮಲೇರಿಯಾಕ್ಕೆ ಮೆಫ್ಲೊಕ್ವಿನ್ ಉತ್ತಮ ಔಷಧವಾಗಬಹುದು.

**ಅಡ್ಡಪರಿಣಾಮಗಳು ಮತ್ತು ಮುನ್ನೆಚ್ಚರಿಕೆ:**
ಮೆಫ್ಲೊಕ್ವಿನ್ ತೆಗೆದುಕೊಂಡಾದ ನಂತರ ಮಾನಸಿಕ ದ್ವಂದ್ವ, ವಿಚಿತ್ರವಾದ ವರ್ತನೆ, ಎಚ್ಚರದಪ್ಪುವುದು, ಇವೆಲ್ಲ ಆಗಬಹುದು. ಇಂಥ ಯಾವುದೇ ಚಿನ್ಹೆ ಕಂಡುಬಂದರೆ ಕೂಡಲೆ ಔಷಧವನ್ನು ನಿಲ್ಲಿಸಿ. ಎಪಿಲೆಪ್ಸಿ ಅಥವಾ ಮಾನಸಿಕ ತೊಂದರೆ ಇರುವವರು

ಮೆಫ್ಲೊಕ್ವಿನ್‌ನ್ನು ತೆಗೆದುಕೊಳ್ಳಬಾರದು. ಗರ್ಭಿಣಿಯರೂ ಅಷ್ಟೇ. ಬೇರೆ ಯಾವ ಔಷಧವೂ ಸಿಗದಿದ್ದರೆ ಮಾತ್ರ ತೆಗೆದುಕೊಳ್ಳಿ. ಹೃದಯದ ತೊಂದರೆ ಇರುವವರು ಈ ಔಷಧ ತೆಗೆದುಕೊಳ್ಳಬೇಕಾದರೆ ನುರಿತ ಡಾಕ್ಟರರ ಸಲಹೆ ಪಡೆಯಬೇಕು. ಹೊಟ್ಟೆತುಂಬ ಊಟ ಮಾಡಿ ಮಾತ್ರೆ ತೆಗೆದುಕೊಳ್ಳಿ. ಜೋಲಿ ಹೋಗುವುದು, ಹೊಟ್ಟೆಯಲ್ಲಿ ಇರುಸು ಮುರುಸು, ತಲೆನೋವು, ದೃಷ್ಟಿ ತೊಂದರೆ, ಇವೆಲ್ಲ ಇನ್ನಿತರ ಅಡ್ಡಪರಿಣಾಮಗಳು. ಪ್ರಮಾಣವನ್ನು (ಡೋಸ್ ನ್ನು) ಜಾಸ್ತಿ ಮಾಡಿದರೆ ಈ ಅಡ್ಡ ಪರಿಣಾಮಗಳೂ ಜಾಸ್ತಿಯಾಗುತ್ತವೆ, ತೀವ್ರವಾಗುತ್ತವೆ.

**ಪ್ರಮಾಣ: (ಡೋಸ್)**

**ತೀವ್ರ ತರಹದ ಮಲೇರಿಯಾ ಚಿಕಿತ್ಸೆಗೆ :**

ಒಂದು ಬಾರಿ ದೊಡ್ಡವರಿಗೆ: ೫ ಮಾತ್ರೆಗಳು (೧೨೫೦ ಮಿ.ಗ್ರಾಂ)

೧೨-೧೫ ವರ್ಷದ ಮಕ್ಕಳಿಗೆ: ೪ ಮಾತ್ರೆಗಳು (೧೦೦೦ ಮಿ.ಗ್ರಾಂ)

೮-೧೨ ವರ್ಷದ ಮಕ್ಕಳಿಗೆ ೩ ಮಾತ್ರೆಗಳು (೭೫೦ ಮಿ.ಗ್ರಾಂ)

೫-೭ ವರ್ಷದ ಮಕ್ಕಳಿಗೆ: ೨ ಮಾತ್ರೆಗಳು (೫೦೦ ಮಿ.ಗ್ರಾಂ)

೧-೪ ವರ್ಷದ ಮಕ್ಕಳಿಗೆ: ೧ ಮಾತ್ರೆ (೨೫೦ ಮಿ.ಗ್ರಾಂ)

೧ ವರ್ಷದೊಳಗಿನ ಮಗುವಿಗೆ: ೧/೨ ಮಾತ್ರೆ (೧೨೫ ಮಿ.ಗ್ರಾಂ)

**ರೋಗತಡೆಗೆ:**

ಮಲೇರಿಯಾ ಪ್ರದೇಶಕ್ಕೆ ಹೋಗಿ ಬಂದ ನಾಲ್ಕು ವಾರಗಳವರೆಗೂ ವಾರಕ್ಕೊಂದು ಬಾರಿಯಂತೆ ಕೊಡಿ.

ದೊಡ್ಡವರು- ೧ ಮಾತ್ರೆ(೨೫೦ ಮಿ.ಗ್ರಾಂ).

೧೨-೧೫ ವರ್ಷದ ಮಕ್ಕಳು- ೧ ಮಾತ್ರೆ (೨೫೦ ಮಿ.ಗ್ರಾಂ).

೮-೧೧ ವರ್ಷದ ಮಕ್ಕಳು- ೩/ ೪ ಮಾತ್ರೆ (೧೮೮ ಮಿ.ಗ್ರಾಂ).

೫-೭ ವರ್ಷದ ಮಕ್ಕಳು_ ೧/೨ ಮಾತ್ರೆ (೧೨೫ ಮಿ.ಗ್ರಾಂ).

೧-೪ ವರ್ಷದ ಮಕ್ಕಳು ೧/೪ ಮಾತ್ರೆ (೬೩ ಮಿ.ಗ್ರಾಂ).

**೧ ವರ್ಷದೊಳಗಿನ ಮಕ್ಕಳಿಗೆ ಬೇಡ.**

## <u>ಪೈರಿಮೀತಮಿನ್ ಜೊತೆ ಸಲ್ಫಾಡೋಕ್ಸಿನ್</u> <u>(Pyrimethamine + Sulfadoxine)</u>

ಜನಪ್ರಿಯ ಬ್ರಾಂಡ್: ಮಾಲಾಸಲ್ಫ (Malasulf), ಲಾರಿಡೋಕ್ಸ (Laridox).

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್

ಹೆಸರು______ಪ್ರಮಾಣ_____ಬೆಲೆ_______

ಪೈರಿಮೀತಮಿನ್ ಜೊತೆ ಸುಲ್ಫಾಡೋಕ್ಸಿನ್ ಎರಡು ಔಷಧಗಳ ಸಂಯುಕ್ತ. ಪ್ರತಿರೋಧ ಬೆಳೆಸಿಕೊಂಡ ಮಲೇರಿಯಾಕ್ಕೆ ಉತ್ತಮ.

**ಸೂಚನೆ:-** ಸಲ್ಫಾ ಔಷಧದಿಂದ ಹಿಂದೆ ಅಡ್ಡ ಪರಿಣಾಮ ಆಗದಿದ್ದಲ್ಲಿ ಮಾತ್ರ ಸೇವಿಸಬೇಕು.

ಪೈರಿಮೀತಮಿನ್ + ಸಲ್ಫಾಡೋಕ್ಸಿನ್ ಔಷಧದಿಂದ ತುರಿಕೆ ಅಥವಾ ಕಲೆ ಆದಲ್ಲಿ, ಕೂಡಲೆ ಔಷಧ ನಿಲ್ಲಿಸಿ, ಹಾಗೂ **ಬಹಳಷ್ಟು ನೀರು ಕುಡಿಯಿರಿ.**

**ಪ್ರಮಾಣ (ಡೋಸ್):**

ದೊಡ್ಡವರಿಗೆ ೩ ಮಾತ್ರೆ.

೯-೧೪ ವರ್ಷದವರಿಗೆ; ೨ ಮಾತ್ರೆ.

೪-೮ ವರ್ಷದವರಿಗೆ; ೧ ಮಾತ್ರೆ.

೧-೩ ವರ್ಷದವರಿಗೆ; ೧/೨ ಮಾತ್ರೆ.

೧ ವರ್ಷಕ್ಕಿಂತ ಚಿಕ್ಕ ಮಗುವಿಗೆ; ೧/೪ ಮಾತ್ರೆ.

## <u>ಪ್ರೊಗ್ವಾನಿಲ್ (Proguanil)</u>

ಜನಪ್ರಿಯ ಬ್ರಾಂಡ್: ಲಾವೇರಾನ್ (Laveran).

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್

ಹೆಸರು______ಪ್ರಮಾಣ_____ಬೆಲೆ_______.

೧೦೦ ಮಿ.ಗ್ರಾಂ ಮಾತ್ರೆ ರೂಪದಲ್ಲಿ ಲಭ್ಯ.

ಪ್ರೋಗ್ವಾನಿಲ್‌ನ್ನು ಸಾಮಾನ್ಯವಾಗಿ ಕ್ಲೋರೋಕ್ವಿನ್ ಜೊತೆಗೆ, ಪ್ರತಿರೋಧ ಬೆಳೆಸಿಕೊಂಡ ಮಲೇರಿಯಾ ತಡೆಯುವದಕ್ಕೆ ಉತ್ತಮ. ಚಿಕಿತ್ಸೆಗೆ ಇದು ಉಪಯೋಗ ಇಲ್ಲ.

**ಪ್ರಮಾಣ (ಡೋಸ್):**

ಪ್ರತಿ ದಿವಸ ಔಷಧಿ ಕೊಡಿ. ಮಲೇರಿಯಾ ಇರುವ ಕ್ಷೇತ್ರ ಮುಟ್ಟಿದ ದಿವಸದಿಂದ ಶುರು ಮಾಡಿ, ಕ್ಷೇತ್ರ ಬಿಟ್ಟ ಬಂದ ಮೇಲೆ ೨೮ ದಿವಸಗಳವರೆಗೆ ತೆಗೆದುಕೊಳ್ಳಿ.

**ದೊಡ್ಡವರಿಗೆ;** ೨ ಮಾತ್ರೆ (೨೦೦ ಮಿ.ಗ್ರಾಂ).
೯–೧೪ ವರ್ಷದವರಿಗೆ; ೧ ೧/೨ ಮಾತ್ರೆ (೧೫೦ ಮಿ.ಗ್ರಾಂ).
೩–೬ ವರ್ಷದವರಿಗೆ; ೧ ಮಾತ್ರೆ (೧೦೦ ಮಿ.ಗ್ರಾಂ).
೧–೨ ವರ್ಷದವರಿಗೆ; ೧/೨ ಮಾತ್ರೆ (೫೦ ಮಿ.ಗ್ರಾಂ).
೧ ವರ್ಷಕ್ಕಿಂತ ಚಿಕ್ಕ ಮಗುವಿಗೆ ೧/೪ ಮಾತ್ರೆ (೨೫ ಮಿ.ಗ್ರಾಂ).

## ಪ್ರಿಮಾಕ್ವಿನ್ (Primaquine)

ಜನಪ್ರಿಯ ಬ್ರ್ಯಾಂಡ್: ಮಾಲಿರಿಡ್ (Malirid),
ಪಿ ಎಂ ಕ್ಯು–ಇಂಗಾ (PMQ-INGA).
ನಿಮ್ಮ ಪ್ರದೇಶದಲ್ಲಿಯ ಬ್ರ್ಯಾಂಡ್
ಹೆಸರು______ಪ್ರಮಾಣ_____ಬೆಲೆ______.
ಸಾಮಾನ್ಯವಾಗಿ ೨೬.೩ ಮಿ,ಗ್ರಾಂನ ಪ್ರಿಮಾಕ್ವಿನ್ ಫೋಸ್ಫೇಟ್ (Primaquine phosphate) ಮಾತ್ರೆ, ಅದರಲ್ಲಿ ೧೫ ಮಿ.ಗ್ರಾಂ ಪ್ರಿಮಾಕ್ವಿನ್ ಮೂಲ ಇರುತ್ತದೆ.
ಪ್ರಿಮಾಕ್ವಿನ್ ಮಲೇರಿಯಾ ಚಿಕಿತ್ಸೆ ಮುಗಿದ (ಕ್ಲೋರೋಕ್ವಿನ್ ಅಥವಾ ಬೇರೆ ಔಷಧ) ನಂತರ ಕೊಡಲಾಗುತ್ತದೆ, ಇದರಿಂದ ಮಲೇರಿಯಾ ಪುನಃ ಬರುವದಿಲ್ಲ. ಪ್ರಿಮಾಕ್ವಿನ್ ಮಲೇರಿಯಾ ಚಿಕಿತ್ಸೆಗೆ ಉಪಯೋಗವಿಲ್ಲ.

**ಪ್ರಮಾಣ (ಡೋಸ್):**
೧೪ ದಿನಗಳ ಕಾಲ ಪ್ರತಿ ದಿನಕ್ಕೊಮ್ಮೆ.
**ಪ್ರತಿ ಡೋಸ್ ನಲ್ಲಿ,**
ದೊಡ್ಡವರಿಗೆ–೧ ಮಾತ್ರೆ (೧೫ ಮಿ.ಗ್ರಾಂ)
೮–೧೨ ವರ್ಷದ ಮಕ್ಕಳಿಗೆ– ೧/೨ ಮಾತ್ರೆ (೭ ಮಿ.ಗ್ರಾಂ)
೩–೭ ವರ್ಷದವರಿಗೆ–೧/೪ ಮಾತ್ರೆ (೪ ಮಿ.ಗ್ರಾಂ.)

### ಅಮೀಬಿಯಾಸಿಸ್ ಮತ್ತು ಜಿಯಾರ್ಡಿಯಾಸಿಸ್ ಸೋಂಕಿಗೆ

ಅಮೀಬಾದಿಂದ ಆಗುವ ಭೇದಿ ಅಥವಾ ಅತಿಭೇದಿಯ ಮುಖ್ಯ ಲಕ್ಷಣವೆಂದರೆ ಪದೇ ಪದೇ ಮಲವಿರ್ಸನೆ ಆಗುತ್ತಿದ್ದು ಮಲದಲ್ಲಿ ಸಿಂಬಳ ಅಥವಾ ರಕ್ತ ಹೋಗುತ್ತಿರಬಹುದು.
ಹೊಟ್ಟೆಯಲ್ಲಿ ಮುರಿತವಿದ್ದು ಜ್ವರ ಇರುವುದಿಲ್ಲ. ಅಮೀಬಾದ ಭೇದಿಗೆ ಡೈಲೊಕ್ಷಿನೇಡ್ ಫ್ಯುರೇಟ್ (Dilaonaxite furaete) ಅಥವಾ ಟೆಟ್ರಾಸೈಕ್ಲಿನ್ (Tetracycline)ದೊಂದಿಗೆ ಮೆಟ್ರಾನಿಡಾರೆಝೋಲ್ (Metranidazle) ತೆಗೆದುಕೊಂಡರೆ ಅತ್ಯುತ್ತಮ. ಮೆಟ್ರಾನಿಡಾರೆಝೋಲ್ ಸಿಗದಿದ್ದರೆ ಕ್ಲೋರೋಕ್ವಿನ್ ಉಪಯೋಗಿಸುತ್ತಾರೆ. ಅಮೀಬಾದ ಹುಣ್ಣುಗಳಾಗಿದ್ದರೂ ಕ್ಲೋರೋಕ್ವಿನ್ ಉಪಯೋಗಿಸುತ್ತಾರೆ.

ಜೀರ್ಣನಾಳದಲ್ಲಿನ ಎಲ್ಲ ಅಮೀಬಾಗಳನ್ನು ಕೊಲ್ಲಲು ೨–೩ ವಾರಗಳ ಧೀರ್ಘ ಅವಧಿಯ ಚಿಕಿತ್ಸೆ ಮಾಡಬೇಕಾಗುತ್ತದೆ. ರೋಗಲಕ್ಷಣಗಳು ಮಾಯವಾಗುತ್ತಲೇ ಔಷಧ ನಿಲ್ಲಿಸಿ, ದೇಹವು ಮುಂದೆ ರಕ್ಷಣಾ ಕ್ರಮಗಳನ್ನು ಬೆಳೆಸಿಕೊಳ್ಳುವಂತೆ ಮಾಡುವುದೊಳ್ಳೆಯದು. ಪದೇ ಪದೇ ಸೋಂಕಿನ ಸಾಧ್ಯತೆ ಹೆಚ್ಚಿರುವ ಜಾಗಗಳಲ್ಲಂತೂ ಈ ಕ್ರಮವೇ ಒಳ್ಳೆಯದು. ಜಿಯಾರ್ಡಿಯಾಸಿಸ್‌ದ ಭೇದಿಯಾದಾಗ ಬುರುಗಿನಿಂದ ಕೂಡಿದ ಮಲ ಹಳದಿ ಬಣ್ಣದಲ್ಲಿದ್ದು ರಕ್ತ ಮತ್ತು ಸಿಂಬಳ ಅದರಲ್ಲಿ ಇರುವುದಿಲ್ಲ. ಮೆಟ್ರಾನಿಡಾರೆಝೋಲ್ ಅತ್ಯುತ್ತಮ.

## ಮೆಟ್ರಾನಿಡಾರೆಝೋಲ್ (Metranidazole)

ಜನಪ್ರಿಯ ಬ್ರ್ಯಾಂಡ್: ಫ್ಲೆಜಿಲ್ (Flagyl),
ಮೆಟ್ರೋಜಿಲ್ (Metrogyl).

ನಿಮ್ಮ ಪ್ರದೇಶದಲ್ಲಿಯ ಬ್ರ್ಯಾಂಡ್
ಹೆಸರು_____ಪ್ರಮಾಣ_____ಬೆಲೆ______.
೨೦೦, ೨೫೦ ಮತ್ತು ೫೦೦ ಗ್ರಾಂ ಮಾತ್ರೆಗಳ ರೂಪದಲ್ಲಿ ಬರುತ್ತದೆ.
ಅಮೀಬಾ, ಜಿಯಾರ್ಡಿಯಾಗಳಿಂದ ಜೀರ್ಣನಾಳಕ್ಕೆ ಸೋಂಕು ತಗುಲಿದ್ದರೆ, ಎಂಪಿಸಿಲಿನ್ (Ampicillin) ನಂಥ ಜೀವಿರೋಧಕಗಳಿಂದಾಗಿ ಭೇದಿ ಶುರುವಾಗಿದ್ದರೆ,

ಯೋನಿಗೆ ಟ್ರೈಕೋಮೊನಾಸ ಸೋಂಕು ತಗುಲಿದ್ದರೆ ಅದಕ್ಕೆ ಮೆಟ್ರನಿಡಾರ್ಝೋಲ್ ಉಪಯುಕ್ತ ಔಷಧ.
ಮೆಟ್ರಾನಿಡಾರ್ಝೋಲ್‌ನ್ನು ತೆಗೆದುಕೊಳ್ಳುತ್ತಿದ್ದಾಗ ಸೆರೆ, ಸೇಂದಿ ಅಥವಾ ಸಾರಾಯಿ ಕುಡಿಯಬಾರದು. ಕುಡಿದರೆ ತೀವ್ರವಾಗಿ ವಾಂತಿ ಬಂದಂತಾಗುತ್ತದೆ. **ಗರ್ಭಿಣಿಯರು ಮೆಟ್ರಾನಿಡಾರ್ಝೋಲ್‌ನ್ನು ಸೇವಿಸದಿರುವುದು ಒಳ್ಳೆಯದು.** ಅದರಿಂದ ಹುಟ್ಟುವ ಮಗುವಿಗೆ ಅಂಗವಿಕಲತೆ ಬರುವ ಸಾಧ್ಯತೆ ಇದೆ. ಮೊದಲ ಮೂರು ತಿಂಗಳಂತೂ ಎಚ್ಚರಿಕೆ ವಹಿಸಲೇ ಬೇಕು. ಹಾಲೂಡುತ್ತಿರುವ ತಾಯಂದಿರು ಕೂಡ ಮೆಟ್ರಾನಿಡಾರ್ಝೋಲ್ ತೆಗೆದುಕೊಂಡ ೨೪ ತಾಸುಗಳ ಕಾಲ ಮಗುವಿಗೆ ಹಾಲೂಡಿಸಬಾರದು. ಪಿತ್ಥಕೋಶದ ತೊಂದರೆ ಇರುವವರೂ ಮೆಟ್ರಾನಿಡಾರ್ಝೋಲ್‌ನ್ನು ತೆಗೆದುಕೊಳ್ಳಬಾರದು.

**ಜಿಯಾರ್ಡಿಯಾ ಸೋಂಕಿಗೆ:–**
೫ ದಿನಗಳ ಕಾಲ ದಿನಕ್ಕೆ ೩ ಬಾರಿ ಔಷಧ ಕೊಡಿ.
ಪ್ರತಿ ಡೋಸ್‌ನಲ್ಲಿಯೂ
ದೊಡ್ಡವರಿಗೆ– ೨೫೦ ಮಿ.ಗ್ರಾಂ (೧ ಮಾತ್ರೆ)
೮–೧೨ ವರ್ಷದ ಮಕ್ಕಳು– ೨೫೦ ಮಿಗ್ರಾಂ (೧ ಮಾತ್ರೆ)
೩–೭ ವರ್ಷ ಮಕ್ಕಳು ೧೨೫ ಮಿ.ಗ್ರಾಂ (೧/೨ ಮಾತ್ರೆ)
೩ ವರ್ಷದೊಳಗಿನ ಮಕ್ಕಳು ೬೨ ಮಿ.ಗ್ರಾಂ. (೧/೪ ಮಾತ್ರೆ)
**ಯೋನಿಯಲ್ಲಿ ಟ್ರೈಕೊಮೊನಾಸ ಸೋಂಕು ಆಗಿದ್ದಕ್ಕೆ;**
ಹೆಂಗಸು ಒಂದೇ ಸಾರೆ ೮ ಮಾತ್ರೆಗಳನ್ನು (೨ ಮಿ. ಗ್ರಾಂ) ತೆಗೆದುಕೊಳ್ಳಬೇಕು. ರೋಗ ಬಹಳ ತೀವ್ರವಿಲ್ಲದಿದ್ದರೆ ಯೋನಿಯಲ್ಲಿ ಹಾಕುವ ಮಾತ್ರೆಗಳನ್ನು ದಿನಕ್ಕೆ ಎರಡು ಬಾರಿಯಂತೆ ೧೦ ದಿನಗಳ ಕಾಲ ಹಾಕಿಕೊಳ್ಳಬೇಕು.
ಗಂಡ ಹೆಂಡತಿ ಇಬ್ಬರೂ ಒಂದೇ ಸಾರಿ ಟ್ರೈಕೊಮೊನಾಸ್‌ಗೆ ಚಿಕಿತ್ಸೆ ಪಡೆಯಬೇಕು. (ಗಂಡಸಿಗೆ ರೋಗ ಲಕ್ಷಣಗಳ್ಯಾವವೂ ಕಾಣದಿದ್ದರೂ ಕೂಡ ಅವರು ಹೆಂಡತಿಯೊಂದಿಗೆ ಔಷಧ ತೆಗೆದುಕೊಳ್ಳಬೇಕು.)
ಯೋನಿಯಲ್ಲಿ ಬ್ಯಾಕ್ಟೀರಿಯಾದ ಸೋಂಕು ಆಗಿದ್ದರೆ ಮೆಟ್ರಾನಿಡಾರ್ಝೋಲ್‌ನ ೫೦೦ ಮಿ.ಗ್ರಾಂನ ೨ ಮಾತ್ರೆಗಳನ್ನು ದಿನಕ್ಕೆ ಎರಡು ಬಾರಿ ೫ ದಿನಗಳ ಕಾಲ ತೆಗೆದುಕೊಳ್ಳಬೇಕು. ಸೋಂಕು ಮತ್ತೆ ಆದರೆ ಗಂಡ ಹೆಂಡತಿ ಇಬ್ಬರೂ ಒಂದೇ ಬಾರಿಗೆ ಔಷಧ ತೆಗೆದುಕೊಳ್ಳಬೇಕು.

**ಅಮೀಬಿಯಾದ ಭೇದಿಗೆ,**
ದಿನಕ್ಕೆ ೨೫–೫೦ ಮಿ.ಗ್ರಾಂ/ಕೆಜಿಗೆ
೨೫೦ ಮಿ.ಗ್ರಾಂ ನ ಮಾತ್ರೆ ಉಪಯೋಗಿಸಿ,
ದಿನಕ್ಕೆ ೩ ಬಾರಿ ೫ ರಿಂದ ಹತ್ತು ದಿನಗಳ ಕಾಲ.
**ಒಂದು ಡೋಸ್ ನಲ್ಲಿ,**
ದೊಡ್ಡವರಿಗೆ– ೭೫೦ ಮಿ.ಗ್ರಾಂ (೩ ಮಾತ್ರೆಗಳು)
೮–೧೨ ವರ್ಷದ ಮಕ್ಕಳಿಗೆ– ೫೦೦ ಮಿ.ಗ್ರಾಂ (೨ ಮಾತ್ರೆಗಳು)
೪–೭ ವರ್ಷದ ಮಕ್ಕಳಿಗೆ– ೩೭೫ ಮಿ.ಗ್ರಾಂ (೧ ೧/೨ ಮಾತ್ರೆ)
೨–೩ ವರ್ಷದ ಮಕ್ಕಳಿಗೆ– ೨೫೦ ಮಿ.ಗ್ರಾಂ (೧ ಮಾತ್ರೆ)
೨ ವರ್ಷದೊಳಗಿನ ಮಕ್ಕಳಿಗೆ– ೮೦–೧೨೫ ಮಿ.ಗ್ರಾಂ (೧/೩–೧/೨ ಮಾತ್ರೆ).

## <u>ಡಿಲೊಕ್ಸನೈಡ್ ಫ್ಯುರೇಟ್</u>
## <u>(Diloxanide furoate)</u>

ಜನಪ್ರಿಯ ಬ್ರಾಂಡ್: ಅಮೀಕ್ಲಿನ್ (Amicline), ಫುರಮೈಡ್ (Furamide).

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.

೫೦೦ ಮಿ.ಗ್ರಾಂ. ಮಾತ್ರೆಗಳು ಸಿಗುತ್ತವೆ. ಅಥವಾ ಪ್ರತಿ ೫ ಮಿ.ಲಿ. ಯಲ್ಲಿ ೧೨೫ ಮಿ.ಗ್ರಾಂ ಇರುವ ದ್ರಾವಣ ಸಿಗುತ್ತದೆ.
**ಅಡ್ಡ ಪರಿಣಾಮಗಳು**
ಹೊಟ್ಟೆಯಲ್ಲಿ ಗ್ಯಾಸು, ಹೊಟ್ಟೆನೋವು ಹಾಗು ವಾಂತಿಯಾದಂತೆನಿಸುವುದು.
ಪ್ರಮಾಣ: ದಿನಕ್ಕೆ ಕೆಜಿಗೆ/೨೦ ಮಿ.ಗ್ರಾಂ.
**೫೦೦ ಮಿ.ಗ್ರಾಂ ಮಾತ್ರೆಗಳನ್ನು ಬಳಸಿ–**
ಊಟದೊಂದಿಗೆ ದಿನಕ್ಕೆ ೩ ಬಾರಿ ಕೊಡಿ. ಪೂರ್ತಿ ೧೦ ದಿನಗಳ ಕಾಲ ತೆಗೆದುಕೊಂಡರೆ ಪೂರ್ತಿಯಾಗಿ ಗುಣವಾಗಲು ಸಾಧ್ಯ.

ದೊಡ್ಡವರಿಗೆ– ೧ ಮಾತ್ರೆ (೫೦೦ ಮಿ.ಗ್ರಾಂ)
೮–೧೨ ವರ್ಷದ ಮಕ್ಕಳಿಗೆ– ೧/೨ ಮಾತ್ರೆ (೨೫೦ ಮಿ.ಗ್ರಾಂ)
೩–೭ ವರ್ಷದ ಮಕ್ಕಳಿಗೆ–೧/೪ ಮಾತ್ರೆ (೧೨೫ ಮಿ.ಗ್ರಾಂ)
೩ ವರ್ಷದೊಳಗಿನ ಮಕ್ಕಳಿಗೆ–೧/೮ ಮಾತ್ರೆ (೬೩ ಮಿ.ಗ್ರಾಂ).

## ಟೆಟ್ರಾಸೈಕ್ಲಿನ್ (Tetracycline)

೪೦೦ನೇ ಪುಟ ನೋಡಿ)

## ಕ್ಲೊರೋಕ್ವಿನ್ (Chloroquine)

(ಮೆಟ್ರಾನಿಡಾರೆಝೋಲ್ ಸಿಗದಿದ್ದಾಗ ಅಥವಾ ಅಮೀಬಾಗಳಿಂದ ಯಕೃತ್ತಿನಲ್ಲಿ (ಪಿತ್ಥಕೋಶ) ಹುಣ್ಣುಗಳಾಗಿದ್ದಾಗ.

## ಕ್ವಿನಾಕ್ರೈನ್ ಅಥವಾ ಮೆಪಾಕ್ರೀನ್ (Quinacrine, Mepacrine)

ಜನಪ್ರಿಯ ಬ್ರಾಂಡ್: ಮಾಲಾಡೀನ್ (Maladin)

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ______.
೧೦೦ ಮಿ.ಗ್ರಾಂ ಮಾತ್ರೆಗಳು ಬರುತ್ತವೆ.
ಕ್ವಿನಾಕ್ರೈನ್‌ನ್ನು ಜಿಯಾರ್ಡಿಯಾ, ಮಲೇರಿಯಾ, ಲಾಡಿಹುಳುಗಳ ಚಿಕಿತ್ಸೆಗಾಗಿ ಬಳಸಬಹುದು. ಆದರೆ ಇದು ಅತ್ಯುತ್ತಮ ಔಷಧವೇನೂ ಅಲ್ಲ. ಕಡಿಮೆ ಬೆಲೆಯದಾದ್ದರಿಂದ ಬಳಕೆ ಜಾಸ್ತಿ. ಕೆಲವೊಮ್ಮೆ ತಲೆನೋವು, ತಲೆತಿರುಗುವುದು, ವಾಂತಿಗಳನ್ನುಂಟುಮಾಡುವುದು.

**ಜಿಯಾರ್ಡಿಯಾದ ಚಿಕಿತ್ಸೆಗೆ :**

ಒಂದು ವಾರ ದಿನಕ್ಕೆ ಮೂರರಂತೆ ಉಪಯೋಗಿಸಿ.
**ಒಂದೊಂದು ಡೋಸ್‌ನಲ್ಲಿ**
ದೊಡ್ಡವರಿಗೆ– ೧೦೦ ಮಿ.ಗ್ರಾಂ ನ ೧ ಮಾತ್ರೆ
೧೦ ವರ್ಷದೊಳಗಿನ ಮಕ್ಕಳಿಗೆ– ೫೦ ಮಿ.ಗ್ರಾಂ (೧/೨ ಮಾತ್ರೆ)

**ಲಾಡಿ ಜಂತು ಗುಣಪಡಿಸಲಿಕ್ಕಾಗಿ,**
ಒಂದೇ ದೊಡ್ಡ ಡೋಸ್ ಕೊಟ್ಟರೆ ಸಾಕು.
ದೊಡ್ಡವರಿಗೆ – ೧ ಗ್ರಾಂ ೧೦ ಮಾತ್ರೆಗಳು.
೮–೧೨ ವರ್ಷದವರಿಗೆ– ೬೦೦ ಮಿ.ಗ್ರಾಂ (೬ ಮಾತ್ರೆಗಳು)
೩–೭ ವರ್ಷದವರಿಗೆ ೪೦೦ ಮಿ.ಗ್ರಾಂ (೪ ಮಾತ್ರೆಗಳು)
**ಉಪಯೋಗಿಸಬೇಡಿ. ಅಪಾಯ!**

**ಕ್ಲಿಯೋಕ್ವಿನಾಲ್, ಐಯೊಡೋಕ್ವಿನಾಲ್, ಡಿ–ಹೈಡ್ರೋಕ್ಸಿಕ್ವಿನೋಲೀನ್, ಹಾಲ್ ಕ್ವಿನಾಲ್, ಬ್ರೊಕ್ಸಿಕ್ವಿನೊಲೀನ್ ಮುಂತಾದ ಹೈಡ್ರಾಕ್ಸಿ ಕ್ವಿನೋಲೀನ್‌ಗಳನ್ನು ಭೇದಿಗೆ ಎಂದೂ ಬಳಸಬೇಡಿ.**

ಹಿಂದೆ ಭೇದಿ ಚಿಕಿತ್ಸೆಗೆಂದು ಈ ಔಷಧಗಳನ್ನು ಸಾಮಾನ್ಯವಾಗಿ ಉಪಯೋಗಿಸಲಾಗುತ್ತಿತ್ತು. ಆದರೆ ಅವು ಕುರುಡುತನ, ಅಂಗ ಹೀನತೆಯನ್ನುಂಟು ಮಾಡುವುದು, ಕಡೆಗೆ ಸಾವನ್ನು ಕೂಡ ತರಬಹುದೆಂದು ಸಾಬೀತಾಗಿದೆ. ಕಾರಣ ಇಂಥ ಅಪಾಯಕಾರಿ ಔಷಧಗಳನ್ನು ಬಳಸಬೇಡಿ.

## ಯೋನಿಯ ಸೋಂಕುಗಳಿಗಾಗಿ

ಯೋನಿಯಲ್ಲಿ ತುರಿಕೆ, ಕಿರಿಕಿರಿ, ಬಿಳಿ ಹೋಗುವುದು ಇವೆಲ್ಲ ಬೇರೆ ಬೇರೆ ಸೋಂಕುಗಳಿಂದಾಗಿ ಆಗುತ್ತವೆ. ಸೂಕ್ಷ್ಮ ಜೀವಾಣುಗಳಾದ ಟ್ರೈಕೊಮೊನಾಸ್, ಯೀಸ್ಟ್‌ಗಳು, ಮತ್ತು ಬ್ಯಾಕ್ಟೀರಿಯಾಗಳು ಇದಕ್ಕೆ ಕಾರಣವಿರಬಹುದು. ಯೋನಿಯನ್ನು ಸ್ವಚ್ಛವಾಗಿಡುವುದು ಅತಿ ಮುಖ್ಯ. ವಿನೇಗರ್ (Vinegar) ನೀರಿನಲ್ಲಿ ಯೋನಿಯನ್ನು ತೊಳೆಯುವುದರಿಂದ ಪ್ರಯೋಜನವಿದೆ. ಕೆಲವು ಮುಖ್ಯ ಔಷಧಗಳು:

## ಬಿಳಿ ವಿನೇಗರ್ (White vinegar)

**ಯೋನಿ ತೊಳೆಯಲು.**
ಬಿಳಿ ವಿನೇಗರ್ ಪೇಟೆಯ ಕಿರಾಣಿ ಅಂಗಡಿಗಳಲ್ಲಿ ಲಭ್ಯ. ಒಂದು ಲೀಟರ್ ಕುದಿಸಿದ ನೀರಿನಲ್ಲಿ ೨–೩ ಟೀ ಚಮಚ

ವಿನೆಗರ್ ಹಾಕಿ,೨೯೨ ಪುಟದಲ್ಲಿ ಹೇಳಿದಂತೆ ಒಂದು ವಾರದ ತನಕ ದಿನಕ್ಕೊಂದು ಬಾರಿ ಯೋನಿಯನ್ನು ತೊಳೆಯಿರಿ. ಯೋನಿಯೊಳಗೆ ಮಾತ್ರೆ ಹಾಕುವ ಮೊದಲು ಹೀಗೆ ತೊಳೆಯುವುದು ಉತ್ತಮ.
ಮೆಟ್ರಾನಿಡಾಝೋಲ್ ಮಾತ್ರೆಗಳನ್ನು ನುಂಗಬೇಕು ಮತ್ತು ಯೋನಿಯೊಳಗೆ ಹಾಕಿಕೊಳ್ಳಬೇಕು.
ಬ್ಯಾಕ್ಟೀರಿಯ ಸೋಂಕು ತಗುಲಿರುವಾಗ ಯೋನಿ ತೊಳೆದುಕೊಂಡರೆ ಉಪಯೋಗವಾಗಲಿಕ್ಕಿಲ್ಲ. ಆಗ ಕೇವಲ ಮೆಟ್ರಾನಿಡಾಝೋಲ್‌ನ್ನು ಉಪಯೋಗಿಸಿ.

## ನಿಸ್ಟಾಟಿನ್: (Nystatin) ಹಾಗು ಮೀಕೊನಾಝೋಲ್ (Miconazole)

ಮಾತ್ರೆ ಹಾಗು ಯೋನಿಯಲ್ಲಿ ಹಾಕುವ ಮಾತ್ರೆಗಳು

ನಿಸ್ಟಾಟಿನ್ ಜನಪ್ರಿಯ ಬ್ರಾಂಡ್:
ಮೈಕೋಸ್ಟೇಟಿನ್ (Mycostatin),
ಮೀಕೊನಾಝೋಲ್ ಜನಪ್ರಿಯ ಬ್ರಾಂಡ್:
ಕೆಂಡಿಝೋಲ್ (Candizole),
ಮೈಕೋಜಲ್ (Micogel).

ನಿಮ್ಮ ಪ್ರದೇಶದಲ್ಲಿಯ
ಹೆಸರು______ಪ್ರಮಾಣ_____ಬೆಲೆ_______.

ಇದು ಯೋನಿಗೆ ಈಸ್ಟ್‌ನ ಸೋಂಕು ತಗುಲಿದಾಗ ಬಳಸುವ ಔಷಧ.

## ಜೆಂಶಿನ್ ವೈಯೋಲೆಟ್ ೧% ದ್ರಾವಣ. (Gentian violet, Crystal violet)

ಜನಪ್ರಿಯ ಬ್ರಾಂಡ್:
ಜೆಂಶಿನ್ ವೈಯೋಲೆಟ್ (Gentian violet)

ನಿಮ್ಮ ಪ್ರದೇಶದಲ್ಲಿಯ
ಹೆಸರು______ಪ್ರಮಾಣ_____ಬೆಲೆ_______.

ಯೀಸ್ಟ್‌ನ ಸೋಂಕುಗಳಿಗೆ ದಿನಕ್ಕೆ ೩ ಬಾರಿಯಂತೆ ೩ ವಾರಗಳ ಕಾಲ ಬಳಿಯಿರಿ.

## ಪೊವಿಡೋನ್ ಐಯೋಡೀನ್ (Povidine iodine)

ಜನಪ್ರಿಯ ಬ್ರಾಂಡ್: ಬೇಟಾಡೀನ್ (Betadine), ಪೋವಿಡಿನ್ (Povidine).

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.

ಬ್ಯಾಕ್ಟೀರಿಯಾದಿಂದ ಯೋನಿಗೆ ಸೋಂಕು ತಗುಲಿರುವಾಗ ಬಳಸುವ ಔಷಧ.

ಒಂದು ಲೀಟರ್ ಕುದಿಸಿದ ಬೆಚ್ಚಗಿನ ನೀರಿನಲ್ಲಿಎರಡು ಟೀ ಚಮಚ ಪೊವಿಡೋನ್ ಐಯೋಡೀನ್‌ನ್ನು ಹಾಕಿ. ದಿನಕ್ಕೆ ಒಂದು ಬಾರಿಯಂತೆ ೧೦-೧೪ ದಿನಗಳ ಕಾಲ ಯೋನಿಯನ್ನು ಇದರಿಂದ ತೊಳೆಯಿರಿ.

## ಚರ್ಮದ ರೋಗಗಳಿಗೆ

ಆಗಾಗ್ಗೆ ಸ್ನಾನಮಾಡುವುದು, ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳುವುದು, ಇವು ಚರ್ಮ ಮತ್ತು ಜೀರ್ಣಾಂಗಗಳ ಅನೇಕ ರೋಗಗಳನ್ನು ತಡೆಯುತ್ತವೆ. ಗಾಯಗಳಿಗೆ ಪಟ್ಟಿ ಹಾಕುವ ಮೊದಲು ಸೋಪು ಮತ್ತು ಕುದಿಸಿದ ನೀರು ಉಪಯೋಗಿಸಿ ಸ್ವಚ್ಛವಾಗಿ ತೊಳೆಯಬೇಕು.

ಶಿಶುವಿನ ತಲೆಯ ಹೊಟ್ಟು, ಮೊಡವೆ, ಸಾಧಾರಣ ಇಂಪೆಡಿಗೋ (ಚರ್ಮದ ಸೋಂಕು, ಸಾಧಾರಣ ಗಜಕರ್ಣ, ಮತ್ತಿತರ ಬುರುಸುಗಳ ಸೋಂಕನ್ನು ಪದೇ ಪದೇ ತಿಕ್ಕಿ ತೊಳೆಯುವುದರಿಂದಲೇ ಹೋಗಲಾಡಿಸ ಬಹುದು. ಇದಕ್ಕೆಲ್ಲ ಔಷಧೀಯ ಗುಣವಿರುವ ಸೋಪುಗಳನ್ನು ಉಪಯೊಗಿಸುವುದು ಒಳಿತು.

## ಸಲ್ಫರ್ (Sulfur)

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.

ಹಳದಿ ಪೌಡರಿನ ರೂಪದಲ್ಲಿ ಬರುತ್ತದೆ.
ಇದು ಚರ್ಮಕ್ಕೆ ಹಚ್ಚುವ ಅನೇಕ ರೀತಿಯ ಕ್ರೀಂ ಮತ್ತು ಮುಲಮಗಳ ರೂಪದಲ್ಲಿಯೂ ಬರುತ್ತದೆ.
ಚರ್ಮದ ಅನೇಕ ತೊಂದರೆಗಳಿಗೆ ಇದು ಉಪಯುಕ್ತ.
೧ ಉಣ್ಣೆ, ಚಿಕ್ಕಾಡು, ನೊಣಗಳು ವೈ ಮುತ್ತದಂತೆ ಮಾಡಲು ಹೊಲ ಅಥವಾ ಕಾಡುಗಳಿಗೆ ಹೋಗುವಾಗ ಕಾಲು ಹಿಮ್ಮಡಿ, ಮುಂಗೈ, ಸೊಂಟ ಹಾಗು ಕುತ್ತಿಗೆಗಳಿಗೆ ಹಚ್ಚಿಕೊಳ್ಳಿ.
೨. ಹುರುಕು, ಕಜ್ಜಿ, ಚರ್ಮದೊಳಗೆ ಹುಗಿದುಕೊಳ್ಳುವ ಅತಿ ಚಿಕ್ಕ ನುಸಿಯಂಥವುಗಳ ಸೋಂಕಿಗೆ ಚಿಕಿತ್ಸೆ ಮಾಡಲು ಇದನ್ನು ಉಪಯೋಗಿಸಬಹುದು.
೧೦ ಭಾಗ ವ್ಯಾಸಲೀನ್ (Vaseline)ನಲ್ಲಿ ಅಥವಾ ಎಣ್ಣೆಯಲ್ಲಿ ೧ ಬಾಗ ಸಲ್ಫರ್ (Sulfar) ಹಾಕಿ ಮುಲಾಮು ತಯಾರುಮಾಡಿ ಇದನ್ನೇ ಚರ್ಮದ ಮೇಲೆ ಹಚ್ಚಿಕೊಳ್ಳಿ.

೧. ಗಜಕರ್ಣ, ಟೀನಿಯಾ ಮತ್ತಿತರ ಬುರುಸುಗಳ ಸೋಂಕು ತಗುಲಿದಾಗಲೂ ಇದೇ ಮುಲಮನ್ನು ದಿನಕ್ಕೆ ೩–೪ ಬಾರಿ ಹಚ್ಚಿ. ಅಥವಾ ಸಲ್ಫರ್ (Sulfar) ಮತ್ತು ವಿನೇಗರ್ (Vinegar) ಸೇರಿಸಿ ಮಾಡಿದ ಕ್ರೀಂ ಹಚ್ಚಿರಿ.
೨. ಶಿಶುವಿನ ತಲೆಯ ಹೆಪ್ಪಳಿಕೆ ಮತ್ತು ತೀವ್ರ ಹೊಟ್ಟು ಇವಕ್ಕೂ ಇದೇ ಮುಲಮನ್ನು ಹಚ್ಚಬಹುದು. ಇಲ್ಲವೇ ಸಲ್ಫರ್ ಪುಡಿ ಹಾಕಿ ತಲೆ ತಿಕ್ಕಬೇಕು.

## ಜೆಂಶಿನ್ ವೈಯೋಲೆಟ್ (ಕ್ರಿಸ್ಟಲ್ ವೈಯೋಲಟ್) Gentian violet (Crystal violet).

ಜನಪ್ರಿಯ ಬ್ರಾಂಡ್:
ಜೆಂಶಿನ್ ವೈಯೋಲೆಟ್ (Gentian violet).

ನಿಮ್ಮ ಪ್ರದೇಶದಲ್ಲಿಯ
ಹೆಸರು______ಪ್ರಮಾಣ_____ಬೆಲೆ_______.
ಅಚ್ಚ ನೀಲಿ ಹರಳುಗಳಾಗಿ ಬರುತ್ತದೆ.
ಇಂಪೆಟಿಗೊ ಮತ್ತು ಕೀವು ತುಂಬಿದ ಹುಣ್ಣು ಮುಂತಾದ ಕೆಲವು ಚರ್ಮದ ಸೋಂಕುಗಳಿಗೆ ಇದು ಉಪಯುಕ್ತ. ಮೊನಿಲಿಯಾಸಿಸ್ ಮತ್ತು ಇತರ ಸೋಂಕುಗಳು ಚರ್ಮದ ನಿರಿಗೆಯೊಳಗೆ, ಯೋನಿಯಲ್ಲಿ ಆದಾಗ, ಮತ್ತು ಸುಟ್ಟ ಗಾಯಗಳಿಗೂ ಇದನ್ನು ಉಪಯೋಗಿಸಬಹುದು. ಅರ್ಧ ಲೀಟರ್ ನೀರಲ್ಲಿ ಒಂದು ಟೀ ಚಮಚ ಜೆಂಶಿನ್ ವೈಯೋಲೆಟ್‌ನ್ನು ಹಾಕಿ ಕದಡಿ. ಇದು ೨% ದ್ರಾವಣವಾಗುತ್ತದೆ. ಇದನ್ನು ಸೋಂಕುತಗುಲಿದ ಜಾಗಕ್ಕೆ ಹಚ್ಚಿ.

## ಜೀವಿರೋಧಕ ಮುಲಮುಗಳು (Antibiotic ointments)

ಜನಪ್ರಿಯ ಬ್ರಾಂಡ್: ಇರಿಮೈಸಿನ್ (Irimycin), ಟ್ರಿಮೈಸಿನ್ (Trimycin).

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.

ಇವೆಲ್ಲ ದುಬಾರಿಯಾದ ಮುಲಾಮುಗಳಾದರೂ ಜೆಂಶಿನ್ ವೈಯೋಲೆಟ್‌ಗಿಂತ ಹೆಚ್ಚಿನವೇನೂ ಅಲ್ಲ. ಆದರೆ ಚರ್ಮ ಮತ್ತು ಬಟ್ಟೆಗಳಿಗೆ ನೀಲಿ ಕಲೆಯನ್ನು ಮಾಡುವುದಿಲ್ಲ. ಚಿಕ್ಕ ಪುಟ್ಟ ಚರ್ಮ ರೋಗಗಳಿಗೆ ಉಪಯುಕ್ತ. ನಿಯೋಮೈಸಿನ್ (Neomycin) ಮತ್ತು ಪೊಲಿಮಿಕ್ಸಿನ್ (Polymyxin)ಗಳು ಇರುವ ಮಿಶ್ರಣವು ಒಂದು ಉತ್ತಮ ರೋಗನಿರೋಧಕ ಮುಲಮು. ಉದಾ; ನಿಯೋಸ್ಪೋರಿನ್ (Neosporin) ಮತ್ತು ಪೊಲಿಸ್ಪೋರಿನ್ (Polysporin). ಟೆಟ್ರಾಸೈಕ್ಲಿನ್ (Tetracycline) ಮುಲಾಮನ್ನು ಕೂಡ ಉಪಯೋಗಿಸಬಹುದು.

## ಕಾರ್ಟಿಕೋಸ್ಟೆರಾಯಿಡ್ ಮುಲಮು ಮತ್ತು ಲೋಶನ್‌ಗಳು: (Cortico-steroid ointements or lotions)

ಜನಪ್ರಿಯ ಬ್ರಾಂಡ್:
ಟೋಪಿಕಾಸೋನ್ (Topicasone),
ಎಕ್ಸವೇಟ್ (Exavate).

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.

ಕೆಲವು ಜಾತಿಯ ವಿಷಕಾರಿ ಸಸ್ಯಗಳನ್ನು ಮುಟ್ಟಿದಾಗ ಒಮ್ಮೆಲೆ ಚರ್ಮದ ಮೇಲೆ ಆಗುವ ಗಾದರಿಗಳಿಗೆ, ಅತಿ ತುರಿಕೆಯಿಂದ ಕೂಡಿದ ಚರ್ಮಕ್ಕೆ ಇವು ಉಪಯುಕ್ತ. ಸೋರಿಯಾಸಿಸ್, ಎಕ್ಸಿಮಾ ಬಹಳ ತೀವ್ರವಾಗಿದ್ದರೆ ಕೂಡ ಇದು ಉಪಯುಕ್ತ. ದಿನಕ್ಕೆ ೩–೪ ಬಾರಿ ಉಪಯೋಗಿಸಿ. ದೇಹದ ಮೇಲೆ ಬಹಳ ದೊಡ್ಡ ಜಾಗಗಳಲ್ಲಿ ಮತ್ತು ಬಹಳ ಕಾಲದವರೆಗೆ ಉಪಯೋಗಿಸುತ್ತಿರಬೇಡಿ.

## ಪೆಟ್ರೋಲಿಯಂ ಜೆಲ್ಲಿ (ವ್ಯಾಸಲೀನ್), (Petroleum jelly, Vaseline)

ಜನಪ್ರಿಯ ಬ್ರಾಂಡ್: ವ್ಯಾಸಲೀನ್.
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ______.
ಹುರುಕು, ಕಜ್ಜಿ, ಗಜಕರ್ಣ, ಸೂಜಿ ಜಂತುಗಳ ತುರಿಕೆ, ಸುಟ್ಟ ಗಾಯ, ಎದೆಯ ಮೇಲಿನ ಗಾಯ ಇವುಗಳಿಗೆ ಉಪಯೋಗಿಸಲು ತಯಾರಿಸುವ ಮುಲಮನ್ನು ತಯಾರಿಸಲು ಇದನ್ನು ಬಳಸುತ್ತಾರೆ.

## ಗಜಕರ್ಣ ಮತ್ತಿತರ ಬುರುಸು ಸೋಂಕು

ಬುರುಸು ರೋಗಗಳು ಬಂದುವೆಂದರೆ ನಿವಾರಿಸುವುದು ಬಲು ಕಷ್ಟ. ಅದು ಗುಣವಾದಂತೆ ಕಂಡು ಎಷ್ಟೋ ದಿನಗಳವರೆಗೂ ಹಚ್ಚುತ್ತಿದ್ದರೆ ಮಾತ್ರ ಪೂರ್ತಿ ಮಾಯವಾಗಬಹುದು. ಸ್ನಾನ ಮತ್ತು ಸ್ವಚ್ಛತೆಯೂ ಇದರಲ್ಲಿ ಅತಿ ಮುಖ್ಯ.

## ಅಂಡಿಸ್ಲೆಲೆನಿಕ್ ಬೆಂರ್ಝೋಯಿಕ್ ಅಥವಾ ಸಾಲಿಸೆಲಿಕ್ ಆ್ಯಸಿಡ್‌ಗಳ ಮುಲಮುಗಳು, (Undecylenic, Benzoic or Salicylic acid ointements)

ಜನಪ್ರಿಯ ಬ್ರಾಂಡ್:
ನಿಮ್ಮ ಪ್ರದೇಶದಲ್ಲಿಯ ಹೆಸರು______ಪ್ರಮಾಣ_____ಬೆಲೆ_______.

ಆಮ್ಲಗಳಿಂದ ತಯಾರಿಸಿದ ಈ ಮುಲಮುಗಳು ಗಜಕರ್ಣ, ತಲೆಯ ಮೇಲಿನ ಟೀನಿಯಾ ಮತ್ತಿತರ ಬುರುಸು ಸೋಂಕುಗಳಿಗೂ ಉಪಯುಕ್ತ. ಇವನ್ನು ಸಲ್ಫರ್ ಜೊತೆಗೂ ಸೇರಿಸಬಹುದು. ಸಾಲಿಸಲಿಕ್ ಆಸಿಡ್ ಮತ್ತು ಸಲ್ಫರ್‌ಗಳ ಮಿಶ್ರ ಮುಲಮನ್ನು ಶಿಶುಗಳ ನೆತ್ತಿಯ ಹೊಪ್ಪಳಿಕೆಗಳಿಗೂ ಹಚ್ಚಬಹುದು. ಈ ಮುಲಮನ್ನು ನೀವೇ ಮಾಡಿದರೆ ಕಡಿಮೆ ಖರ್ಚಿನಲ್ಲಿ ಆಗುತ್ತದೆ. ೩ ಭಾಗ ಸಾಲಿಸಲಿಕ್ ಆಸಿಡ್ ಮತ್ತು /ಅಥವಾ ೬ ಭಾಗ ಬೆಂಜೋಯಿಕ್ ಆಮ್ಲವನ್ನು ೧೦೦ ಬಾಗ ವ್ಯಾಸಲೀನ್ ಅಥವಾ ಕೊಬ್ಬರಿ ಎಣ್ಣೆ, ಅಥವಾ ೪೦% ಅಲ್ಕೋಹಾಲ್ ಜೊತೆ ಸೇರಿಸಿ ಮಿಶ್ರ ಮಾಡಿ. ಚರ್ಮದ ಮೇಲೆ ದಿನಕ್ಕೆ ೩–೪ ಬಾರಿ ಹಚ್ಚಿ ತಿಕ್ಕಿ.

## ವಿನೇಗರ್ ಜೊತೆ ಸಲ್ಫರ್ (Vinegar + Sulfar):

ಚರ್ಮಕ್ಕೆ ತುರುಸಿನ ಸೋಂಕು ಚಿಕಿತ್ಸೆಗೆ ೧೦೦ ಭಾಗ ವಿನೇಗರ್ ಮತ್ತು ೫ ಭಾಗ ಸಲ್ಫರ್ ಸೇರಿಸಿ ಚರ್ಮದ ಮೇಲೆ ಹಚ್ಚಿ ಒಣಗಿಸಿ. ೧೦ ಭಾಗ ಅಡಿಗೆ ಎಣ್ಣೆಯಲ್ಲಿ ೧ ಭಾಗ ಸಲ್ಫರ್ ಬೆರೆಸಿಯೂ ಮುಲಮು ತಯಾರಿಸಿ ಹಚ್ಚಬಹುದು.

## ಸೋಡಿಯಂ ಥಯೋಸ್ಫೇಟ್ (ಹೈಪೋ) Sodium theosulphate (Hypo).

ಬಿಳಿಯ ಹರಳುಗಳಾಗಿದ್ದು ಸ್ಥಳಿಯ ಫೋಟೊ ಸ್ಟುಡಿಯೋಗಳಲ್ಲಿ ಹೈಪೋ (Hypo) ಎಂಬ ಹೆಸರಲ್ಲಿ ಮಾರಾಟವಾಗುತ್ತದೆ.
ಟೀನಿಯಾ ವರ್ಸಿಕರ್ಲರ್ (ಚರ್ಮದ ಅಳಬೆ ಸೋಂಕಿಗೆ):–
೧/೨ ಕಪ್ ನೀರಿಗೆ ಒಂದು ಟೀ ಚಮಚ ಹೈಪೋ ಹಾಕಿ ಹತ್ತಿಯ ಮೇಲಿಟ್ಟು ಚರ್ಮದ ಮೇಲೆ ತೊಡೆಯಬೇಕು. ನಂತರ ಒಂದು ಚೂರು ಹತ್ತಿಯನ್ನು ವಿನೇಗರ್‌ನಲ್ಲಿ ತೋಯಿಸಿ ಚೆನ್ನಾಗಿ ತಿಕ್ಕಿ. ಕಲೆಗಳು ಮಾಯವಾಗುವವರೆಗೆ ದಿನಕ್ಕೆ ಎರಡು ಬಾರಿ, ಆನಂತರ ಅದು ಮತ್ತೆ ಬಾರದಂತೆ ಎರಡು ವಾರಕ್ಕೊಮ್ಮೆ ಹಚ್ಚುತ್ತಿರಬೇಕು.

## ಗ್ರೀಸಿಯೋಫಲ್ವಿನ್
## (Griseofulvin)

ಜನಪ್ರಿಯ ಬ್ರಾಂಡ್:
ಇಡಿಫಲ್ವೀನ್ (Idifulvin),
ಫ್ಲುವಿನ್ (Fluvin).

ನಿಮ್ಮ ಪ್ರದೇಶದಲ್ಲಿಯ
ಹೆಸರು______ಪ್ರಮಾಣ_____ಬೆಲೆ_______.
೨೫೦ ಅಥವಾ ೫೦೦ ಮಿ.ಗ್ರಾಂ.ನ ಮಾತ್ರೆಗಳು ಬರುತ್ತವೆ. ಚರ್ಮಕ್ಕೆ ಬುರುಸಿನ ರೋಗವು ಅತಿ ತೀವ್ರವಾಗಿದ್ದಾಗ ಮಾತ್ರ ಬಳಸಬೇಕು. ಬಲು ದುಬಾರಿಯಾದ ಔಷಧವಿದು. ಉಗುರುಗಳಿಗೆ ಬುರುಸಿನ ಸೋಂಕು ತಗುಲಿದರೆ ಕೂಡ ಇದನ್ನು ಬಳಸಬಹುದು. ಬಹಳ ಕಾಲದ ನಂತರ ಚಿಕಿತ್ಸೆಯು ಪರಿಣಾಮಕಾರಿಯಾಗುತ್ತದೆ. ಗರ್ಭಿಣಿಯರು ಉಪಯೋಗಿಸಬಾರದು.
ಪ್ರಮಾಣ: ದಿನಕ್ಕೆ/ಕೆ.ಜಿ.ಗೆ/೧೫ ಮಿ.ಗ್ರಾಂ
ಕನಿಷ್ಟ ಒಂದು ತಿಂಗಳ ಕಾಲ ದಿನಕ್ಕೆ ಒಂದು ಬಾರಿ ಕೊಡಿ.
ದೊಡ್ಡವರಿಗೆ–೫೦೦ ರಿಂದ ೧೦೦೦ ಮಿ.ಗ್ರಾಂ (೨–೪ ಕ್ಯಾಪ್ಸೂಲ್)
೮–೧೨ ವರ್ಷದವರಿಗೆ–೨೫೦–೫೦೦ ಮಿ.ಗ್ರಾಂ (೧–೨ ಕ್ಯಾಪ್ಸೂಲ್)
೩–೭ ವರ್ಷದ ಮಕ್ಕಳಿಗೆ– ೧೨೫–೨೫೦ ಮಿ.ಗ್ರಾಂ (೧/೨ ೧ ಕ್ಯಾಪ್ಸೂಲ್)
೩ ವರ್ಷದೊಳಗಿನ ಮಕ್ಕಳಿಗೆ– ೧೨೫ ಮಿ.ಗ್ರಾಂ (೧/೨ ಮಾತ್ರೆ).

## ಸೆಲೆನಿಯಂ ಸಲ್ಫೈಡ್
## (Selenium sulfide)

೧–೨.೫% ಸೆಲೇನಿಯಂ ಸಲ್ಫೈಡ್ (Selenium sulfide) ಇರುವ ದ್ರವ ರೂಪದಲ್ಲಿ ಚರ್ಮದ ಮೇಲೆ ಹಚ್ಚಲು (ಲೋಶನ್)ಗಳಾಗಿ ಬರುತ್ತದೆ.
ಟೀನಿಯಾ ವರ್ಸಿಕಲರ್ ಸೋಂಕಿಗೆ ಇದು ಉಪಯುಕ್ತ. ಸೋಂಕು ತಗುಲಿರುವ ಜಾಗಕ್ಕೆ ಹಚ್ಚಿ ೩೦ ನಿಮಿಷದ ನಂತರ ತೊಳೆದುಹಾಕಿ.

## ಟೊಲ್ನಾಫ್ಟೇಟ್
## (Tolnaftate)

ಜನಪ್ರಿಯ ಬ್ರಾಂಡ್: ಟಿನಾಡರ್ಮ (Tinaderm), ಟೀನಾವೇಟ್ (Tinavate).

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.
ಕ್ರೀಂ, ಪೌಡರ್, ಅಥವಾ ೧% ದ್ರಾವಣದ ರೂಪದಲ್ಲಿಯೂ ಬರುತ್ತದೆ.
ಪಾದ, ಗಂಡಸಿನ ವೃಷಣ, ಕೈ, ನೆತ್ತಿ ಮತ್ತು ಇತರ ಭಾಗಗಳಲ್ಲಿ ಬುರುಸಿನ ಸೋಂಕು ತಗುಲಿದ್ದರೆ ಅದಕ್ಕೆ ಇದು ಪರಿಣಾಮಕಾರಿ ಔಷಧ. ಲಕ್ಷಣಗಳು ಮರೆಯಾದ ನಂತರವೂ ೨ ವಾರಗಳವರೆಗೆ ಪ್ರತಿ ದಿನ ಎರಡು ಬಾರಿ ಹಚ್ಚಿ.

## ನಿಸ್ಟಾಟಿನ ಅಥವಾ ಮಿಕೋನಜ಼ೋಲ್
## (Nystatin ಅಥವಾ Miconazole)

ಜನಪ್ರಿಯ ಬ್ರಾಂಡ್: ಮೈಕೋಸ್ಟಾಟಿನ್ ಓರಲ್ (Mycostatin oral). ಮೈಕೋಸ್ಟಾಟಿನ್ ವೆಜೈನಲ್ (Mycostatin vaginal).

ನಿಮ್ಮ ಪ್ರದೇಶದಲ್ಲಿಯ
ಹೆಸರು______ಪ್ರಮಾಣ_____ಬೆಲೆ_______.
ಪೌಡರ್, ಯೋನಿಯ ಮಾತ್ರೆಗಳು, ಮುಲಾಮು ಮತ್ತು ಕ್ರೀಂಗಳಾಗಿ ಬರುತ್ತವೆ.
ಬಾಯಿ, ಯೋನಿ ಮತ್ತು ಚರ್ಮದ ಇತರ ಚರ್ಮದ ನಿರಿಗೆಗಳಲ್ಲಿ ಆಗುವ ಸೋಂಕಿಗೆ (ಥ್ರಶ್, ಮೊನಿಲಿಯಾಸಿಸ್ ಸೋಂಕು) ಉಪಯುಕ್ತ. ಆದರೆ ಬೇರೆ ಯಾವುದೇ ಚರ್ಮದ ರೋಗಕ್ಕೆ ಪ್ರಯೋಜನವಿಲ್ಲ.
**ಪ್ರಮಾಣ– ದೊಡ್ಡವರಿಗೆ ಚಿಕ್ಕವರಿಗೆ ಒಂದೇ.**

ಬಾಯಿಯಲ್ಲಿ ಥ್ರಶ್: ೧ ಮಿ.ಗ್ರಾಂ ದ್ರಾವಣವನ್ನು ಬಾಯಿಯಲ್ಲಿ ಹಾಕಿ. ೧ ನಿಮಿಷದವರೆಗೆ ಹಾಗೇ ಇಟ್ಟುಕೊಳ್ಳಿ. ನಂತರ ನುಂಗಿ. ದಿನಕ್ಕೆ ೩–೪ ಬಾರಿ ಹೀಗೇ ಮಾಡಿ.

**ಚರ್ಮದ ಮೇಲೆ ಯೀಸ್ಟ್ ಸೋಂಕು:** ಸಾಧ್ಯವಾದಷ್ಟು ಒಣಗಿಸಿಡಿ. ದಿನಕ್ಕೆ ಮೂರ್ನಾಲ್ಕು ಬಾರಿ ನಿಸ್ಟಾಟಿನ್ ಪೌಡರನ್ನು ಅದರ ಮೇಲೆ ಉದುರಿಸಿ.
**ಯೋನಿ ಮತ್ತು ಯೋನಿಯ ತುಟಿಗಳಲ್ಲಿ ಯೀಸ್ಟ್ ಸೋಂಕು:** ೨ ವಾರಗಳ ಕಾಲ ಪ್ರತಿ ರಾತ್ರಿ ಒಂದು ಮಾತ್ರೆಯನ್ನು ಯೋನಿಯೊಳಗೆ ಹಾಕಿಡಿ.

## ಗಾಮಾಬೆಂಜೀನ್ ಹೆಕ್ಸಾಕ್ಲೋರೈಡ್ (ಲಿಂಡೇನ್) Gamabenzene hexachloride (Lindane).

ಹುರುಕು ಕಜ್ಜಿ ಮತ್ತು ಹೇನುಗಳಿಗೆ ಕೀಟನಾಶಕ.
ಜನಪ್ರಿಯ ಬ್ರಾಂಡ್: ಗಾಮಾಸ್ಕಾಬ್ (Gamascab), ಸ್ಕಾಬೆಕ್ಸ್ (Scabex).

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ______ಬೆಲೆ_____.ಮನುಷ್ಯರಿಗಾಗಿ ತಯಾರಿಸಿದ ಲಿಂಡೇನ್ ಅತಿ ದುಬಾರಿಯದು. ಪ್ರಾಣಿಗಳಿಗಾಗಿ ತಯಾರಿಸಿದ್ದು ಸುಲಭ ಬೆಲೆಯದ್ದು ಇರುತ್ತವೆ. ಪ್ರಾಣಿಗಳಿಗಾಗಿ ತಯಾರಿಸಿದ್ದು ಮನುಷ್ಯರಿಗೂ ಚೆನ್ನಾಗಿಯೇ ಕೆಲಸ ಮಾಡುತ್ತದೆ. ಆದರೆ ಪ್ರಾಣಿಗಳಿಗಾಗಿ ಬಂದುದ್ದು ೧೫% ಹೆಚ್ಚು ಸಾಂದ್ರದ ದ್ರಾವಣವಾಗಿರುತ್ತದೆ. ಅದನ್ನು ಇನ್ನೂ ನೀರು ಅಥವಾ ವ್ಯಾಸಲೀನ್ ಹಾಕಿ ೧% ದ್ರಾವಣವಾಗಿ ಮಾಡಿಕೊಂಡು ಉಪಯೋಗಿಸಬೇಕು. ಇದನ್ನೇ ಹುರುಕು ಕಜ್ಜಿಗೂ ಹಾಗು ಹೇನಿಗೂ ಔಷಧವಾಗಿ ಬಳಸಬಹುದು. ವಿವರಕ್ಕೆ ೧೫ ನೇ ಅಧ್ಯಾಯ ನೋಡಿ.

**ಮುನ್ನೆಚ್ಚರಿಕೆ: ಲಿಂಡೇನ್ ಒಂದು ವಿಷ.** ಅದಕ್ಕೆ ಅಡ್ಡ ಪರಿಣಾಮಗಳು ಬಹಳ. ಬಹಳ ಉಪಯೋಗಿಸಬೇಡಿ. ಒಂದು ಬಾರಿ ಉಪಯೋಗಿಸಿದ ನಂತರ ಮತ್ತೊಂದು ವಾರದವರೆಗೆ ಬಳಸಬೇಡಿ.

## ಬೆಂಜೈಲ್ ಬೆಂಜೋವೇಟ್ (Benzyl benzoate).

ಜನಪ್ರಿಯ ಬ್ರಾಂಡ್:
ಸ್ಕಾಬಿಂಡೊನ್ (Scabindon),
ಬೆಂಜೈಲ್ ಬೆಂಜೋವೇಟ್ ಅಪ್ಲೀಕೇಶನ್ (Benzyl benzoate application).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.
ಕ್ರೀಂ ಅಥವಾ ಲೋಶನ್ ಆಗಿ ಬರುತ್ತದೆ.
ಲಿಂಡೇನ್‌ನ್ನು ಉಪಯೋಗಿಸಿದಂತೆ ಇದನ್ನೂ ಉಪಯೋಗಿಸಬಹುದು.

## ಪೆಟ್ರೋಲಿಯಂ ಜೆಲ್ಲಿಯಲ್ಲಿ ಸಲ್ಫರ್ (Petroleum jelly ಯಲ್ಲಿ Sulfur)

ಬೇರಾವುದೂ ಸಿಗದಿದ್ದರೆ ಹುರುಕು ಮತ್ತು ಕಜ್ಜಿಗೆ ಇದನ್ನೇ ಉಪಯೋಗಿಸಿ.
೨೦ ಭಾಗ ವ್ಯಾಸಲೀನ್‌ನಲ್ಲಿ ೧ ಭಾಗ ಸಲ್ಫರ್‌ನ್ನು ಸೇರಿಸಿ ಮಿಶ್ರ ಮಾಡಿ. ಇದು ೫% ದ್ರಾವಣವಾಗುತ್ತದೆ.

## ಪೈಪೆರೋನಿಲ್ ಜೊತೆಗೆ ಪೈರೆಂತ್ರಿಸ್ (piperonyl ಜೊತೆ Pyrethrins )

ಜನಪ್ರಿಯ ಬ್ರಾಂಡ್:
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.
ಪೈರೆಂತ್ರಿಸ್ ಮತ್ತು ಪೈಪೆರೋನೈಲ್ ಬ್ಯುಟಾಕ್ಸೈಡ್ ಸೇರಿದ ದ್ರಾವಣವಾಗಿ ಬರುತ್ತದೆ.
ಹೇನು ನಿವಾರಕ ಲಿಂಡೇನ್‌ಗಿಂತಲೂ ಹೆಚ್ಚು ಕ್ಷೇಮಕರ. ಇದಕ್ಕೆ ನೀರನ್ನು ಸೇರಿಸದೆ ಒಣ ಕೂದಲಿಗೆ ಅದು ಪೂರ್ತಿ ಒದ್ದೆಯಾಗುವವರೆಗೆ ಹಚ್ಚಿ. ಹುಬ್ಬು, ಕಣ್ಣುಗಳ ಮೇಲೆ ಹಚ್ಚಬೇಡಿ. ೧೦ ನಿಮಿಷಗಳ ಕಾಲ ಹಾಗೇ ಬಿಡಿ. ತಕ್ಷಣವೇ ಬೆಚ್ಚಗಿನ ನೀರಲ್ಲಿ ಚೆನ್ನಾಗಿ ತೊಳೆಯಿರಿ. ವಾರದ ನಂತರ ಇನ್ನೊಮ್ಮೆ ಮಾಡಿ. ಇಷ್ಟು ಮಾಡುವಾಗಲೇ ಹಾಸಿಗೆ ಮತ್ತು ತಲೆದಿಂಬುಗಳನ್ನು ಕೂಡ ತೊಳೆದು ಒಣಹಾಕಿ. ಅಂದರೆ ಹೇನು ಪೂರ್ತಿಯಾಗಿ ನಿವಾರಣೆಯಾಗುತ್ತದೆ.

## ಕ್ರೋಟಾಮಿಟಾನ್ (Crotamiton)

ಜನಪ್ರಿಯ ಬ್ರಾಂಡ್:ಕ್ರೋಟೋರೆಕ್ಸ್ (Crotorax).

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.

೧೦% ಕ್ರೊಟಾಮಿಟಾನ್‌ನ ದ್ರಾವಣ ಅಥವಾ ಮುಲಾಮು (ಕ್ರೀಂ) ಬರುತ್ತದೆ.

ಇದು ಕೇವಲ ಹುರುಕು ಅಥವಾ ಕಜ್ಜಿಗೆ ಉಪಯೋಗವಾಗುವ ಔಷಧ. ಸ್ನಾನವಾದ ನಂತರ ಇಡೀ ದೇಹಕ್ಕೆ ಹಚ್ಚಿ. ಚರ್ಮದ ಯಾವುದೇ ನೆರಿಗೆಯನ್ನೂ ಬಿಡಬೇಡಿ. ಮರುದಿನ ಮತ್ತೊಮ್ಮೆ ಹಚ್ಚಿ. ಎರಡನೇ ದಿನ ಹಚ್ಚಿಯಾದ ನಂತರ ಸ್ನಾನ ಮಾಡಿ. ಇದೇ ವೇಳೆಗೆ ಹಾಸಿಗೆ, ತಲೆದಿಂಬುಗಳನ್ನೂ ತೊಳೆದು ಒಣಗಿಸಬೇಕು.

## ಲೈಂಗಿಕ ಅಂಗಗಳ ನರೂಲಿ

### ಪೊಡೊಫೈಲಿನ್ (Podophyllin)

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು_____ಪ್ರಮಾಣ_____ಬೆಲೆ_______.

೧೦–೨೫% ಪೊಡೊಫೈಲಿನ್ ಬೆನ್‌ಝೋವೇಟ್ (Pdophyllin benzoate)ನೊಂದಿಗೆ ಮಿಶ್ರವಾದ ದ್ರಾವಣವು ಸಿಗುತ್ತದೆ.

ಲೈಂಗಿಕ ಅಂಗಗಳ ನರೂಲಿಯನ್ನು ಕಿರಿದುಗೊಳಿಸಲಿಕ್ಕೆ ಇದು ಉಪಯುಕ್ತ. ಇದು ಆರೋಗ್ಯವಂತ ಚರ್ಮಕ್ಕೆ ಬಹಳ ಉರಿ ಹಾಗು ಕೆರೆತ ಉಂಟುಮಾಡುತ್ತದೆ. ಕಾರಣ ಬಹಳ ಎಚ್ಚರಿಕೆಯಿಂದ ಉಪಯೋಗಿಸಬೇಕು. ಹಚ್ಚುವ ಮೊದಲು ನರೂಲಿಯ ಸುತ್ತಲಿನ ಚರ್ಮಕ್ಕೆ ವ್ಯಾಸಲೀನ್ ಹಚ್ಚಿಕೊಳ್ಳಬೇಕು. ಔಷಧ ಹಚ್ಚಿ ಚೆನ್ನಾಗಿ ಒಣಗಲು ಬಿಡಿ. ಒಣಗಲು ಬಿಡಬೇಕಾದ್ದು ಬಹಳ ಮುಖ್ಯ. ನಾಲ್ಕಾರು ತಾಸುಗಳಲ್ಲಿ ತೊಳೆದುಹಾಕಿ. ಒಂದು ವಾರದ ನಂತರ ಇನ್ನೊಮ್ಮೆ ಹೀಗೇ ಮಾಡಿ. ಅನೇಕ ವಾರಗಳ ಕಾಲ ಚಿಕಿತ್ಸೆಯನ್ನು ಮುಂದುವರೆಸಬೇಕು.

**ಮುನ್ನೆಚ್ಚರಿಕೆ:** ಚರ್ಮಕ್ಕೆ ಬಹಳ ತ್ರಾಸಾದರೆ ಮತ್ತೆ ಅದನ್ನು ಬಳಸಬೇಡಿ. ನರೂಲಿಯಲ್ಲಿ ರಕ್ತ ಬರುತ್ತಿದ್ದರೆ ಪೊಡೋಫೈಲಿನ್‌ನ್ನು ಉಪಯೋಗಿಸಬಾರದು. **ಗರ್ಭಿಣಿಯರು ಮತ್ತು ಮಗುವಿಗೆ ಹಾಲೂಡುತ್ತಿರುವ ತಾಯಂದಿರು ಇದನ್ನು ಬಳಸಬಾರದು.**

### ಬೈಕ್ಲೋರೋಅಸೆಟಿಕ್ ಆಸಿಡ್, ಟ್ರೈಕ್ಲೋರೋ ಅಸೆಟಿಕ್ ಆಸಿಡ್ (Bichloroacetic acid, Trichloroacetic acid)

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.

ಸಾಮಾನ್ಯವಾಗಿ ದ್ರವ ರೂಪದಲ್ಲಿ ಬರುತ್ತದೆ.

ಪೊಡೊಫೈಲಿನ್ ಸಿಗದಿದ್ದರೆ ಈ ಔಷಧವನ್ನು ನರೂಲಿಯನ್ನು ಕಿರಿದುಗೊಳಿಸಲು ಉಪಯೋಗಿಸಬಹುದು. ಇದೂ ಕೂಡ ಆರೋಗ್ಯವಂತ ಚರ್ಮಕ್ಕೆ ಅಪಾಯಕಾರಿಯೇ. ನರೂಲಿಯ ಸುತ್ತ ವ್ಯಾಸಲಿನ್ ಅಥವಾ ಎಣ್ಣೆಯನ್ನು ಹಚ್ಚಿಕೊಂಡೇ ಇದನ್ನು ಹಚ್ಚಬೇಕು. ನರೂಲಿಯ ಸುತ್ತ ಚರ್ಮವನ್ನೆಲ್ಲ ಮೊದಲು ನಿಧಾನವಾಗಿ ಹೊರತೆಗೆಯಿರಿ. ಒಂದೇ ಹನಿ ಆಸಿಡ್‌ನ್ನು ಬಲು ನಿಧಾನವಾಗಿ ಹಾಕಿ. ಅದು ಒಳಗೆ ಹೋಗಲಿ. ಅನೇಕ ವಾರಗಳವರೆಗೆ ವಾರಕ್ಕೊಮ್ಮೆ ಈ ಚಿಕಿತ್ಸೆಯನ್ನು ಮುಂದುವರೆಸಿ.

**ಮುನ್ನೆಚ್ಚರಿಕೆ:** ಇದು ಆ್ಯಸಿಡ್ ಆದ ಕಾರಣ ಸುಡುತ್ತದೆ. ಕೈ ಮತ್ತು ಚರ್ಮದ ಇತರ ಭಾಗಗಳನ್ನು ರಕ್ಷಿಸಿಕೊಳ್ಳಿ. ಎಲ್ಲಿಯಾದರೂ ಆ್ಯಸಿಡ್ ಹತ್ತಿತೆಂದರೆ ಕೂಡಲೆ ಚೆನ್ನಾಗಿ ತೊಳೆದುಕೊಳ್ಳಿ.

## ಜಂತುಗಳಿಗೆ

ಬರಿಯ ಔಷಧಗಳಿಂದ ಜಂತು ನಿವಾರಣೆ ಸಾಧ್ಯವಿಲ್ಲ. ವೈಯಕ್ತಿಕ ಮತ್ತು ಸಾರ್ವಜನಿಕ ಸ್ವಚ್ಛತೆಗಳು ಅತಿ ಮುಖ್ಯ. ಕುಟುಂಬದಲ್ಲಿ ಒಬ್ಬನಿಗೆ ಜಂತು ಆಗಿದೆ ಎಂದರೆ ಇಡೀ ಕುಟುಂಬದವರೂ ಚಿಕಿತ್ಸೆ ಮಾಡಿಕೊಳ್ಳಬೇಕು.

### ಮೆಬೆಂಡಾಝೋಲ್ (Mebendazole)

ಜನಪ್ರಿಯ ಬ್ರಾಂಡ್: (ಐಡಿಬೆಂಡ್) Idibend, ಮೆಬೆಕ್ಸ್ (Mebex).

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.

ಅನೇಕ ಜಾತಿಯ ಜಂತುಗಳ ನಿವಾರಣೆಗೆ ಇದು ಸಹಕಾರಿ. ಇದು ಕೊಕ್ಕೆ ಹುಳು, ಚಾಟಿ ಹುಳು, ದುಂಡು ಹುಳು, ನೂಲು ಜಂತುಗಳು ಹಾಗು ಚಿಲುಮಿಹುಳು ಎಲ್ಲವಕ್ಕೂ ಉಪಯೋಗಿಸಬಹುದಾದ ಔಷಧ. ಎರಡು ಜಂತುಗಳ ಸೋಂಕು ಒಮ್ಮೆಗೇ ತಗುಲಿದ್ದರೂ ಬರುತ್ತದೆ. ಬಹಳ ಹುಳುಗಳಿದ್ದು ಚಿಕಿತ್ಸೆ ತೀವ್ರಗತಿಯಲ್ಲಿ ನಡೆಯುತ್ತಿದ್ದಾಗ ಹೊಟ್ಟೆನೋವು, ಭೇದಿಗಳಾದರೂ ವಾಂತಿ ಅಥವಾ ಇನ್ನಿತರ ಅಡ್ಡ ಪರಿಣಾಮಗಳು ಆಗದು.

**ಮುನ್ನೆಚ್ಚರಿಕೆ:** ಗರ್ಭಿಣಿಯರಿಗೆ ಮತ್ತು ೨ ವರ್ಷದೊಳಗಿನ ಮಕ್ಕಳಿಗೆ ಕೊಡಬೇಡಿ.

**ಪ್ರಮಾಣ:** ೧೦೦ ಮಿ.ಗ್ರಾಂ ಮಾತ್ರೆ ಉಪಯೋಗಿಸಿ, ದೊಡ್ಡವರಿಗೆ ಮತ್ತು ಮಕ್ಕಳಿಗೆ ಒಂದೇ ಪ್ರಮಾಣದಲ್ಲಿ ಕೊಡಬಹುದು. ನೂಲು ಜಂತುವಿಗೆ ವಾರಕ್ಕೊಮ್ಮೆಯಂತೆ ಮೂರು ವಾರಗಳ ಕಾಲ ಕೊಡಿ.

ಚಾಟಿ ಹುಳು, ದುಂಡು ಹುಳುಗಳಿಗೆ ದಿನಕ್ಕೆ ಎರಡು ಬಾರಿ ಒಂದು ಮಾತ್ರೆ, ಮೂರು ದಿನಗಳ ಕಾಲ.

## ಆಲ್‌ಬೆಂಡಾರೆಝೋಲ್
## (Albendazole)

ಜನಪ್ರಿಯ ಬ್ರಾಂಡ್: ವಿನ್–೪೦೦ (Win-400), ವಿನ್‌ಕಿಲ್ (Winkill).

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ___

೨೦೦ ಮತ್ತು ೪೦೦ ಮಿ.ಗ್ರಾಂ ಮಾತ್ರೆಗಳು ಬರುತ್ತವೆ. ಇದು ಮೆಬೆಂಡಾರೆಝೋಲ್‌ನಂತೆಯೇ. ಆದರೆ ಹೆಚ್ಚು ದುಬಾರಿ. ಕೊಕ್ಕೆ ಹುಳು, ಚಾಟಿ ಹುಳು, ದುಂಡು ಹುಳು, ಚಿಲುಮಿ ಹುಳು ಎಲ್ಲವಕ್ಕೂ ಬರುತ್ತದೆ.

**ಮುನ್ನೆಚ್ಚರಿಕೆ:**

ಗರ್ಭಿಣಿಯರಿಗೆ ಮತ್ತು ೨ ವರ್ಷದೊಳಗಿನ ಮಕ್ಕಳಿಗೆ ಕೊಡಬಾರದು.

ಪ್ರಮಾಣ: ೨೦೦ ಮಿ.ಗ್ರಾಂ ಮಾತ್ರೆಯನ್ನು ಉಪಯೋಗಿಸಿ. ಮಕ್ಕಳಿಗೂ ಮತ್ತು ದೊಡ್ಡವರಿಗೂ ಒಂದೇ ಪ್ರಮಾಣ. ದುಂಡು ಹುಳು, ಚಿಲುಮಿ ಹುಳು, ಕೊಕ್ಕೆ ಹುಳು ಹಾಗು ಚಾಟಿ ಹುಳು ಇವುಗಳಿಗೆ ೪೦೦ ಮಿ.ಗ್ರಾಂ(೨ ಮಾತ್ರೆ). ದಿನಕ್ಕೆ ಎರಡು ಬಾರಿ ಮೂರು ದಿನ. ಒಂದು ವಾರದ ನಂತರ ಮತ್ತೊಮ್ಮೆ ತೆಗೆದುಕೊಳ್ಳಿ.

## ಪೈಪರರಿಝೀನ್
## (Piperazine)

ಜನಪ್ರಿಯ ಬ್ರಾಂಡ್:
ಪೈಪರರಿಝೀನ್ ಸಿಟ್ರೇಟ್ (Piperzine citrate).

ನಿಮ್ಮ ಪ್ರದೇಶದಲ್ಲಿಯ
ಹೆಸರು______ಪ್ರಮಾಣ_____ಬೆಲೆ_______.

ಪೈಪರರಿಝೀನ್ ಸಿಟ್ರೇಟ್ (Piperzine citrate), ಟಾರ್‌ಟ್ರೇಟ್ (Tartrate), ಹೈಡ್ರೇಟ್ (Hydrate), ಅಡಿಪೇಟ್ (Adipate) ಅಥವಾ ಫಾಸ್ಫೇಟ್ (Phosphate) ರೂಪದಲ್ಲಿ ಬರುತ್ತದೆ.

ದುಂಡು ಹುಳಕ್ಕೆ ಮೊದಲ ಎರಡು ದಿನಗಳ ಕಾಲ ಜಾಸ್ತಿ ಪ್ರಮಾಣದ ಔಷಧ (ದೊಡ್ಡ ಡೋಸ್) ಕೊಡಿ. ಚಿಲುಮಿ ಹುಳುವಿಗೆ ಪ್ರತಿ ದಿನ ಕಡಿಮೆ ಪ್ರಮಾಣದ(ಡೋಸ್)ನಲ್ಲಿ ಕೊಡಬೇಕು.

**ದುಂಡು ಹುಳಕ್ಕೆ ಪ್ರಮಾಣ (ಡೋಸ್)** ದಿನಕ್ಕೆ/ಕೆಜಿಗೆ/ ೭೫ ಮಿ.ಗ್ರಾಂ.

೫೦೦ ಮಿ.ಗ್ರಾಂ. ಮಾತ್ರೆ ಮತ್ತು ೫ ಮಿ.ಲಿ ನಲ್ಲಿ ೫೦೦ ಮಿಗ್ರಾಂ ದ್ರಾವಣ.

ದಿನಕ್ಕೆ ಒಮ್ಮೆ ಎರಡು ಡೋಸ್.

ಒಂದು ಡೋಸ್ ನಲ್ಲಿ :–

ದೊಡ್ಡವರಿಗೆ–೩೫೦೦ ಮಿ.ಗ್ರಾಂ (೭ ಮಾತ್ರೆಗಳು).

೮–೧೨ ವರ್ಷದ ಮಕ್ಕಳಿಗೆ– ೨೫೦೦ ಮಿ.ಗ್ರಾಂ (೫ ಮಾತ್ರೆಗಳು).

೩–೭ ವರ್ಷದ ಮಕ್ಕಳಿಗೆ– ೧೫೦೦ ಮಿ.ಗ್ರಾಂ (೩ ಮಾತ್ರೆಗಳು).

೧–೩ ವರ್ಷದ ಮಕ್ಕಳಿಗೆ– ೧೦೦೦ ಮಿ.ಗ್ರಾಂ (೨ ಮಾತ್ರೆ).

ಒಂದು ವರ್ಷದೊಳಗಿನ ಮಗುವಿಗೆ – ೫೦೦ ಮಿಗ್ರಾಂ (೧ ಮಾತ್ರೆ).

**ಚಿಲುಮಿ ಹುಳುವಿಗೆ ಪ್ರಮಾಣ:**

ಪ್ರತಿ ದಿನ ಎರಡು ಡೋಸ್ ಒಂದು ವಾರ ಕಾಲ.

ಒಂದು ಡೋಸ್‌ನಲ್ಲಿ;
ದೊಡ್ಡವರಿಗೆ– ೧೦೦೦ ಮಿ.ಗ್ರಾಂ (೨ ಮಾತ್ರೆ ಅಥವಾ ೨ ಚಮಚ).
೮–೧೨ ವರ್ಷದ ಮಕ್ಕಳಿಗೆ– ೭೫೦ ಮಿ.ಗ್ರಾಂ ೧ ೧/೨ ಮಾತ್ರೆ ಅಥವಾ ೧ ೧/೨ ಚಮಚ).
೩–೭ ವರ್ಷದ ಮಕ್ಕಳಿಗೆ–೫೦೦ ಮಿ.ಗ್ರಾಂ (೧ ಮಾತ್ರೆ ಅಥವಾ ೧ ಚಮಚ).
೧ ವರ್ಷದೊಳಗಿನ ಮಗುವಿಗೆ–೨೫೦ ಮಿ.ಗ್ರಾಂ (೧/೨ ಮಾತ್ರೆ ಅಥವಾ ೧/೨ ಚಮಚ).

## ಥಿಯಾಬೆಂಡಾರ್‌ಝೋಲ್ (Thiobendazole)

ನಿಮ್ಮ ಪದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.
ಬೇರೆ ಬೇರೆ ಜಂತು ಹುಳುಗಳ ಸೋಂಕಿಗೆ
೫೦೦ ಮಿ.ಗ್ರಾಂ ಅಥವಾ ೫ ಮಿ.ಲಿ. ನಲ್ಲಿ ೧ ಗ್ರಾಂ ದ್ರಾವಣವಾಗಿ ಬರುತ್ತದೆ.

**ಥಿಯಾ ಬೆಂಡಾರ್‌ಝೋಲ್‌ಗೆ ಅಡ್ಡ ಪರಿಣಾಮಗಳು ಜಾಸ್ತಿ.** ಕಾರಣ ಬೇರೆ ಔಷಧಗಳು ಸಿಗದಿದ್ದಾಗ ಮಾತ್ರ ಇದನ್ನು ಬಳಸಬೇಕು. ಅಥವಾ ಹೊಟ್ಟೆ ಕರುಳಿನ ಹೊರಗೆ ಜಂತುಗಳಾಗಿದ್ದಾಗ ಇದನ್ನು ಉಪಯೋಗಿಸಬೇಕು.

ಕೊಕ್ಕೆ ಹುಳು, ಚಾಟಿಹುಳುಗಳಿಗೆ ಉಪಯೋಗಿಸಬಹುದು. ದುಂಡುಹುಳು, ಚಿಲುಮಿ ಹುಳುಗಳಿಗೆ ಬಳಸಬಹುದಾದರೂ ಅವಕ್ಕೆ ಪೈಪರರ್‌ಝೀನ್ ಹೆಚ್ಚು ಚೆನ್ನಾಗಿ ಕೆಲಸ ಮಾಡುವುದರಿಂದ ಅದನ್ನು ಉಪಯೋಗಿಸುವುದು ಸೂಕ್ತ. ನಾರು ಹುಳು, ಟ್ರಿಕಿನೋಸಿಸ್‌ಗಳಿಗೂ ಒಳ್ಳೆಯ ಔಷಧವಿದು.

**ಮುನ್ನೆಚ್ಚರಿಕೆ:** ಥಿಯಾಬೆಂಡಾರ್‌ಝೋಲ್ ತೆಗೆದುಕೊಂಡಾಗ ದುಂಡು ಹುಳುಗಳು ಗಂಟಲವರೆಗೆ ಹರಿದು ಬಂದು ಉಸಿರಾಟಕ್ಕೆ ಕಷ್ಟ ಕೊಡಬಹುದು. ಕಾರಣ ದುಂಡುಹುಳುದೊಂದಿಗೆ ಇನ್ನೊಂದು ಜಂತುಹುಳು ಆಗಿದ್ದಾಗ ಮೊದಲು ಪೈಪರರ್‌ಝೀನ್ ಕೊಟ್ಟು ನಂತರ ಥಿಯಾಬೆಂಡಾರ್‌ಝೋಲ್ ಕೊಡುವುದು ಸೂಕ್ತ.
**ಅಡ್ಡ ಪರಿಣಾಮಗಳು:** ಸುಸ್ತು,
ವಾಂತಿಯಾದಂತೆನಿಸುವುದು, ತಲೆ ಸುತ್ತುವುದು,
ವಾಂತಿಯೂ ಆಗಬಹುದು.

ಪ್ರಮಾಣ: ದಿನಕ್ಕೆ /ಕೆಜಿಗೆ/ ೨೫ ಮಿ.ಗ್ರಾಂ
೫೦೦ ಮಿ.ಗ್ರಾಂ ಮಾತ್ರೆ ಅಥವಾ ೫ ಮಿ.ಲಿ. ನಲ್ಲಿ ೧ ಗ್ರಾಂ.
ದಿನಕ್ಕೆರಡು ಬಾರಿಯಂತೆ ೩ ದಿನಗಳ ಕಾಲ ಕೊಡಿ.
ಮಾತ್ರೆಗಳನ್ನು ಚೀಪಬೇಕು.
ದೊಡ್ಡವರಿಗೆ: ೧೫೦೦ ಮಿ.ಗ್ರಾಂ (೩ ಮಾತ್ರೆ ಅಥವಾ ೧/೨ ಚಮಚ).
೮–೧೨ ವರ್ಷದ ಮಕ್ಕಳಿಗೆ ೧೦೦೦ ಮಿ.ಗ್ರಾಂ (೧ ಮಾತ್ರೆ ಅಥವಾ ೧ ಚಮಚ).
೩–೭ ವರ್ಷದ ಮಕ್ಕಳಿಗೆ–೫೦೦ ಮಿ.ಗ್ರಾಂ (೧ ಮಾತ್ರೆ ಅಥವಾ ೧/೨ ಚಮಚ.
೩ ವರ್ಷದೊಳಗಿನ ಮಕ್ಕಳಿಗೆ–೨೫೦ ಮಿ.ಗ್ರಾಂ (೧/೨ ಮಾತ್ರೆ ಅಥವಾ ೧/೪ ಚಮಚ).

## ಪೈರಾಂಟೆಲ್ (Pyrantel)

ಜನಪ್ರಿಯ ಬ್ರಾಂಡ್: ನೆಮೋಸಿಡ್ (Nemocid),
ಪೈರೆಟ್ (Pyrate).
ಪೈರಾಂಟೆಲ್ ಪಾಮೊಏಟ್ (Pyrantel Pamoate) ಎಂದು ಬರುತ್ತದೆ.
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.
ಸಾಮಾನ್ಯವಾಗಿ ೨೫೦ ಮಿ.ಗ್ರಾಂ. ಮಾತ್ರೆ
೫ ಮಿ.ಲಿ. ಯಲ್ಲಿ ೨೫೦ ಮಿ.ಗ್ರಾಂ ದ್ರಾವಣವಾಗಿ ಬರುತ್ತದೆ.
ಚಿಲುಮಿ ಹುಳು, ಕೊಕ್ಕೆ ಹುಳು ಹಾಗೂ ದುಂಡು ಹುಳುಗಳ ಚಿಕಿತ್ಸೆಗೆ ಬರುತ್ತದೆ. ಅದರೆ ದುಬಾರಿ. ವಾಂತಿಯಾಗುವುದು, ತಲೆ ತಿರುಗುವುದು ಮತ್ತು ತಲೆ ನೋವು ಮುಂತಾದ ಅಡ್ಡ ಪರಿಣಾಮಗಳಾಗುವವು.

**ಪ್ರಮಾಣ (ಡೋಸ್)**
೧೦ ಮಿಗ್ರಾ/ಪ್ರತಿ ಕಿಲೊ ಗೆ.
೨೫೦ ಮಿ.ಗ್ರಾಂ ಮಾತ್ರೆಯನ್ನುಪಯೋಗಿಸಿ,
ಕೊಕ್ಕೆ ಹುಳು ಮತ್ತು ದುಂಡು ಹುಳುಗಳಿಗೆ ಒಂದು ಡೋಸನ್ನು ಕೊಡಿ. ಚಿಲುಮಿ ಹುಳುಗಳಿಗೆ ಒಂದು ವಾರದ ನಂತರ ಮತ್ತೆ ಒಮ್ಮೆ ಕೊಡಿ.
**ಒಂದು ಡೋಸ್‌ನಲ್ಲಿ,**
ದೊಡ್ಡವರಿಗೆ– ೭೫೦ ಮಿ.ಗ್ರಾಂ (೩ ಮಾತ್ರೆಗಳು)

೧೦–೧೪ ವರ್ಷದ ಮಕ್ಕಳಿಗೆ– ೫೦೦ ಮಿ.ಗ್ರಾಂ (೨ ಮಾತ್ರೆ)
೬–೯ ವರ್ಷದ ಮಕ್ಕಳಿಗೆ– ೨೫೦ ಮಿ.ಗ್ರಾಂ (೧ ಮಾತ್ರೆ)
೨–೫ ವರ್ಷದವರಿಗೆ– ೧೨೫ ಮಿ.ಗ್ರಾಂ (೧/೨ ಮಾತ್ರೆ)
೨ ವರ್ಷದೊಳಗಿನ ಮಕ್ಕಳಿಗೆ– ೬೨ಮಿ.ಗ್ರಾಂ (೧/೪ ಮಾತ್ರೆ)

**ಲಾಡಿ ಹುಳುಗಳಿಗೆ**

ಲಾಡಿ ಹುಳುಗಳಲ್ಲಿ ಅನೇಕ ವಿಧಗಳಿವೆ. ನಿಕ್ಲೋಸಮೈಡ್ (Niclosamide) ಎಲ್ಲದಕ್ಕೂ ಕೆಲಸ ಮಾಡುತ್ತದೆ. ಅದು ಬಿಟ್ಟರೆ ಪ್ರಾಝಿಕ್ವಾಂಟೆಲ್ (Praziquantel).

## ನಿಕ್ಲೊಸಮೈಡ್ (Niclosamide)

ಜನಪ್ರಿಯ ಬ್ರಾಂಡ್: ನಿಕ್ಲೋಸಾನ್ (Niclosan).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.
೫೦೦ ಮಿ.ಗ್ರಾಂ ನ ಚೀಪಬಹುದಾದ ಮಾತ್ರೆಗಳಾಗಿ ಬರುತ್ತವೆ.
ಯಾವುದೇ ಅಡ್ಡ ಪರಿಣಾಮವಿಲ್ಲದ, ಜೀರ್ಣನಾಳದ ಲಾಡಿ ಹುಳುವಿಗೆ ಅತ್ಯುತ್ತಮ ಔಷಧ ಇದು. ಆದರೆ ಜೀರ್ಣನಾಳದ ಹೊರಗಿರುವ ತತ್ತಿಗಳಿಗೆ ಪರಿಣಾಮಕಾರಿ ಅಲ್ಲ.

**ಪ್ರಮಾಣ (ಡೋಸ್):**
ಒಂದೇ ಬಾರಿ ಚೆನ್ನಾಗಿ ಚೀಪಿ ನುಂಗಿ. ನುಂಗುವ ಹಿಂದೆ ಮುಂದೆ ಎರಡು ತಾಸುಗಳ ಕಾಲ ಏನೇನೂ ತೆಗೆದುಕೊಳ್ಳಬಾರದು. ನಂತರ ಅನಿಮಾ ಕೊಟ್ಟರೆ ಲಾಡಿ ಹುಳುಗಳೆಲ್ಲ ಹೊರ ಹೋಗಬಹುದು.
೮ ವರ್ಷದ ಮೇಲ್ಪಟ್ಟವರಿಗೆ– ೨ ಗ್ರಾಂ (೪ ಮಾತ್ರೆಗಳು)
೨–೮ ವರ್ಷದವರಿಗೆ– ೧ಗ್ರಾಂ. (೨ ಮಾತ್ರೆಗಳು)
೨ ವರ್ಷದೊಳಗಿನವರಿಗೆ– ೫೦೦ ಮಿ.ಗ್ರಾಂ (೧ ಮಾತ್ರೆ).

## ಪ್ರಾಝಿಕ್ವಾಂಟೆಲ್ (Praziquantel).

ಜನಪ್ರಿಯ ಬ್ರಾಂಡ್: ಡೀಸ್ಟೋಸೈಡ್ (Distocide), ಪ್ರಾಝಿನ್ (Prazine).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.
೧೫೦ ಮಿ.ಗ್ರಾಂ ಮತ್ತು ೬೦೦ ಮಿ.ಗ್ರಾಂ ಮಾತ್ರೆಗಳಾಗಿ ಬರುತ್ತವೆ.
ಇದೂ ಕೂಡ ಎಲ್ಲ ಜಾತಿಯ ಲಾಡಿ ಹುಳುಗಳಿಗೆ ಉತ್ತಮ ಔಷಧ. ಆದರೆ ದುಬಾರಿ.
**ಎಚ್ಚರಿಕೆ:** ಪ್ರಾಝಿಕ್ವಾಂಟೆಲ್‌ನ್ನು ಗರ್ಭಿಣಿಯರು ಮತ್ತು ೪ ವರ್ಷದೊಳಗಿನ ಮಕ್ಕಳು ಸೇವಿಸಬಾರದು.
ಹಾಲೂಡುವ ತಾಯಂದಿರು ಔಷಧ ಮುಗಿದ ೭೨ ತಾಸುಗಳವರೆಗೂ ಮಗುವಿಗೆ ಹಾಲೂಡಬಾರದು. (ಹಾಲು ಹಿಂಡಿ ಹೊರಚೆಲ್ಲಬೇಕು.)

**ಅಡ್ಡಪರಿಣಾಮಗಳು:**
ಸುಸ್ತು, ತಲೆ ತಿರುಗುವುದು, ತಲೆ ನೋವು, ಹಸಿವಾಗದಿರುವುದು, ಇವೆಲ್ಲ ಅಡ್ಡ ಪರಿಣಾಮಗಳು. ಆದರೆ ಡೋಸ್ ಕಡಿಮೆ ತೆಗೆದುಕೊಂಡಾಗ ಅಡ್ಡ ಪರಿಣಾಮಗಳು ಕಾಣಿಸಿಕೊಳ್ಳುವುದಿಲ್ಲ.
ಪ್ರಮಾಣ–ದನದ ಮಾಂಸ, ಹಂದಿ ಮಾಂಸಗಳಲ್ಲಿರುವ ಲಾಡಿ ಹುಳುಗಳ ಸಮೇತ ಎಲ್ಲಾ ಲಾಡಿ ಹುಳುಗಳಿಗಾಗಿ, (ದಿನಕ್ಕೆ/ ಕೆಜಿಗೆ/ ೧೦–೨೦ ಮಿ.ಗ್ರಾಂ) ೬೦೦ ಮಿ.ಗ್ರಾಂ. ಮಾತ್ರೆ ಉಪಯೋಗಿಸಿ,

**ಒಮ್ಮೆ ಮಾತ್ರ ತೆಗೆದುಕೊಳ್ಳಿ.**

ದೊಡ್ಡವರಿಗೆ–೬೦೦ ಮಿ.ಗ್ರಾಂ (೧ ಮಾತ್ರೆ)
೮–೧೨ ವರ್ಷದ ಮಕ್ಕಳಿಗೆ– ೩೦೦ ಮಿ.ಗ್ರಾಂ (೧/೨ ಮಾತ್ರೆ)
೪–೭ ವರ್ಷದ ಮಕ್ಕಳಿಗೆ ೧೫೦ ಮಿ.ಗ್ರಾಂ (೧/೨ ಮಾತ್ರೆ)

**ಕಣ್ಣಿಗೆ**
**ಜೀವಿರೋಧಕ ಕಣ್ಣಿನ ಮುಲಮು.**

**ಆಕ್ಸಿಟೆಟ್ರಾಸೈಕ್ಲಿನ್ (Oxytetracycline), ಅಥವಾ ಕ್ಲೋರ್‌ಟೆಟ್ರಾಸೈಕ್ಲಿನ್ (Chlorotetracycline) ಕಣ್ಣಿನ ಮುಲಮು.**

ಜನಪ್ರಿಯ ಬ್ರಾಂಡ್: ನಿಕ್ಲೋಸಾನ್ (Niclosan).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.
ಮದ್ರಾಸ್ ಕಣ್ಣು ಆದರೆ,
ಬ್ಯಾಕ್ಟೀರಿಯಾಗಳಿಂದ ಕಣ್ಣಿಗೆ ಸೋಂಕು ಆಗಿ ಮದ್ರಾಸು ಕಣ್ಣು ಆದವರಿಗೆ ಮತ್ತು ಟ್ರಾಕೋಮಾ ಆಗಿದ್ದರೆ ಈ ಮುಲಮುಗಳು ಉಪಯುಕ್ತ. ಟ್ರಾಕೋಮಾ ಪೂರ್ತಿ ಗುಣವಾಗಲು ಟೆಟ್ರಾಸೈಕ್ಲಿನ್ (Tetracycline) ಅಥವಾ ಅರಿಥ್ರೋಮೈಸಿನ್ (Erythromycin)ನ್ನು ಬಾಯಿಯಿಂದಲೂ ಸೇವಿಸಬೇಕು.
ಕಣ್ಣಿನ ಮುಲಮಿನ ಪ್ರಯೋಜನ ಆಗಬೇಕೆಂದರೆ ಮುಲಮನ್ನು ರೆಪ್ಪೆಯ ಒಳಭಾಗದಲ್ಲಿ ಹಾಕಬೇಕು. ದಿನಕ್ಕೆ ೩–೪ ಬಾರಿ ಹಾಕಿ. ರಾತ್ರಿ ಮಲಗುವಾಗೊಮ್ಮೆ ಹಾಕಿಕೊಂಡು ಮಲಗಿದರೆ ಕಣ್ಣಲ್ಲಿ ಪಿಚ್ಚು ತುಂಬುವುದಿಲ್ಲ.
ಮಗುವನ್ನು ಗೊನೋರಿಯಾ, ಕ್ಲಮೈಡಿಯಾಗಳಿಂದ ರಕ್ಷಿಸಲು ಮಗು ಹುಟ್ಟುತ್ತಲೇ ೧% ಟೆಟ್ರಾಸೈಕ್ಲಿನ್ ಅಥವಾ ಅರಿಥ್ರೋಮೈಸಿನ್ ಅಥವಾ ಕ್ಲೋರಂಫೆನಿಕಾಲ್ ಕಣ್ಣಿನ ಮುಲಾಮನ್ನು ಮಗುವಿನ ಕಣ್ಣೊಳಗೆ ಹಾಕಬೇಕು. ಮಗುವಿನ ಕಣ್ಣಿನ ಒಂದು ಮೂಲೆಯಲ್ಲಿ ಸ್ವಲ್ಪವೇ ಮುಲಮನ್ನು ಹಾಕಿ. ನಂತರ ಅದನ್ನು ಒರೆಸಲು ಹೋಗಬೇಡಿ. ಜೀವಿರೋಧಕ ಮುಲಮು ಸಿಗದಿದ್ದರೆ ಸಿಲ್ವರ್ ನೈಟ್ರೇಟ್ (Silver nitrate) ನ್ನು ಹಾಕಿ.

**ಸಿಲ್ವರ್ ನೈಟ್ರೇಟ್ ಕಣ್ಣಿನ ಹನಿಗಳು (ಡ್ರಾಪುಗಳು) ನವಜಾತ ಶಿಶುಗಳ ಕಣ್ಣಿನ ರಕ್ಷಣೆಗಾಗಿ.**

ಮಗು ಜನಿಸುತ್ತಲೇ ೧% ಸಿಲ್ವರ್ ನೈಟ್ರೇಟ್‌ನ ಹನಿಯನ್ನು ಮಗುವಿನ ಎರಡೂ ಕಣ್ಣುಗಳಲ್ಲೂ ಹಾಕುವುದರಿಂದ ಪರಮಾ ರೋಗದ ಸೋಂಕಿನಿಂದ ಅದನ್ನು ರಕ್ಷಿಸಬಹುದು. ಹುಟ್ಟಿದ ಎಲ್ಲಾ ಶಿಶುಗಳಿಗೂ ಹಾಕಲೇ ಬೇಕು.

**ನೋವು: ನೋವು ನಿವಾರಕಗಳು**

ಸೂಚನೆ:– ಅನೇಕ ಪ್ರಕಾರದ ನೋವು ನಿವಾರಕಗಳು ಪೇಟೆಯಲ್ಲಿವೆ. ತಪ್ಪು ಕಲ್ಪನೆ ಹುಟ್ಟಿಸುವ ಜಾಹೀರಾತುಗಳನ್ನೂ ಬಹಳ. ಆದರೆ ಎಲ್ಲವೂ ಸುರಕ್ಷಿತವಲ್ಲ. ಕೆಲವು ಅಪಾಯಕಾರಿ ಕೂಡ. ಡೈಪೈರೋನ್ (ಅನಾಲ್ಜಿನ್, Analgin) ಗುಂಪಿನವು ತೀವ್ರ ಅಪಾಯಕಾರಿ. ಸಂಪೂರ್ಣ ಸುರಕ್ಷಿತ ಎಂದು ಗೊತ್ತಿರುವ ಆಸ್ಪಿರಿನ್ (Aspirin), ಪ್ಯಾರಾಸಿಟಮಾಲ್ (Paracetamol) ಮತ್ತು ಐಬುಪ್ರುಫೆನ್ (Ibuprufen) ನೋವು ನಿವಾರಕಗಳನ್ನಷ್ಟೇ ಉಪಯೋಗಿಸಿ. ಹೆಚ್ಚು ಶಕ್ತಿಯ ನೋವು ನಿವಾರಕ ಕೋಡೀನ್ (Codeine) ಸಲುವಾಗಿ ೪೩೫ ನೇ ಪುಟ ನೋಡಿ.

**ಆಸ್ಪಿರಿನ್ (Aspirin), ಅಸಿಟೈಲ್‌ಸ್ಯಾಲಿಸಲಿಕ್ ಆಸಿಡ್ (Acetysalicylic acid)**

ಜನಪ್ರಿಯ ಬ್ರಾಂಡ್:
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.
೩೦೦ ಮಿ.ಗ್ರಾಂ ಮಾತ್ರೆಗಳು ಬರುತ್ತವೆ.
ಅತ್ಯಂತ ಉಪಯುಕ್ತ ಹಾಗು ಅತಿ ಕಡಿಮೆ ಬೆಲೆಯ ನೋವು ನಿವಾರಕವಿದು. ನೋವು ಶಮನ ಮಾಡಲು, ಜ್ವರ ಕಡಿಮೆ ಮಾಡಲು ಹಾಗು ಉರಿ ಕಡಿಮೆ ಮಾಡಲು ಇದು ಸಹಾಯಕ. ಕೆಮ್ಮು ತುರಿಕೆಯನ್ನು ಕಡಿಮೆ ಮಾಡಲಿಕ್ಕೂ ಸ್ವಲ್ಪ ಮಟ್ಟಿಗೆ ಸಹಾಯ ಮಾಡುತ್ತದೆ.

**ನೋವು:**– ನೋವು ಹಾಗು ನೆಗಡಿಗೆಂದು ಅನೇಕ ನಮೂನೆಯ ಔಷಧಗಳು ಪೇಟೆಯಲ್ಲಿದ್ದು ಅವುಗಳ ಒಳಗಿರುವುದು ಆಸ್ಪಿರಿನ್ (Aspirin) ಮಿಶ್ರಿತ ಔಷಧಗಳೇ. ಮಿಶ್ರಿತ ಔಷಧ ಆದ್ದರಿಂದ ಅವುಗಳ

ಬೆಲೆ ಬಹಳ. ಅಲ್ಲದೇ ಅವುಗಳಿಂದ ಹೆಚ್ಚು ಪ್ರಯೋಜನವಿಲ್ಲ.

**ಅಪಾಯ ಮತ್ತು ಮುಂಜಾಗರೂಕತೆ**

೧. ಹೊಟ್ಟೆನೋವು, ಅಜೀರ್ಣಕ್ಕೆ ಆಸ್ಪಿರಿನ್ ಬೇಡ. ಇದೂ ಒಂದು ಆಮ್ಲವಾಗಿದ್ದು, ಹೊಟ್ಟೆ ಹಾಗು ಕರುಳಿನ ತೊಂದರೆಯನ್ನು ಜಾಸ್ತಿ ಮಾಡುತ್ತದಷ್ಟೇ. ಅದಕ್ಕೆ ಹೊಟ್ಟೆ ಹಾಗು ಕರುಳಿನ ಹುಣ್ಣು ಇರುವವರು ಎಂದೂ ಆಸ್ಪಿರಿನ್ ಉಪಯೋಗಿಸಬಾರದು.

೨. ಕೆಲವರಲ್ಲಿ ಆಸ್ಪಿರಿನ್ ಹೊಟ್ಟೆನೋವು, ಮತ್ತು ಎದೆನೋವುಗಳನ್ನು ಉಂಟುಮಡುವುದು. ಕಾರಣ ಆಸ್ಪಿರಿನ್‌ನ್ನು ಹಾಲು ಅಥವಾ ಊಟದೊಂದಿಗೇ ತೆಗೆದುಕೊಳ್ಳಿ. ಸ್ವಲ್ಪ ಸೋಡಾ ಬೈಕಾರ್ಬೋನೇಟ್ (Sodabicarbonate) ಅಥವಾ ಜಾಸ್ತಿ ನೀರಿನೊಂದಿಗೆ ತೆಗೆದುಕೊಳ್ಳಬಹುದು.

೩. ನೀರ್ಗಳೆತ ಆದವರಿಗೆ ಮೂತ್ರ ಆಗುವ ತನಕ ಆಸ್ಪಿರಿನ್ ಕೊಡಬೇಡಿ.

೪. ಒಂದು ವರ್ಷದೊಳಗಿನ ಮಗುವಿಗೆ ಅಥವಾ ಅಸ್ತಮಾ ಇರುವ ಮುದುಕರಿಗೆ ಆಸ್ಪಿರಿನ್ ಕೊಡಬಾರದು. ಅಘಾತ ಉಂಟುಮಾಡಬಹುದು.

**೫. ಮಕ್ಕಳ ಕೈಗೆ ಸಿಗದಂತೆ ಇಡಿ.**

**ನೋವು ಅಥವಾ ಜ್ವರಕ್ಕೆ ಆಸ್ಪಿರಿನ್**

ಪ್ರಮಾಣ:
೩೦೦ ಮಿ.ಗ್ರಾಂ ಮಾತ್ರೆ.
ದಿನಕ್ಕೆ ೪–೬ ಬಾರಿ ಅಥವಾ ೪–೬ ಗಂಟೆಗೊಮ್ಮೆ ಸೇವಿಸಬೇಕು.
ವಯಸ್ಕರಿಗೆ ೧–೨ ಮಾತ್ರೆ (೬೦೦ ಮಿ.ಗ್ರಾ).

**ಮಕ್ಕಳಿಗೆ ರ್‍ಯುಮಾಟಿಕ್ ಜ್ವರವಿದ್ದಾಗ ಹೊರತುಪಡಿಸಿ ಎಂದೂ ಆಸ್ಪಿರಿನ್ ಕೊಡಬಾರದು.**

ಸಂದು ನೋವು, ಮುಟ್ಟಿನ ನೋವು, ರ್‍ಯುಮಾಟಿಕ್ ಜ್ವರ ಇವು ಬಹಳ ತೀವ್ರವಿದ್ದಾಗ ಸಾಮಾನ್ಯ ಪ್ರಮಾಣದ (ಡೋಸಿನ) ಎರಡರಷ್ಟು ಕೊಡಬಹುದು. ಅಥವಾ ದಿನಕ್ಕೆ/ಕೆ.ಜಿ.ಗೆ/೧೦೦ ಮಿ.ಗ್ರಾಂ ನಂತೆ ಕೊಡಬಹುದು. ಕಿವಿಯಲ್ಲಿ ಗುಂಯ್ ಶಬ್ದ ಬರಲಾರಂಭಿಸಿದರೆ ಡೋಸನ್ನು ಕಡಿಮೆ ಮಾಡಿ.

## <u>ಅಸೆಟಮಿಲೋಫೆನ್ (ಪ್ಯಾರಾಸಿಟಮಾಲ್)</u>
## <u>Acetaminophen (Paracetamol).</u>

ಜನಪ್ರಿಯ ಬ್ರಾಂಡ್: ಪಾಸಿಮೋಲ್ (Pacimol), ಸೆಟಾನಿಲ್ (Cetanil), ಪ್ಯಾರಾಸಿಟಮಾಲ್ (Paracetamol).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.

**ನೋವು ಮತ್ತು ಜ್ವರಕ್ಕೆ**
೫೦೦ ಮಿ.ಗ್ರಾಂ ಮಾತ್ರೆಗಳು ಮತ್ತು ದ್ರಾವಣ ರೂಪದಲ್ಲಿ ಕೂಡ ಬರುತ್ತವೆ.
**ಮಕ್ಕಳಿಗೆ ಆಸ್ಪಿರಿನ್‌ಗಿಂತ ಇದು ಕ್ಷೇಮಕರ.** ಇದು ಹೊಟ್ಟೆಯಲ್ಲಿ ತಳಮಳ ಮಾಡದಿರುವುದರಿಂದ ಹೊಟ್ಟೆ ಹುಣ್ಣು ಇರುವವರೂ ಉಪಯೋಗಿಸಬಹುದು. ಗರ್ಭಿಣಿ ಸ್ತ್ರೀಯರು ಕೂಡ ಉಪಯೋಗಿಸಬಹುದಾದ ನಿರಪಾಯಕಾರಿ ಔಷಧವಿದು.
**ಜ್ವರ ಮತ್ತು ನೋವಿಗೆ ಪ್ಯಾರಾಸಿಟಮಾಲ್‌ನ ಪ್ರಮಾಣ:**
೫೦ಮಿ.ಗ್ರಾಂ ಮಾತ್ರೆ–ಅಥವಾ ೫ ಮಿ.ಲಿ.ಯಲ್ಲಿ ೧೨೫ ಮಿ.ಗ್ರಾಂ ಸೇರಿಸಿದ ದ್ರವ (ಸಿರಪ್),
**ಒಂದು ಡೋಸ್ ನಲ್ಲಿ,**
ದೊಡ್ಡವರಿಗೆ– ೫೦೦ ಮಿ.ಗ್ರಾಂ (೧–೨ ಮಾತ್ರೆ).
೮–೧೨ ವರ್ಷದ ಮಕ್ಕಳಿಗೆ–೫೦೦ ಮಿಗ್ರಾಂ (೧ ಮಾತ್ರೆ).
೩–೭ ವರ್ಷದ ಮಕ್ಕಳಿಗೆ–೨೫೦ ಮಿ.ಗ್ರಾಂ (೧/೨ ಮಾತ್ರೆ).
೬ ತಿಂಗಳು–೨ ವರ್ಷ ೧೨೫ ಮಿ.ಗ್ರಾಂ (೧ ಟೀ ಚಮಚ).
೬ ತಿಂಗಳೊಳಗಿನ ಮಗುವಿಗೆ–೬೨ ಮಿ.ಗ್ರಾಂ. (೧/೨ ಟೀ ಚಮಚ).

**ಇಬುಪ್ರುಫೇನ್**
**(Ibuprufen)**

ನಿಮ್ಮ ಪ್ರದೇಶದಲ್ಲಿಯ
ಹೆಸರು______ಪ್ರಮಾಣ_____ಬೆಲೆ_______.
೨೦೦ ಮಿ.ಗ್ರಾಂ ಮಾತ್ರೆಗಳು ಇರುತ್ತವೆ.
ಸಂದು ನೋವು, ಮಾಂಸಖಂಡದ ನೋವು, ಮುಟ್ಟಿನ ನೋವು, ತಲೆನೋವು ಇವೆಲ್ಲಕ್ಕೂ ಉಪಯುಕ್ತ.
ಆ್ಯಸ್ಪಿರಿನ್‌ಗಿಂತಲೂ ದುಬಾರಿ.
**ಎಚ್ಚರಿಕೆ: ಆ್ಯಸ್ಪಿರಿನ್‌ಗೆ ಅಲರ್ಜಿ ಇರುವವರು ಇಬುಪ್ರುಫೇನ್‌ನ್ನು ತೆಗೆದುಕೊಳ್ಳಬಾರದು.**
**ಗರ್ಬಿಣಿಯರೂ ತೆಗೆದುಕೊಳ್ಳ ಬಾರದು.**
ಪ್ರಮಾಣ (ಡೋಸ್):
೨೦೦ ಮಿ.ಗ್ರಾಂ ಮಾತ್ರೆಯನ್ನು ಉಪಯೊಗಿಸಿ, ಪ್ರತಿ ೪–೬ ತಾಸಿಗೊಮ್ಮೆ ಐಬುಪ್ರುಫೇನ್ ಮಾತ್ರೆಯನ್ನು ಕೊಡಿ.

**ಒಂದು ಡೋಸ್‌ನಲ್ಲಿ,**
ದೊಡ್ಡವರು, ೧೨ ವರ್ಷ ಮೇಲ್ಪಟ್ಟವರಿಗೆ–೨೦೦ ಮಿ.ಗ್ರಾಂ (೧ ಮಾತ್ರೆ)
೧೨ ವರ್ಷಕ್ಕೂ ಕೆಳಗಿನವರಿಗೆ–ಕೊಡಬೇಡಿ.
ಒಂದು ಮಾತ್ರೆಯಲ್ಲಿ ನೋವು ಅಥವಾ ಜ್ವರವು ಕಡಿಮೆಯಾಗದಿದ್ದರೆ ಮತ್ತೊಂದು ಸೇವಿಸಿ. ಆದರೆ ಎಂದೂ ೨೪ ಗಂಟೆಯೊಳಗೆ ೬ ಮಾತ್ರೆಗಳಿಗಿಂತ ಹೆಚ್ಚು ಸೇವಿಸಬಾರದು.

**ಕೆಫೀನ್ ಜೊತೆಗೆ ಎರ್ಗೋಟಮೀನ್**
**Caffeine + Ergotamine**

ಜನಪ್ರಿಯ ಬ್ರಾಂಡ್: ಮೀಗ್ರೆನಿಲ್ (Migranil).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.

**ಅರೆ ತಲೆನೋವಿಗೆ**
೧ ಮಿ.ಗ್ರಾಂ ಎರ್ಗೋಟಮೀನ್ ಮಾತ್ರೆಯಾಗಿ ಬರುತ್ತದೆ.
**ಕೆಫೀನ್‌ನೊಂದಿಗೆ ಎರ್ಗೋಟಮೀನ್ ಮಾತ್ರೆಯ ಪ್ರಮಾಣ,**
ದೊಡ್ಡವರಿಗೆ: ತಲೆನೋವು ಆರಂಭವಾಗುತ್ತಲೇ ೨ ಮಾತ್ರೆಗಳನ್ನು ತೆಗೆದುಕೊಳ್ಳಿ. ನಂತರ ನೋವು ಹೋಗುವವರೆಗೂ ಪ್ರತಿ ೧/೨ ತಾಸಿಗೊಮ್ಮೆ ೧ ಮಾತ್ರೆಯನ್ನು ತೆಗೆದುಕೊಳ್ಳಿ.  ದಿನಕ್ಕೆ ೬ ಕ್ಕಿಂತ ಹೆಚ್ಚು ತೆಗೆದುಕೊಳ್ಳಬಾರದು.

**ಮುನ್ನೆಚ್ಚರಿಕೆ:**
ಈ ಔಷಧವನ್ನು ಪದೇ ಪದೇ ತೆಗೆದುಕೊಳ್ಳಬಾರದು.
ಗರ್ಭಿಣಿಯರು ತೆಗೆದುಕೊಳ್ಳಬಾರದು.

**ಕೊಡೀನ್**
**(Codeine)**
ಅತಿ ನೋವಿಗೆ ಕೊಡೀನ್– (೪೩೫ ನೇ ಪುಟ ನೋಡಿ.)

## ಗಾಯ ಹೊಲಿಯುವ ಮೊದಲು ನೋವು ನಿಲ್ಲಿಸಲು ಅನೆಸ್ಥೆಟಿಕ್‌ಗಳು

**ಲಿಡೋಕೇನ್ (ಕ್ಸೈಲೋಕೇನ್)**
**(Lidocaine, Xylocaine)**

ಜನಪ್ರಿಯ ಬ್ರಾಂಡ್:
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.
೨% ಎಫಿನೆಫ್ರಿನ್ (Epinephrine) ಇರಬಹುದು ಅಥವಾ ಅದು ಇಲ್ಲದೆಯೂ ಬರಬಹುದು.
ಇಂಜೆಕ್ಷನ್ ಚಿಕ್ಕ ಬಾಟಲುಗಳಲ್ಲಿ ಬರುತ್ತದೆ.
ಗಾಯವನ್ನು ಹೊಲಿಯುವ ಮುನ್ನ ಅದು ನೋಯಬಾರದೆಂದು ಗಾಯದ ಸುತ್ತ ಇಂಜೆಕ್ಷನ್ ಚುಚ್ಚುತ್ತಾರೆ. ಅಂದರೆ ಆ ಜಾಗ ಸ್ವಲ್ಪ ಹೊತ್ತು ಮರಗಟ್ಟಿರುತ್ತದೆ.
ಒಂದೊಂದು ಸೆಂಟಿ ಮೀಟರ್ ದೂರದಲ್ಲಿ ಗಾಯದ ಸುತ್ತ ಚರ್ಮದ ಮೇಲೂ, ಚರ್ಮದ ಒಳಗೂ ಕೊಡಬೇಕು. ನಿಧಾನವಾಗಿ ಇಂಜೆಕ್ಷನ್ ಕೊಡಿ.
2 ಸೆ.ಮಿ.ಗೆ ಚರ್ಮದಲ್ಲಿ ೧ ಮಿ.ಲಿ. ದ್ರಾವಣ ಹೋಗಿರಬೇಕು. ಒಮ್ಮೆಗೆ ೨೦ ಮಿ.ಲಿ ಗಿಂತ ಹೆಚ್ಚು ದ್ರಾವಣವನ್ನು ಉಪಯೋಗಿಸಬೇಡಿ. ಗಾಯ ಸ್ವಚ್ಛವಾಗಿದ್ದರೆ ಅಕ್ಕಪಕ್ಕದಲ್ಲಿ ಚುಚ್ಚಿಬಿಡಬಹುದು.
ಹೊಲಸಾಗಿತ್ತೆಂದರೆ ಸ್ವಲ್ಪ ತೊಳೆದು ಸುತ್ತಲೂ

ಇಂಜೆಕ್ಷನ್ ಕೊಟ್ಟು ನಂತರವೇ ಗಾಯವನ್ನು ಚೆನ್ನಾಗಿ **ತೊಳೆದು** ಹೊಲಿಗೆ ಹಾಕಬೇಕು.

ಗಾಯಗಳನ್ನು ಹೊಲಿಯುವ ಮೊದಲು ಎಪಿನೆಫ್ರಿನ್ ಇರುವಂಥ ಲಿಡೋಕೇನ್‌ನ್ನೇ ಉಪಯೋಗಿಸಿ. ಇಪಿನೆಫ್ರಿನ್‌ನಿಂದ ಚರ್ಮವು ಹೆಚ್ಚು ಹೊತ್ತು ಮರಗಟ್ಟಿ ಇರುತ್ತದಲ್ಲದೇ ರಕ್ತಸ್ರಾವವನ್ನು ತಡೆಯಲು ಸಹಾಯ ಮಾಡುತ್ತದೆ.

ಕೈಬೆರಳು, ಕಾಲ ಬೆರಳು, ಶಿಶ್ನ, ಕಿವಿ ಮತ್ತು ಮೂಗಿನ ಮೇಲೆ ಹೊಲಿಗೆ ಹಾಕುವಾಗ ಎಪಿನೆಫ್ರಿನ್ ಇಲ್ಲದ ಲಿಡೋಕೇನ್‌ನ್ನೇ ಉಪಯೋಗಿಸಿ. ಏಕೆಂದರೆ ಈ ಮುಖ್ಯ ಅಂಗಗಳಿಗೆ ಎಪಿನೆಫ್ರಿನ್ ರಕ್ತ ಚಲನೆಯನ್ನೇ ನಿಲ್ಲಿಸಿಬಿಟ್ಟಿತೆಂದರೆ ಬಹಳ ಅಪಾಯ.

**ಮೂಗಿನಿಂದ ತೀವ್ರ ರಕ್ತಸ್ರಾವ ಆಗುತ್ತಿದ್ದರೆ** ತಡೆಯಲು ಎಪಿನೆಫ್ರಿನ್ ಇರುವ ಲಿಡೋಕ್ವಿನ್ ಬಹಳ ಉಪಯುಕ್ತ. ಸ್ವಲ್ಪ ಹತ್ತಿಯಲ್ಲಿ ಇದನ್ನು ಹಾಕಿ ಮುದ್ದೆ ಮಾಡಿ ರಕ್ತ ಸೋರುತ್ತಿರುವ ಹೊಳ್ಳೆಯಲ್ಲಿ ತುರುಕಿ. ಎಪಿನೆಫ್ರಿನ್ ರಕ್ತನಾಳಗಳು ಮುದುಡಿಕೊಂಡು ಮುಚ್ಚುವಂತೆ ಮಾಡಿ ರಕ್ತಸ್ರಾವವನ್ನು ಕಡಿಮೆ ಮಾಡುತ್ತದೆ.

## ಹೊಟ್ಟೆ ಮುರಿತಕ್ಕೆ ಸೆಡೆತರೋಧಕ

### ಡೈಸೈಕ್ಲೋಮಿನ್ Dicyclomine

ಜನಪ್ರಿಯ ಬ್ರಾಂಡ್: ಸೈಕ್ಲೋಪೆನ್ (Cyclopen), ಸೈಕ್ಲೋಪಾಂ (Cyclopam).

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.

ಎಂಟಿಸ್ಪಾಸ್ಮೋಡಿಕ್ (ಹೊಟ್ಟೆ ನೋವಿಗೆ) ಮಾತ್ರೆ, ಬಾಯಲ್ಲಿ ಹಾಕಲು ಹನಿ ಹಾಗು ಇಂಜೆಕ್ಷನ್ ಲಭ್ಯ.

**ಪ್ರಮಾಣ (ಡೋಸ):–**

ಮಾತ್ರೆ ೧೦–೨೦ ಮಿ.ಗ್ರಾಂ, ದಿವಸಕ್ಕೆ ೨ ಬಾರಿ.

ಇಂಜೆಕ್ಷನ್ (ಮಾಂಸ ಖಂಡದಲ್ಲಿ) ೨೦ ಮಿ.ಗ್ರಾಂ.

## ಆಮ್ಲೀಯತೆ, ಎದೆಉರಿ ಹಾಗು ಹೊಟ್ಟೆಹುಣ್ಣುಗಳಿಗೆ ಎಂಟಾಸಿಡ್‌ಗಳು

### ಅಲ್ಯುಮಿನಿಯಂ ಹೈಡ್ರಾಕ್ಸೈಡ್ ಅಥವಾ ಮೆಗ್ನೇಶಿಯಂ ಹೈಡ್ರಾಕ್ಸೈಡ್ Aluminum hydroxide ಅಥವಾ Magnesium hydroxide.

ಜನಪ್ರಿಯ ಬ್ರಾಂಡ್:

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.

೫೦೦ ರಿಂದ ೭೫೦ ಮಿ.ಗ್ರಾಂ ಮಾತ್ರೆಗಳಾಗಿ ಅಥವಾ ೫ ಮಿ.ಲಿ. ನಲ್ಲಿ ೩೦೦–೫೦೦ ಮಿ.ಗ್ರಾಂ, ದ್ರಾವಣ ರೂಪದಲ್ಲಿ ಬರುತ್ತದೆ.

ಕೆಲವೊಮ್ಮೆ ಇವು ಮೆಗ್ನೇಶಿಯಂ ಟ್ರೈಸಿಲಿಕೇಟ್ (Magnesium trisilicate) ಜೊತೆ ಮಿಶ್ರಣವಾಗಿರುತ್ತವೆ. ಸೆಮಿಥಿಕೋನ್ (Simethicone) ಕೂಡ ಸೇರಿತ್ತೆಂದರೆ ಹೊಟ್ಟೆಯಲ್ಲಿನ ಗ್ಯಾಸ್ ಸಹ ಕಡಿಮೆಯಾಗುತ್ತದೆ. ಹೊಟ್ಟೆ ಕರುಳಿನ ಹುಣ್ಣಿನಿಂದ ಆಗುವ ಆಮ್ಲೀಯತೆ ಮತ್ತು ಎದೆ ಉರಿಯ ಚಿಕಿತ್ಸೆಯಲ್ಲಿ ಇದನ್ನು ಬಳಸುತ್ತಾರೆ. ಊಟದ ೧ ತಾಸಿನ ನಂತರ ಅಥವಾ ಮಲಗುವ ಮೊದಲು ಎಂಟಾಸಿಡ್ (Antacid) ತೆಗೆದುಕೊಂಡರೆ ಒಳ್ಳೆಯದು. ೨–೩ ಮಾತ್ರೆಗಳನ್ನು ಚೀಪಿ. ತೀವ್ರವಾದ ಕರುಳು ಹುಣ್ಣಿಗೆ ತಾಸಿಗೆ ೩–೬ ಮಾತ್ರೆಗಳನ್ನು ಚೀಪಿ ತೆಗೆದುಕೊಳ್ಳಬೇಕು.

**ಟೆಟ್ರಾಸೈಕ್ಲಿನ್ ತೆಗೆದುಕೊಳ್ಳುತ್ತಿದ್ದರೆ ಈ ಔಷಧವನ್ನು ಸೇವಿಸಬೇಡಿ.** ಮೆಗ್ನೇಶಿಯಂ (Magnesium) ಮತ್ತು ಎಂಟಾಸಿಡ್ (Antacid) ಸೇರಿದಾಗ ಕೆಲವೊಮ್ಮೆ ಭೇದಿಯಾಗುತ್ತದೆ. ಮೆಗ್ನೇಶಿಯಂ ಅಲ್ಯೂಮಿನಿಯಂ (Magnesium alluminium) ಜೊತೆ ಸೇರಿದಾಗ ಮಲಬದ್ದತೆ ಆಗುತ್ತದೆ.

## ಸೋಡಿಯಂ ಬೈಕಾರ್ಬೋನೇಟ್
## (ಅಡಿಗೆ ಸೋಡಾ)
## Sodiumbicarbonate

ಬಿಳಿಯ ಪೌಡರ್ ರೂಪದಲ್ಲಿ ಬರುತ್ತದೆ. ಇದನ್ನು ಎಂಟಾಸಿಡ್ (Antacid) ಆಗಿ ಉಪಯೋಗಿಸುವಾಗ ಅತಿ ಕಡಿಮೆ ಪ್ರಮಾಣದಲ್ಲಿ ಉಪಯೋಗಿಸಬೇಕು. ಅಪರೂಪಕ್ಕೊಮ್ಮೆ ಆಮ್ಲೀಯತೆ, ಎದೆ ಉರಿ ಆದರೆ ಬಳಸಬೇಕೇ ಹೊರತು ಬಹಳ ಕಾಲದಿಂದ ಇರುವ ಹೊಟ್ಟೆ ಹುಣ್ಣಿಗೆ ಬಳಸಕೂಡದು. ಆರಂಭದಲ್ಲಿ ಗುಣವಾಗಿ ಕಂಡರೂ ಕ್ರಮೇಣ ಕಾಯಿಲೆಯನ್ನು ಜಾಸ್ತಿ ಮಾಡುತ್ತದೆ. ರಾತ್ರಿ ಬಹಳ ಕುಡಿದು ಮರುದಿನ ಮತ್ತಿನ ಪ್ರಭಾವದಿಂದ ಹೊರಬರಲಾರದೆ ಬಳಲುವವರಿಗೆ ಸೋಡಾ ಉಪಯುಕ್ತ. ಇದಕ್ಕಾಗಿ ಆ್ಯಸ್ಪಿರಿನ್ ಜೊತೆ ಸೋಡಾ ಸೇವಿಸಬೇಕು. ಅಲ್ಕಾ-ಸೆಲ್‌ಝರ್ (Alka-Seltzer) ಎಂಬುದು ಸೋಡಿಯಂ ಮತ್ತು ಆ್ಯಸ್ಪಿರಿನ್‌ನ ಸಂಯುಕ್ತ. ಅಪರೂಪಕ್ಕೊಮ್ಮೆ ೧/೨ ಟೀ ಚಮಚ ಸೋಡಿಯಂ ಬೈಕಾರ್ಬೋನೇಟ್‌ನ್ನು ನೀರಿನ ಜೊತೆ ತೆಗೆದುಕೊಳ್ಳಿ. **ಪದೇ ಪದೇ ಬಳಸಬೇಡಿ.**

**ಹಲ್ಲು ಸ್ವಚ್ಛ ಮಾಡಲು:** ಹಲ್ಲು ಪುಡಿ, ಪೇಸ್ಟಿನ ಬದಲಿಗೆ ಅಡಿಗೆ ಸೋಡಾವನ್ನು ಅಥವಾ ಅಡಿಗೆ ಸೋಡಾ + ಉಪ್ಪಿನ ಮಿಶ್ರಣವನ್ನು ಹಲ್ಲುಜ್ಜಲು ಬಳಸಬಹುದು.

**ಜೀವನ ಜಲ ತಯಾರಿಸಲು** ಸೋಡಿಯಂ ಬೈಕಾರ್ಬೋನೇಟ್‌ದ ಉಪಯೊಗದ ಬಗ್ಗೆ ೧೯೩ ನೇ ಪುಟ ನೋಡಿ.

**ಮುನ್ನೆಚ್ಚರಿಕೆ: ಹೃದಯರೋಗದಂಥ ಅಥವಾ ಕಾಲು-ಮುಖ ಬಾಯುವ ಸಮಸ್ಯೆಗಳು ಇರುವವರು ಸೋಡಿಯಂ ಹೆಚ್ಚಿರುವ ಯಾವುದೇ ಪದಾರ್ಥಗಳನ್ನು ಬಳಸಕೂಡದು.**

## ಕ್ಯಾಲ್ಸಿಯಮ್ ಕಾರ್ಬೋನೇಟ್
## (Calcuim carbonate)

ಜನಪ್ರಿಯ ಬ್ರಾಂಡ್:
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.

೩೫೦-೮೫೦ ಮಿ.ಗ್ರಾಂ ಮಾತ್ರೆಗಳು ಬರುತ್ತವೆ. ಇದು ಸೋಡಿಯಂ ಬೈಕಾರ್ಬೋನೇಟ್‌ಗಿಂತ ಕಡಿಮೆ ವೇಗದಲ್ಲಿ ಕೆಲಸ ಮಾಡುತ್ತದೆ. ಆಗಾಗ್ಗೆ ಆಗುವ ಆಮ್ಲದ ಅಜೀರ್ಣ, ಎದೆ ಉರಿಗಳಿಗೆ ಇದು ಒಳ್ಳೆಯ ಔಷಧ. ಆದರೆ ಇದನ್ನು ಹೊಟ್ಟೆ ಹುಣ್ಣಿನ ಚಿಕಿತ್ಸೆಗೆಂದು ಬಹುಕಾಲ ಉಪಯೋಗಿಸುತ್ತಿರಬಾರದು. ಎದೆ ಉರಿ, ಆಮ್ಲೀಯತೆ ಆದಾಗ ಒಮ್ಮೆ ೮೫೦ ಮಿ.ಗ್ರಾ. ಅಥವಾ ೩೫೦ ಮಿ.ಗ್ರಾಂ ಮಾತ್ರೆಯನ್ನು ಚೀಪಿ. ಅವಶ್ಯ ಬಿದ್ದರೆ ಇನ್ನೆರಡು ತಾಸುಗಳ ನಂತರ ಇನ್ನೊಮ್ಮೆ ಒಂದು ಗುಳಿಗೆ ಚೀಪಿ.

## ಸಿಮೆಟಿಡೀನ್
## (Cimetidine)

ಜನಪ್ರಿಯ ಬ್ರಾಂಡ್: ಟೈಮಿಡಿನ್ (Tymidin), ಉಲ್ಸಿಬಾನ್ (Ulciban).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.

೨೦೦ ಮಿ.ಗ್ರಾಂ ಮಾತ್ರೆಗಳು ಮತ್ತು ೨ ಮಿ.ಲಿಯಲ್ಲಿ ೨೦೦ ಮಿ.ಗ್ರಾಂ ಇಂಜೆಕ್ಷನ್‌ಗಳಾಗಿ ಬರುತ್ತದೆ. ಜಠರ ಮತ್ತು ಕರುಳು ಹುಣ್ಣುಗಳಿಗೆ ಇದು ಪರಿಣಾಮಕಾರಿ ಔಷಧ. ಹೆಚ್ಚುಕಾಲ ಉಪಯೋಗಿಸಿದರೆ ಜೀರ್ಣನಾಳದ ಹುಣ್ಣು ಮತ್ತೆ ಆಗದಂತೆ ತಡೆಯುವುದು. ಆದರೆ ಹೊಟ್ಟೆಯ ಹುಣ್ಣು ಮರಳಿ ಬಾರದಂತೆ ತಡೆಯಲು ಔಷಧಕ್ಕಿಂತ ಆಹಾರದಲ್ಲಿಯ ಬಽದಲಾವಣೆ ಅತಿ ಮುಖ್ಯ ಎಂದು ೧೬೨ ನೇ ಪುಟ ದಲ್ಲಿ ಹೇಳಿದೆ. ಅದನ್ನು ಅನುಸರಿಸುವುದು ಹೆಚ್ಚು ಉಪಯುಕ್ತ.

**ಮುನ್ನೆಚ್ಚರಿಕೆ:-**
**ಬಸುರಿ ಹೆಣ್ಮಕ್ಕಳು ಹಾಗು ಹಾಲೂಡುವ ತಾಯಂದಿರು ಇದನ್ನು ತೆಗೆದುಕೊಳ್ಳಬಾರದು.**

**ಅಡ್ಡ ಪರಿಣಾಮಗಳು:**
ಸ್ವಲ್ಪ ಭೇದಿ ಉಂಟಾಗಬಹುದು. ತಲೆತಿರುಗುವಿಕೆ, ಮೈಮೇಲೆ ಗಂಧೆಗಳೇಳುವುದು ಮತ್ತು ಬಹಳ ನಿದ್ದೆ ಬಂದಂತೆ ಆಗಬಹುದು.

**ಕರುಳಿನ ಹುಣ್ಣಿಗೆ:**
೪೦೦ ಮಿ.ಗ್ರಾಂ (೨೦೦ ಮಿ.ಗ್ರಾಂ ನ ಎರಡು ಮಾತ್ರೆಗಳು ದಿನಕ್ಕೆ ಎರಡು ಬಾರಿ. ಅಥವಾ ೮೦೦ ಮಿ.ಗ್ರಾಂ (೨೦೦ ಮಿ.ಗ್ರಾಂ ನ ೪ ಮಾತ್ರೆಗಳು) ರಾತ್ರಿ ಮಲಗುವ ಮೊದಲು ಆರು ತಿಂಗಳು ತೆಗೆದುಕೊಳ್ಳಬೇಕು.
ಜಠರದ ಹುಣ್ಣು ಜೋರಾಗಿರುವಾಗ:
೩೦೦ ಮಿ.ಗ್ರಾಂ (೨೦೦ ಮಿ.ಗ್ರಾಂ ನ ಒಂದೂವರೆ ಮಾತ್ರೆಗಳು) ದಿನಕ್ಕೆ ೪ ಬಾರಿ. ೪ ರಿಂದ ೮ ವಾರಗಳ ಕಾಲ ತೆಗೆದುಕೊಳ್ಳಲೇಬೇಕು.
**ಜಠರ ಮತ್ತು ಕರುಳು ಹುಣ್ಣು ಮತ್ತೆ ಬಾರದಂತೆ ತಡೆಯಲು:** ೪೦೦ ಮಿ.ಗ್ರಾ (೨೦೦ ಮಿ.ಗ್ರಾಂ ನ ೨ ಮಾತ್ರೆಗಳು). ದಿನವೂ ರಾತ್ರಿ ಮಲಗುವ ಮೊದಲು, ಒಂದು ವರ್ಷ ಕಾಲ ತೆಗೆದುಕೊಳ್ಳಲೇಬೇಕು.

## ರೆನಿಟಡೀನ್
## (Rantidine)

ಜನಪ್ರಿಯ ಬ್ರಾಂಡ್: ಹಿಸ್ಟಾಕ್ (Histac), ಉಲ್ಟಾಕ್ (Ultac).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.
೧೫೦ ಅಥವಾ ೦೦ ಮಿ.ಗ್ರಾಂ ನ ಮಾತ್ರೆಗಳು ಬರುತ್ತವೆ. ಇದೂ ಕೂಡ ಸಿಮೆಟಿಡೀನ್ (Cimetidine) ನಂತೆಯೇ. ಆದರೆ ದುಬಾರಿ. ಇದು ನೋವನ್ನು ಶಾಂತವಾಗಿಸಿ, ಹುಣ್ಣನ್ನೂ ಮಾಯುವಂತೆ ಮಾಡುತ್ತದೆ.

**ಆದರೆ ಹೊಟ್ಟೆ ಹುಣ್ಣು ತಡೆಯಲು ಆಹಾರದಲ್ಲಿ ಆಗಬೇಕಾದ ಮಾರ್ಪಾಡಿನ ಬಗ್ಗೆ ಮರೆಯಬೇಡಿ.**

**ಹುಣ್ಣು ತಡೆಯಲು ರೆನಿಟಿಡೀನ್‌ನ ಪ್ರಮಾಣ:**
ದಿನಕ್ಕೆ ಎರಡು ಬಾರಿ ೧೫೦ ಮಿ.ಗ್ರಾಂ ನ ಮಾತ್ರೆ ಅಥವಾ ರಾತ್ರಿ ಊಟದ ಜೊತೆ ಒಂದು ಬಾರಿ ೩೦೦ ಮಿ.ಗ್ರಾಂ ಮಾತ್ರೆ ೬-೮ ವಾರಗಳ ಕಾಲ.

## ನೀರ್ಗಳೆತ (ನಿರ್ಜಲೀಕರಣ)
### ಪುನರ್ಜಲೀಕರಣಕ್ಕೆ ಜೀವನಜಲ (ಓ.ಆರ್.ಎಸ್)

ಜೀವನ ಜಲ ತಯಾರಿಸುವ ವಿಧಾನವನ್ನು ೧೯೩ ನೇ ಪುಟದಲ್ಲಿ ವಿವರವಾಗಿ ಕೊಟ್ಟಿದೆ.
ಎಷ್ಟೋ ದೇಶಗಳಲ್ಲಿ ಆರೋಗ್ಯ ಇಲಾಖೆಯವರು ಜೀವನ ಜಲ ತಯಾರಿಸಲು ಬೇಕಾದ ಉಪ್ಪು ಮತ್ತು ಗ್ಲುಕೋಸ್ ಪುಡಿಗಳನ್ನು ಒಂದೊಂದು ಪಾಕೀಟಿನಲ್ಲಿ ಸರಬರಾಜು ಮಾಡುತ್ತಾರೆ. ನಿಮ್ಮಲ್ಲೂ ಆರೋಗ್ಯ ಕೇಂದ್ರಗಳಲ್ಲಿ ಇದು ಸಿಗುತ್ತಿದ್ದರೆ ಇದನ್ನು ತಂದಿಟ್ಟುಕೊಂಡು ಅವಶ್ಯ ಬಿದ್ದಾಗ ಮಾಡುವುದು ಅನುಕೂಲಕರವಾದರೆ ಮಾಡಿ, ಇದರ ಬದಲಿಗೆ ಮನೆಯಲ್ಲೇ ಉಪ್ಪು ಸಕ್ಕರೆಯ ಪಾನಕ ಮಾಡಿ ಕುಡಿಸುವುದು, ಜೊತೆಗೆ ಧಾನ್ಯಗಳ ಪುಡಿಯನ್ನು ಕೊಡುವುದು ಭೇದಿಯನ್ನು ತಡೆಯಲಿಕ್ಕೂ ಸಹಕಾರಿಯಾಗುತ್ತದೆ. ಮನೆಯಲ್ಲೇ ಜೀವನ ಜಲ ತಯಾರಿಸುವುದು ಮನೆಮಮಂದಿಗೆಲ್ಲ ತಿಳಿದಿರುವುದು ಅತಿ ಅವಶ್ಯವಿದೆ. ಅದು ಸ್ವಾವಲಂಬನೆಯ ಹಾದಿಯೂ ಹೌದು, ಹಣ ಉಳಿತಾಯದ ಹಾದಿಯೂ ಹೌದು.

**ಮಗುವಿಗೆ ನೀರ್ಗಳೆತ ಆಗಿರುವಾಗ ಮೊಲೆಹಾಲು ಕೊಡುವುದನ್ನು ಮುಂದುವರೆಸುವುದು ಅತಿ ಅವಶ್ಯ.** ಮತ್ತು ಆದಷ್ಟು ಬೇಗನೆ ನಿತ್ಯದ ಆಹಾರವನ್ನು ಪುನರಾರಂಭಿಸುವುದೂ ಕೂಡ ಅಷ್ಟೇ ಅವಶ್ಯವಿದೆ. ಜೀವನ ಜಲದೊಂದಿಗೆ ಆಹಾರವನ್ನು ಕೊಡಲು ಶುರುಮಾಡಿದರೆ ರೋಗವನ್ನು ಹೊಡೆದೋಡಿಸಲು ದೇಹ ಬೇಗನೆ ಸಜ್ಜಾಗುತ್ತದೆ. ಮಗು ಇನ್ನಷ್ಟು ಬಲಹೀನವಾಗದಂತೆ ರಕ್ಷಿಸುತ್ತದೆ.
ಇನ್ನು ಕೆಲವು ಕಡೆ ಓ.ಆರ್.ಎಸ್ (ORS) ಪಾಕೀಟುಗಳೇ ಲಭ್ಯವಿದೆ. ಆದರೆ ಇವು ಒಂದೊಂದೂ ಒಂದೊಂದು ರೀತಿಯ ಸಂಯುಕ್ತಗಳಾಗಿದ್ದು ಒಂದೊಂದಕ್ಕೂ ಜೀವನ ಜಲ ತಯಾರಿಸಲು ಬೇರೆ ಬೇರೆ ಪ್ರಮಾಣದ ನೀರು ಬೇಕು. ನಿಮಗೆ ಓಆರೆಸ್ (ORS) ಪಾಕೀಟು ಸಿಕ್ಕರೆ, ಅದಕ್ಕೆ ಎಷ್ಟು ನೀರು ಬೆರೆಸಬೇಕು ನೋಡಿಕೊಂಡಿರಿ. ಕಡಿಮೆ ನೀರು ಹಾಕಿದರೆ ಅಪಾಯವಾಗಬಹುದು.
ನಿರ್ಗಳೆತ ಆದ ಮಗುವನ್ನು ಆಸ್ಪತ್ರೆ ಅಥವಾ ಅರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಹೊರಟರೆಂದರೆ ಅದಕ್ಕೆ ಸಾಕಷ್ಟು ನೀರು ಕುಡಿಸಿ, ಕುಡಿಸುತ್ತಲೇ ಇರಿ.

ಮನೆಯಲ್ಲೇ ತಯಾರಿಸಿದ ಶರಬತ್ತು, ಗಂಜಿಗಳನ್ನೂ ಕೊಡಿ. ಹೋಗುವಾಗಲೂ ಜೀವನಜಲವನ್ನು, ಅದು ಸಾಧ್ಯವಾಗದಿದ್ದರೆ ನೀರನ್ನಾದರೂ ಒಯ್ಯಿರಿ. ಮಗು ವಾಂತಿ ಮಾಡಿಕೊಳ್ಳುತ್ತಿದ್ದರೆ ಪದೇ ಪದೇ ಸ್ವಲ್ಪ ಸ್ವಲ್ಪವೇ ಕೊಡುತ್ತಿರಿ. ವಾಂತಿ ಮಾಡಿದರೂ ಕೂಡಾ, ಕುಡಿಸಿದ್ದು ಪೂರ್ತಿ ನಷ್ಟವಾಗದೆ ಸ್ವಲ್ಪ ಪ್ರಮಾಣವು ದೇಹದಲ್ಲಿ ಉಳಿಯುತ್ತದೆ.

## ಮಲಬದ್ದತೆ (ಗಟ್ಟಿಯಾದ ಮಲ)
## ಸುಖವಿರೇಚಕಗಳು

೧ನೇ ಅಧ್ಯಾಯದಲ್ಲಿ ಬೇರೆ ಬೇರೆ ರೀತಿಯ ರೇಚಕ, ಸುಖವಿರೇಚಕಗಳನ್ನು ಉಪಯೋಗ ಕುರಿತು ಚರ್ಚಿಸಿದೆ. ಇವುಗಳ ಬಳಕೆ ಇಂದು ಬಹಳವಾಗಿಬಿಟ್ಟಿದೆ. ಕಡಿಮೆಯಾಗಬೇಕು. ಭೇದಿ, ಹೊಟ್ಟೆನೋವು, ನೀರ್ಗಳೆತ ಆದವರಿಗೆಂದೂ ರೇಚಕಗಳನ್ನು ಕೊಡಬೇಡಿ.

ಮಲವನ್ನು ಮೃದು ಮಾಡುವ ಅತ್ಯುತ್ತಮ ಸಾಧನವೆಂದರೆ ನಾರಿನಂತೆ ಇರುವ ಮರಗೆಣಸಿನಂಥ ಆಹಾರವಸ್ತುಗಳು. ಬಹಳಷ್ಟು ಹಣ್ಣು ನೀರು ಉಪಯೋಗದಿಂದ ಕೂಡ ಒಳ್ಳೆಯ ಪರಿಣಾಮವಿದೆ.

### ಮಿಲ್ಕ್ ಆಫ್ ಮೆಗ್ನೀಶಿಯಾ
### (Milk of Magnesia),
### ಮೆಗ್ನೇಶಿಯಂ ಹೈಡ್ರಾಕ್ಸೈಡ್,
### Magnesium hydroxide)

ಜನಪ್ರಿಯ ಬ್ರಾಂಡ್: ಫಿಲಿಪ್ಸ್ ಮೊಮ್ (Philips.Mom),
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.
ಮೃದು ರೇಚಕ ಮತ್ತು ಆಮ್ಲರೋಧಕ
ಹಾಲಿನಂಥ ದ್ರಾವಣ ರೂಪದಲ್ಲಿ ಬರುತ್ತದೆ.

**ಪ್ರಮಾಣ:**
ಆಮ್ಲರೋಧಕವಾಗಿ:೧೨ ವರ್ಷಕ್ಕೆ ಮೇಲ್ಪಟ್ಟವರು– ೧/೨ ಟೀ ಚಮಚ ದಿನಕ್ಕೆ ೩–೪ ಬಾರಿ.
ಮೃದು ರೇಚಕವಾಗಿ: ಮಲಗುವ ಮೊದಲು ೧ ಬಾರಿ
೮–೧೨ ವರ್ಷದ ಮಕ್ಕಳಿಗೆ: ೧–೨ ಚಮಚ
೨–೭ ವರ್ಷದ ಮಕ್ಕಳಿಗೆ–೧/೨ – ೧ ಚಮಚ
**೨ ವರ್ಷದೊಳಗಿನ ಮಕ್ಕಳಿಗೆ ಕೊಡಬೇಡಿ.**

### ಎಪ್ಸಂ ಉಪ್ಪು
### (Epsom salt)
### (Magnesium hydroxide)

ಜನಪ್ರಿಯ ಬ್ರಾಂಡ್: ಅಲ್ಯುಡ್ರೋಕ್ಸ (Aludrox).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.
ಮೃದು ರೇಚಕ ಮತ್ತು ಉರಿಕೆರೆತಕ್ಕಾಗಿ.
ಬಿಳಿಯ ಪುಡಿ ಅಥವಾ ಹರಳುಗಳ ರೂಪದಲ್ಲಿ.
**ಪ್ರಮಾಣ:**
ಮೃದು ರೇಚಕವಾಗಿ,
ಎಪ್ಸಂ ಉಪ್ಪನ್ನು ಕೆಳಗೆ ಹೇಳಿದ ಪ್ರಮಾಣದಲ್ಲಿ ನೀರಲ್ಲಿ ಬೆರೆಸಿ ಕೊಡಿ.
ದೊಡ್ಡವರಿಗೆ– ೧–೨ ಚಮಚ
೧೨ ವರ್ಷದ ಮಕ್ಕಳಿಗೆ– ೧/೨ – ೧ ಚಮಚ
೨–೬ ವರ್ಷದ ಮಕ್ಕಳಿಗೆ ೧/೪ – ೧/೨ ಚಮಚ
**೨ ವರ್ಷದೊಳಗಿನ ಮಕ್ಕಳಿಗೆ ಕೊಡಬೇಡಿ.**
ಕೆರತ ಕಡಿಮೆ ಮಾಡಲು, ೮ ಚಮಚ ಎಪ್ಸಂ ಉಪ್ಪನ್ನು ೧ ಲೀಟರ್ ನೀರಿಗೆ ಹಾಕಿ ಕಲಕಿ. ಈ ದ್ರಾವಣದಲ್ಲಿ ಬಟ್ಟೆ ಅದ್ದಿ ಕೆರೆಯುತ್ತಿರುವ ಜಾಗದಲ್ಲಿ ಇಡಿ.

### ಇಸಪಘಗೋಲ್
### (Ispaghula)

ಮಲಬದ್ಧತೆಗೆ ಒಳೆಯದು.
ಜನಪ್ರಿಯ ಬ್ರಾಂಡ್: ಐಗೋಲ್ (Igol), ನೇಚರ್ ಕೇರ್ (Nature care).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.
ನೀರಿನಲ್ಲಿ ಒಂದು ಚಮಚದಷ್ಟನ್ನು ಆಹಾರದ ಜೊತೆ ತೆಗೆದುಕೊಳ್ಳಿ.

### ಲಿಕ್ವಿಡ್ ಪ್ಯಾರಾಫಿನ್
### (Liquid paraffin)

ಜನಪ್ರಿಯ ಬ್ರಾಂಡ್: ಡ್ಯೂಲಾಕ್ಸಿನ್ (Duolaxin).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.
ಮೂಲವ್ಯಾಧಿ ಇದ್ದವರಿಗೆ ಮಲವು ತುಂಬ ಗಟ್ಟಿಯಾಯಿತೆಂದರೆ ಇದನ್ನು ತೆಗೆದುಕೊಳ್ಳಬಹುದು. ಆದರೆ ಇದು ಮಲವನ್ನು ಮೃದುಗೊಳಿಸುವುದಿಲ್ಲ,

ಬದಲಿಗೆ ಅದು ಸುಲಭವಾಗಿ ಉರುಳುವಂತೆ ಮಾಡುತ್ತದಷ್ಟೇ. ಇದಕ್ಕಿಂತ ನಾರಿನಂಶವಿರುವ ಆಹಾರ, ಬಾಳೆಯ ಹಣ್ಣುಗಳೇ ಒಳ್ಳೆಯ ಔಷಧಗಳು.

**ಪ್ರಮಾಣ:**

೧೨ ವರ್ಷಕ್ಕೆ ಮೇಲ್ಪಟ್ಟವರು ೧–೩ ಟೀ ಚಮಚದಷ್ಟನ್ನು ಊಟದ ೧ ತಾಸು ನಂತರ ತೆಗೆದುಕೊಳ್ಳಬೇಕು. ಊಟದ ಜೊತೆ ತೆಗೆದುಕೊಂಡರೆ ಆಹಾರದಲ್ಲಿನ ವಿಟಮಿನ್‌ಗಳನ್ನೇ ಅದು ಹೀರಿಕೊಂಡು ಬಿಡುವುದರಿಂದ ಊಟದೊಂದಿಗೆ ತೆಗೆದುಕೊಳ್ಳಬೇಡಿ.

**ಮುನ್ನೆಚ್ಚರಿಕೆ: ೧೨ ವರ್ಷಕ್ಕಿಂತ ಸಣ್ಣವರಿಗೆ ಕೊಡಬೇಡಿ.** ಗರ್ಭಿಣಿಯರು, ಹಾಲೂಡುವ ತಾಯಂದಿರು ಹಾಸಿಗೆಯಿಂದ ಏಳಲು ಅಸಮರ್ಥರು ಮತ್ತು ನುಂಗಲು ಕಷ್ಟವಿರುವವರು ತೆಗೆದುಕೊಳ್ಳ ಬಾರದು.

## ಗ್ಲಿಸರೀನ್ ರೇಚಕಗಳು (Glycerine)

ಜನಪ್ರಿಯ ಬ್ರಾಂಡ್:

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.

ಇವು ಕ್ಯಾಪ್ಸೂಲ್‌ನ ಆಕಾರದಲಿರುವ, ಗುದದ್ವಾರದ ಒಳಗಡೆ ತೂರಿಸುವ ಮಾತ್ರೆಗಳು. ಇವು ಮಲವನ್ನು ಹೊರಹಾಕಲು ಆತುರಪಡಿಸುತ್ತವೆ.

**ಪ್ರಮಾಣ:**

೧೨ ವರ್ಷಕ್ಕೆ ಮೇಲ್ಪಟ್ಟವರು; ಒಂದು ಮಾತ್ರೆಯನ್ನು ಗುದದೊಳಗೆ ಹೋಗುವಂತೆ ತೂರಿಸಿ. ೧೫–೨೦ ನಿಮಿಷಗಳವರೆಗೆ ಅದು ಅಲ್ಲಿಯೇ ಇರಲಿ. ಮಲಗಿಕೊಂಡಿದ್ದರೆ ಒಳ್ಳೆಯದು. ಅದನ್ನು ಹೆಚ್ಚು ಹೊತ್ತು ಒಳಗಿಟ್ಟುಕೊಂಡಿದ್ದಷ್ಟು ಅದು ಹೆಚ್ಚು ಚೆನ್ನಾಗಿ ಕೆಲಸ ಮಾಡುತ್ತದೆ.

## ಸಾಧಾರಣ ಭೇದಿ
## ಭೇದಿ ನಿವಾರಕ ಔಷಧಗಳು

### ಪೆಕ್ಟಿನ್ ಜೊತೆ ಕೋಲಿನ್

ನೀರಿನಂತೆ ಹೋಗುತ್ತಿರುವ ಮಲವು ಸ್ವಲ್ಪ ಗಟ್ಟಿಯಾಗಿ ಕಡಿಮೆ ಕಷ್ಟದಾಯಕವಾಗಿ ಹೋಗುವಂತೆ ಮಾಡುತ್ತದೆ. ಆದರೆ ಇದು ಭೇದಿಗೆ ಚಿಕಿತ್ಸೆ ಅಲ್ಲವೇ ಅಲ್ಲ ಅಥವಾ ನೀರ್ಗಳೆತವನ್ನು ತಡೆಯುವುದರಲ್ಲಾಗಲೀ ಗುಣ ಮಾಡುವುದರಲ್ಲಾಗಲೀ ಸಹಕಾರಿಯೂ ಅಲ್ಲ. ಭೇದಿಯ ಚಿಕಿತ್ಸೆಗೆ ಇದರ ಅವಶ್ಯಕತೆ ಇಲ್ಲ. ಹಣದ ಖರ್ಚಿನ ಹೊರತಾಗಿ ಇನ್ನೇನೂ ಆಗುವುದಿಲ್ಲ.

ಇದನ್ನು ಸಣ್ಣ ಮಕ್ಕಳಿಗೆ ಕೊಡಬಾರದು. **ಈ ಔಷಧದ ಬಗ್ಗೆ ಇರುವ ತಪ್ಪು ಕಲ್ಪನೆ ಹೋಗಲಾಡಿಸಲಿಕ್ಕಾಗಿ ಮಾತ್ರವೇ ನಾವಿದನ್ನು ಇಲ್ಲಿ ಬರೆಯುತ್ತಿದ್ದೇವೆ.**

## ಮೂಗು ಕಟ್ಟಿದ್ದಕ್ಕೆ

ಕಟ್ಟಿದ ಮೂಗನ್ನು ಸಡಿಲಗೊಳಿಸಲು ಉತ್ತಮ ದಾರಿಯೆಂದರೆ ನೀರಲ್ಲಿ ಸ್ವಲ್ಪ ಉಪ್ಪು ಹಾಕಿ ಕುದಿಸಿಕೊಂಡು ಅದರ ಹಬೆಯನ್ನು ಮೂಗಿನಲ್ಲಿ ಸೇದುವುದು. ಮೂಗಿನೊಳಗೆ ಹಾಕುವ ಹನಿಗಳು ಸ್ವಲ್ಪ ಸಹಾಯ ಮಾಡಬಹುದು.

## ಎಫಿಡ್ರಿನ್ ಅಥವಾ ಫಿನೈಲ್‌ಎಫ್ರಿನ್ ಅಥವಾ ಮೂಗಿನ ಹನಿ (Ephedrine, Phenylephrine)

ಜನಪ್ರಿಯ ಬ್ರಾಂಡ್: ನಾಝಾಲೀನ್ (Nazalin), ಸಲ್ಫಿಡ್ರಿನ್ (Sulfidrin).

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.

ರೋಗಿಗೆ ಕಿವಿಯ ಸೋಂಕು ಕೂಡ ತಗುಲಿದ್ದರೆ ಕಟ್ಟಿದ ಮೂಗು ಮತ್ತು ಹರಿಯುವ ಮೂಗು ಎರಡಕ್ಕೂ ಇದನ್ನು ಉಪಯೋಗಿಸಬಹುದು.

**ಪ್ರಮಾಣ:**

೨೧೩ ನೇ ಪುಟದಲ್ಲಿ ಹೇಳಿದಂತೆ ಒಂದೊಂದು ಹೊಳ್ಳೆಯಲ್ಲೂ ಎರಡು ಹನಿ ದಿನಕ್ಕೆ ४ ಬಾರಿ ಹಾಕಿ. ಬಹಳ ದಿನಗಳ ಕಾಲ ಉಪಯೋಗಿಸಿದರೆ ಚಟ ಹತ್ತಿಕೊಳ್ಳಬಹುದು.

ಎಫಿಡ್ರಿನ್ ಮಾತ್ರೆಗಳಿಂದ ಮಾಡಿದ ಮೂಗಿನ ಹನಿಗಳ ಬಗ್ಗೆ ಹಿಂದೆ ವಿವರಿಸಿದೆ.

## ಕೆಮ್ಮಿಗೆ

ಕೆಮ್ಮು ಶ್ವಾಸನಾಳದಲ್ಲಿರುವ ಸಿಂಬಳ, ರೋಗಾಣುಗಳನ್ನು ಸ್ವಚ್ಛ ಮಾಡಿ ಗಾಳಿಗೆ ದಾರಿಯನ್ನು ಮಾಡಿಕೊಡುವ ದೇಹದ ಒಂದು ನೈಸರ್ಗಿಕ ಕ್ರಿಯೆ.

ಇದು ದೇಹದ ರಕ್ಷಣಾ ಕ್ರಮಗಳಲ್ಲೊಂದಾಗಿರುವುದರಿಂದ ಕೆಮ್ಮನ್ನು ಶಮನ ಮಾಡಲು ಮತ್ತು ಮಾಡುವ ಪ್ರಯತ್ನಗಳಿಂದ ಹಾನಿಯೇ ಜಾಸ್ತಿ. ಆದರಿಂದ ಕಿರಿಕಿರಿಯೇ ಜಾಸ್ತಿ ಆಗಿರುವಾಗ ಮಾತ್ರ, ಕೆಮ್ಮು ಶಮನ ಕಾರಗಳನ್ನು ಉಪಯೋಗಿಸಿ.

ಇನ್ನು ಕೆಲವು ಕೆಮ್ಮು ಸಹಾಯಕ ಔಷಧಗಳಿವೆ. ಇವು ಗಟ್ಟಿಯಾಗಿರುವ ಕಫವನ್ನು ನೀರು ಮಾಡಿ ಕೆಮ್ಮಲು ಸಹಾಯ ಮಾಡುತ್ತವೆ. ಕೆಮ್ಮು ಶಮನಕಾರಕಗಳನ್ನು ಉಪಯೋಗಿಸುವುದಕ್ಕಿಂತ ಇವುಗಳನ್ನು ಉಪಯೋಗಿಸುವುದೇ ಉತ್ತಮ.

ಆದರೆ ಇವು ಕೆಮ್ಮಿನ ರಸಗಳೆಂದು ತಪ್ಪು ಕಲ್ಪನೆಯಿಂದ ಅವಶ್ಯಕತೆಗಿಂತ ಜಾಸ್ತಿ ಬಳಕೆಯಾಗುತ್ತಿದೆ. ಇವುಗಳಲ್ಲಿ ಹೆಚ್ಚಿನವುಗಳು ಏನೇನೂ ಪ್ರಯೋಜನವಿಲ್ಲ. ಹಣ ಹಾಳಷ್ಟೇ. ಅತ್ಯುತ್ತಮ ಕೆಮ್ಮಿನ ರಸವೆಂದರೆ ನೀರು. ನೀರನ್ನು ಬಹಳ ಕುಡಿಯುವುದರಿಂದ ಮತ್ತು ಕುದಿಸಿದ ನೀರಿನ ಹಬೆ ಸೇದುವುದರಿಂದ ಕಫ ಸಡಿಲವಾಗುತ್ತದೆ.

## ಕೆಮ್ಮು- ಶಮನ ಕಾರಕಗಳು:

### ಕೋಡೀನ್
### (Codeine)

ಜನಪ್ರಿಯ ಬ್ರಾಂಡ್: ಕೋಡಿನ್ ಲಿಂಕ್ಟಸ್ (Codin linctus).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.

ಹೆಚ್ಚಾಗಿ ದ್ರವ ರೂಪದಲ್ಲಿ (ಸಿರಪ್ ಗಳಾಗಿ) ಹಾಗು ಕೆಲವೊಮ್ಮೆ ಎಂಟಿಹಿಸ್ಟಮಿನ್ ಮಿಶ್ರಿತ ಕೋಡೀನ್ ಮಾತ್ರೆಗಳೂ ಸಿಗುತ್ತವೆ.

ಕೋಡೀನ್ ಬಲು ತೀಕ್ಷ್ಣವಾದ ನೋವು ನಿವಾರಕವೂ ಹೌದು. ಕೆಮ್ಮು ಶಮನಕಾರಿಯೂ ಹೌದು. ಆದರೆ **ಇದನ್ನು ಜಾಸ್ತಿ ಉಪಯೋಗಿಸುವವರು ಚಟಕ್ಕೆ ಬೀಳುತ್ತಾರೆ.** ಔಷಧದ ಜೊತೆಗೆ ಇರುವ ಸಲಹೆ ಮತ್ತು ಪ್ರಮಾಣಗಳನ್ನು ಗಮನಿಸಿ ಅದರಂತೆಯೇ ತೆಗೆದುಕೊಳ್ಳಿ. ಕೆಮ್ಮು ಶಮನ ಮಾಡಲು ಇರುವ ಕೋಡೀನ್ ಪ್ರಮಾಣವು ನೋವು ನಿವಾರಣೆಗಾಗಿ ಇರುವ ಕೋಡೀನ್ ಪ್ರಮಾಣಕ್ಕಿಂತಲೂ ಕಡಿಮೆ.

ದೊಡ್ಡವರಿಗೆ: ೭-೧೫ ಮಿ.ಗ್ರಾಂ ಕೋಡೀನ್ ಸಾಕಾಗುತ್ತದೆ. ಚಿಕ್ಕವರಿಗೆ ಇದಕ್ಕಿಂತ ಕಡಿಮೆ. ವಯಸ್ಸಿಗೆ ತಕ್ಕಂತೆ ಕೊಡಿ.

**ಅಸ್ತಮಾ**

ಅಸ್ತಮಾವನ್ನು ತಡೆಯಲು ಮತ್ತು ನಿರ್ವಹಣೆ ಮಾಡಲು ಕ್ರಮಗಳನ್ನು ೨೧೫ ನೇ ಪುಟದಲ್ಲಿಯೇ ಹೇಳಿದೆ. ಅಸ್ತಮಾ ಇರುವವರು ಮನೆಯಲ್ಲಿ, ಅಸ್ತಮಾ ಔಷಧಗಳನ್ನು ಯಾವಾಗಲೂ ಇಟ್ಟಿರಬೇಕು. ಉಸಿರಾಟದ ತೊಂದರೆ ಆರಂಭವಾಗುತ್ತಲೇ ಔಷಧವನ್ನು ಆರಂಭಿಸಿ.

### ಎಫೆಡ್ರಿನ್
### (Ephedrine)

ಜನಪ್ರಿಯ ಬ್ರಾಂಡ್:
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.

ಮಾತ್ರೆಗಳಾಗಿ ಬರುತ್ತದೆ.

ಸಾಧಾರಣವಾದ ಅಸ್ತಮಾವನ್ನು ಹಿಡಿತಕ್ಕೆ ತರಲು ಇದು ಉಪಯುಕ್ತ. ಶ್ವಾಸಕೋಶಕ್ಕೆ ಹೋಗುವ ನಾಳಗಳನ್ನು ತೆರೆದು ಗಾಳಿಗೆ ಹೋಗಲು ಇದು ಸಹಾಯ ಮಾಡುತ್ತದೆ.

ನ್ಯುಮೋನಿಯಾ, ಬ್ರಾಂಕೈಟಿಸ್‌ಗಳಿಂದ ಉಸಿರಾಟ ಕಷ್ಟವಾಗಿರುವಾಗಲೂ ಇದನ್ನು ಉಪಯೋಗಿಸಬಹುದು.

ಥಿಯೋಫೈಲಿನ್ (Theophylline) ಅಥವಾ ಎಮಿನೋಫೈಲಿನ್ (Aminophylline) ಮತ್ತೆ ಕೆಲವೊಮ್ಮೆ ಫಿನೋಬಾರ್ಬಿಟಾಲ್ (Phenobarbitone) ಗಳ ಮಿಶ್ರಣವಾಗಿ ಎಫಿಡ್ರಿನ್ ಬರುತ್ತದೆ. ಈ ಮಿಶ್ರ ಸಂಯುಕ್ತದ ಜನಪ್ರಿಯ ಬ್ರಾಂಡ್ *ಟೆಡ್ರಾಲ್.* ಆದರೆ ಇದು ಬಲು ದುಬಾರಿ.

**ಪ್ರಮಾಣ:**

ಅಸ್ತಮಾಕ್ಕೆ ಎಫಿಡ್ರಿನ್

೧೫ ಮಿ.ಗ್ರಾಂ ಮಾತ್ರೆಗಳನ್ನು ಉಪಯೋಗಿಸಿ,

**ಪ್ರತಿ ಡೋಸ್ ನಲ್ಲಿ**

ದೊಡ್ಡವರಿಗೆ ೧೫.೬೦ ಮಿ.ಗ್ರಾಂ (೧-೪ ಮಾತ್ರೆ)

೫–೧೦ ವರ್ಷದ ಮಕ್ಕಳಿಗೆ–೧೨–೩೦ ಮಿ.ಗ್ರಾಂ (೧–೨ ಮಾತ್ರೆ)
೧–೪ ವರ್ಷದ ಮಕ್ಕಳಿಗೆ–೧೫ ಮಿ.ಗ್ರಾಂ (೧ ಮಾತ್ರೆ)
**೧ ವರ್ಷದೊಳಗಿನ ಶಿಶುಗಳಿಗೆ ಕೊಡಬೇಡಿ.**
ಮೂಗು ಕಟ್ಟಿದ್ದರೆ ನೇಸಲ್ ಡ್ರಾಪ್‌ಗಳ ಜೊತೆ ಎಫಿಡ್ರಿನ್ ಉಪಯೋಗಿಸಬಹುದು. ೧ ಮಾತ್ರೆಯನ್ನು ೧ ಚಮಚ ನೀರಲ್ಲಿ ಕಲಕಿ ಉಪಯೋಗಿಸಬಹುದು.

## ಥಿಯೋಫೈಲಿನ್ ಅಥವಾ ಅಮಿನೋಫೈಲಿನ್ (Theophylline, Aminophylline)

ಜನಪ್ರಿಯ ಬ್ರಾಂಡ್:
ಬ್ರೊಂಕೊರ್ಡಿಲ್ (Broncordil),
ಥಿಯೊಬಿಡ್ (Theobid 200/300).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.
ಮಾತ್ರೆ ಮತ್ತು ಬೇರೆ ಬೇರೆ ಪ್ರಮಾಣದ ಸಿರಪ್ ಹಾಗು ಇಂಜೆಕ್ಷನ್‌ಗಳಾಗಿ ಬರುತ್ತದೆ.
ಅಸ್ತಮಾ ಜಾಸ್ತಿ ಆಗಿರುವಾಗ ಮತ್ತು ಜಾಸ್ತಿ ಆಗದಂತೆ ತಡೆಯಲು,
**ಪ್ರಮಾಣ (ಡೋಸ್):**
೩–೫ ಮಿ.ಗ್ರಾಂ/ಕೆಜಿಗೆ/ಪ್ರತಿ ೬ ತಾಸಿಗೆ
೧೦೦ ಮಿ.ಗ್ರಾಂ ಮಾತ್ರೆ ಉಪಯೋಗಿಸಿ.
ದೊಡ್ಡವರಿಗೆ–೬ ತಾಸಿಗೊಮ್ಮೆ ೨ ಮಾತ್ರೆ
೭–೧೨ ವರ್ಷದ ಮಕ್ಕಳಿಗೆ– ೬ ತಾಸಿಗೊಮ್ಮೆ ೧ ಮಾತ್ರೆ
೭ ವರ್ಷಕ್ಕಿಂತ ಕಡಿಮೆ–೬ ತಾಸಿಗೊಮ್ಮೆ ೧/ ೨ ಮಾತ್ರೆ
**ಶಿಶುಗಳಿಗೆ ಕೊಡಬೇಡಿ.**
ಅಸ್ತಮಾ ಬಹಳ ತೀವ್ರವಾಗಿದ್ದರೆ ಅಥವಾ ಈ ಪ್ರಮಾಣದ ಔಷಧದಿಂದ ಅಸ್ತಮಾ ನಿಯಂತ್ರಣಕ್ಕೆ ಬರಲಿಲ್ಲವೆಂದರೆ ಇದರ ಎರಡರಷ್ಟನ್ನು ಕೊಡಬಹುದು. ಆದರೆ ಅದಕ್ಕೂ ಜಾಸ್ತಿ ಕೊಡಬಾರದು. ರೋಗಿ ಮಾತಾಡಲಿಕ್ಕೂ ಆಗುತ್ತಿಲ್ಲವೆಂದರೆ ವೈದ್ಯಕೀಯ ಸಹಾಯ ಪಡೆಯಿರಿ.

## ಸಾಲ್ಬುಟಮಾಲ್ (Salbutamol)

ಜನಪ್ರಿಯ ಬ್ರಾಂಡ್: ಅಸ್ಥಾಲೀನ್ (Asthalin), ಸಾಲ್‌ಬೆಟೋಲ್ (Salbetol).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.
೪ ಮಿ.ಗ್ರಾಂ ಮತ್ತು ೫ ಮಿ.ಲಿ. ಯಲ್ಲಿ ೨ ಮಿ.ಗ್ರಾಂ ಮಾತ್ರೆ ಸಿರಪ್ ಆಗಿ ಬರುತ್ತದೆ.
ಅಸ್ತಮಾವನ್ನು ನಿಯಂತ್ರಿಸಲು ಮತ್ತು ಬರದಂತೆ ತಡೆಯಲು ಸಾಲ್ಬುಟಮಾಲ್‌ನ್ನು ಮಾತ್ರವೇ ಉಪಯೋಗಿಸಬೇಕು. ಅಥವಾ ಥಿಯೋಫೈಲಿನ್ ಜೊತೆಗೆ ಸೇರಿಸಿಕೊಡಬಹುದು.
**ಸಾಲ್ಬುಟಮಾಲ್ ಇನ್ಹೇಲ್‌ರ್ (Salbutamol inhaler)** ಕೂಡ ಲಭ್ಯ. ಇದನ್ನು ಮೂಗಿನ ಮುಂದೆ ಹಿಡಿದುಕೊಂಡು ಜೋರಾಗಿ ಉಸಿರು ಎಳೆದು ಕೊಂಡಾಗ, ಔಷಧಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ. ಇದು ಸುರಕ್ಷಿತ ಕೂಡಾ.
**ಸಾಲ್ಬುಟಮಾಲ್‌ನ ಪ್ರಮಾಣ:**
ಪ್ರತಿ ೬–೮ ತಾಸಿಗೆ/ಕೆಜಿ ಗೆ/೦.೧ ಮಿ.ಗ್ರಾ.
೪ಮಿ.ಗ್ರಾಂ ಮಾತ್ರೆ ಉಪಯೋಗಿಸಿ,
ಪ್ರತಿ ೬–೮ ತಾಸಿಗೆ
ದೊಡ್ಡವರಿಗೆ– ೧ ಮಾತ್ರೆ ಅಥವಾ ೨ ಚಮಚ
೬–೧೨ ವರ್ಷದ ಮಕ್ಕಳಿಗೆ– ೧/೨ ಮಾತ್ರೆ ಅಥವಾ ೧/೨ – ೧ ಚಮಚ
೨–೫ ವರ್ಷದ ಮಕ್ಕಳಿಗೆ– ೧/೪ ಮಾತ್ರೆ ಅಥವಾ ೧/೨ –೧ ಚಮಚ .
**ಶಿಶುಗಳಿಗೆ ಕೊಡಬೇಡಿ.**
ಅಸ್ತಮಾ ನಿಯಂತ್ರಣಕ್ಕೆ ಬರಲಿಲ್ಲವೆಂದರೆ ಅಥವಾ ಬಹಳ ತೀವ್ರವಿದ್ದರೆ ಇದಕ್ಕಿಂತ ಜಾಸ್ತಿ ಕೊಡಬಹುದು. ಆದರೆ ಎರಡು ಪಟ್ಟಿಗಿಂತ ಹೆಚ್ಚು ಕೊಡಬಾರದು.

## ಎಪಿನೆಫ್ರಿನ್ (ಅಡ್ರೆನಾಲಿನ್) Epinephrine (Adrenaline)

ಜನಪ್ರಿಯ ಬ್ರಾಂಡ್:
ಇಂಜೆಕ್ಷನ್ ಅಡ್ರೆನಾಲಿನ್ (Injection Adrenaline)
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.
ಒಂದು ಮಿ.ಲಿ.ಯಲ್ಲಿ ೧ ಮಿ.ಗ್ರಾಂ ನ ಔಷಧ ಆ್ಯಂಪೂಲ್ (ಚಿಕ್ಕ ಬಾಟ್ಲಿ) ಗಳಲ್ಲಿ ಬರುತ್ತದೆ.

ಇದನ್ನು,
೧. ತೀವ್ರ ಅಸ್ತಮಾಕ್ಕೆ: ಉಸಿರಾಡಲಿಕ್ಕೂ ತೊಂದರೆ ಯಾದಾಗ,
೨. ತೀವ್ರ ಅಲರ್ಜಿ ಪ್ರತಿಕ್ರಿಯೆಗೆ: ಪೆನಿಸಿಲಿನ್, ಎಂಟಿಟಾಕ್ಸಿನ್, ಟಿಟೆಗಳಿಗೆ ಅಲರ್ಜಿಯಿಂದ ಅಘಾತವಾದರೆ ಇದರ ಇಂಜೆಕ್ಷನ್ ಕೊಡಬೇಕು.

**ಅಸ್ತಮಾಕ್ಕೆ ಪ್ರಮಾಣ:**
ಮೊದಲು ನಾಡಿಯನ್ನು ನೋಡಿ ನಂತರ ಇಂಜೆಕ್ಷನ್ ಕೊಡಿ.
ದೊಡ್ಡವರಿಗೆ–೧/೩ ಮಿ.ಲಿ
೭–೧೨ ವರ್ಷದ ಮಕ್ಕಳಿಗೆ–೧/೫ ಮಿ.ಲಿ.
೧–೬ ವರ್ಷದ ಮಕ್ಕ ಳಿಗೆ–೧/೧೦ ಮಿ.ಲಿ.

**೧ ವರ್ಷದ ಕೆಳಗಿನ ಶಿಶುಗಳಿಗೆ ಕೊಡಬೇಡಿ**

**ಅಲರ್ಜಿ ಅಘಾತಕ್ಕೆ ಅಡ್ರೆನಾಲಿನ್:**
ಮಾಂಸ ಖಂಡಕ್ಕೆ ಇಂಜೆಕ್ಷನ್ ಕೊಡಿ.
ದೊಡ್ಡವರಿಗೆ– ೧/೨ ಮಿ.ಲಿ.
೭–೧೨ ವರ್ಷದವರಿಗೆ– ೧/೩ ಮಿ.ಲಿ.
೧ ರಿಂದ ೬ ವರ್ಷದ ಮಕ್ಕಳಿಗೆ– ೧/೪ ಮಿ.ಲಿ.
೧ ವರ್ಷದೊಳಗಿನ ಶಿಶುಗಳಿಗೆ ಕೊಡಬೇಡಿ.
ಅವಶ್ಯ ಬಿತ್ತೆಂದರೆ ಅರ್ಧ ತಾಸಿನ ನಂತರ ಇನ್ನೊಂದು ಡೋಸ್ ಇಂಜೆಕ್ಷನ್ ಕೊಡಬಹುದು. ೨ ಕ್ಕಿಂತ ಜಾಸ್ತಿ ಡೋಸ್ ಇಂಜೆಕ್ಷನ್ ಕೊಡಬಾರದು. ಮೊದಲ ಇಂಜೆಕ್ಷನ್ ನಂತರ ನಾಡಿಯು ನಿಮಿಷಕ್ಕೆ ೩೦ ಕ್ಕಿಂತ ಜಾಸ್ತಿ ಆಯಿತೆಂದರೆ ಮತ್ತೊಮ್ಮೆ ಕೊಡಬೇಡಿ.
ಅಡ್ರೆನಾಲಿನ್ನು ಎಂದೂ ಹೇಳಿದ್ದ ಪ್ರಮಾಣಕ್ಕಿಂತ ಜಾಸ್ತಿ ಕೊಡಲೇಬಾರದು.

## ಅಲರ್ಜಿಯು ಪ್ರತಿಕ್ರಿಯೆಗಳು ಮತ್ತು ವಾಂತಿಗೆ ಎಂಟಿಹಿಸ್ಟಮೀನ್‌ಗಳು

ಎಂಟಿಹಿಸ್ಟಮೀನ್‌ಗಳು ದೇಹದ ಮೇಲೆ ಅನೇಕ ರೀತಿಯಲ್ಲಿ ಪರಿಣಾಮ ಬೀರುತ್ತವೆ.

೧. ಅಲರ್ಜಿಯ ಶಮನ ಅಥವಾ ಅಲರ್ಜಿಯನ್ನು ತಡೆಯುವುದು. ಗಂಧೆ, ಗಂಟು, ಗುಳ್ಳೆಗಳೇಳುವುದನ್ನು, ಅಲರ್ಜಿಯು ಅಘಾತವನ್ನು ತಡೆಯುವುದು.
೨. ಬೆಳಗಿನ ಹೊತ್ತು ಅಥವಾ ಪ್ರಯಾಣದಲ್ಲಿ ವಾಂತಿ ತಡೆಯಲು ಸಹಾಯಕ.
೩. ಮಂಪರು ಬರುತ್ತದೆ. ಕಾರಣ **ಎಂಟಿಹಿಸ್ಟಮೀನ್ ಸೇವಿಸಿ ಮಶಿನ್‌ಗಳ ಹತ್ತಿರ ಕೆಲಸ ಮಾಡಬೇಡಿ, ಮರಹತ್ತಬೇಡಿ ಹಾಗು ವಾಹನ ನಡೆಸಬೇಡಿ.**

## ಪ್ರೊಮೆಥಾಜಿನ್ ಮತ್ತು ಡೈಫೇಹೈಡ್ರಮಿನ್ Promethazine, Diphehydramine

ಜನಪ್ರಿಯ ಬ್ರಾಂಡ್: ಎವೊಮಿನ್ (Avomine,
ಪ್ರೊಮೆಥಾಜಿನ್ (Promethazine),
ಮಾನಾಡ್ರೈಲ್ (Manadryl).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.

ಇವು ಶಕ್ತಿಯುತ ಎಂಟಿಹಿಸ್ಟಮಿನ್‌ಗಳಿದ್ದು ನಿದ್ದೆ ಬರುವಂತೆ ಮಾಡುತ್ತವೆ. ಡೈಮೆನ್‌ಹೈಡ್ರನೇಟ್ (Dimenhydrinate) ಇದು ಡೈಫೆನ್‌ಹೈಡ್ರಮಿನ್ (Diphenhydramine) ನಂತೆಯೇ ಇದ್ದು ಪ್ರಯಾಣದಲ್ಲಿ ವಾಂತಿಗೆ ಉಪಯುಕ್ತ. ಆದರೆ ಬೇರೆ ಕಾರಣಕ್ಕಾಗಿ ವಾಂತಿ ಆಗುತ್ತಿದ್ದರೆ ತಡೆಯಲು ಪ್ರೊಮಿಥಾಜಿನ್ (Promethazine) ಹೆಚ್ಚು ಉಪಯುಕ್ತ.

## ಕ್ಲೋರ್‌ಫಿನರಮಿನ್ (Chlorpheniramine)

ಜನಪ್ರಿಯ ಬ್ರಾಂಡ್:
ಪೋಲಾರಮೀನ್ (Polaramine),
ಡಾನಾ–ಸಿ.ಪಿ.ಎಮ್ (Dana-CPM).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.
ಕಡಿಮೆ ಬೆಲೆಯದಿದ್ದು, ಇದರಿಂದ ನಿದ್ದೆಯೂ ಕಡಿಮೆ ಬರುತ್ತದೆ. ಕಾರಣ ಹಗಲು ಹೊತ್ತಿನಲ್ಲಿ ಮೈಕೈ ತುರಿಕೆಯ ಅಲರ್ಜಿಗೆ ಇದೇ ಹೆಚ್ಚು ಪ್ರಯೋಜನಕಾರಿ. ರಾತ್ರಿ ಹೊತ್ತು ಪ್ರೊಮೆಥಾಜಿನ್

(Promethazine) ಹೆಚ್ಚು ಉಪಯುಕ್ತ. ಏಕೆಂದರೆ ತುರಿಕೆ ಕಡಿಮೆ ಮಾಡುವುದಲ್ಲದೇ ನಿದ್ದೆ ಬರುವಂತೆಯೂ ಮಾಡುತ್ತದೆ. ಸಾಮಾನ್ಯ ನೆಗಡಿಯನ್ನು ತಡೆಯುವಲ್ಲಿ ಎಂಟಿಹಿಸ್ಟಮಿನ್‌ಗಳು ಎಷ್ಟು ಪ್ರಯೋಜನಕಾರಿ ಎಂದು ಇನ್ನೂ ಅಭ್ಯಸಿಸಬೇಕು. ಅವಶ್ಯ ಇರುವುದಕ್ಕಿಂತ ಜಾಸ್ತಿಯಾಗಿ ಇದರ ದುರ್ಬಳಕೆ ಆಗುತ್ತಿದೆ. ಅತಿಯಾದ ಬಳಕೆ ಸಲ್ಲದು.
ಅಸ್ತಮಾ ಇರುವಾಗ ಎಂಟಿಹಿಸ್ಟಮಿನ್ ಬಳಸಬಾರದು. ಏಕೆಂದರೆ ಇದು ಕಫವನ್ನು ಇನ್ನೂ ಗಟ್ಟಿ ಮಾಡುತ್ತದೆ. ಉಸಿರಾಟ ಇನ್ನೂ ಕಷ್ಟವಾಗುತ್ತದೆ.
ಔಷಧ ಪೆಟ್ಟಿಗೆಯಲ್ಲಿ ಪ್ರೊಮೆಥಾಜಿನ್ (Promethazine) ಒಂದು ಇದ್ದರೆ ಸಾಕು. ಆದರೆ ಅದು ಸಿಗುವುದು ಸ್ವಲ್ಪ ಕಷ್ಟವಾದ್ದರಿಂದ ಬೇರೆ ಎಂಟಿಹಿಸ್ಟಮಿನ್‌ಗಳನ್ನೂ ಕೊಟ್ಟಿದೆ.
ಎಂಟಿಹಿಸ್ಟಮಿನ್‌ಗಳನ್ನು ಬಾಯಿಯಿಂದ ತೆಗೆದುಕೊಳ್ಳುವುದೇ ಉತ್ತಮ. ಅತಿಯಾದ ವಾಂತಿಯಾಗುತ್ತಿದ್ದರೆ ಮತ್ತು ಎಂಟಿಟಾಕ್ಸಿನ್ (Antitoxin) ಚುಚ್ಚುವ ಮೊದಲು ಇಂಜೆಕ್ಷನ್ ಮೂಲಕ ಕೊಡಬೇಕಷ್ಟೇ. ಏಕೆಂದರೆ ಆಗ ಅಲರ್ಜಿಯ ಅಘಾತ ಆಗುವ ಸಾಧ್ಯತೆ ಹೆಚ್ಚು.

## ಪ್ರೊಮೆಥಾಜಿನ್
## (Promethazine)

ಜನಪ್ರಿಯ ಬ್ರಾಂಡ್: ಪ್ರೋಮೇಟ್ (Promet).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.
೧೨.೫ ಮಿ.ಗ್ರಾಂ. ಮಾತ್ರೆಗಳು ಮತ್ತು ೧ ಮಿ.ಲಿ.ಯಲ್ಲಿ ೨೫ಮಿ.ಗ್ರಾಂ ಆ್ಯಂಪೂಲ್ ಇಂಜೆಕ್ಷನ್ ಗಳು ಬರುತ್ತವೆ.
**ಎಚ್ಚರಿಕೆ: ಗರ್ಭಿಣಿ ಸ್ತ್ರೀಯರು ಪ್ರೊಮಿಥಾಜಿನ್‌ನ್ನು ಅತೀ ಅವಶ್ಯವಿದ್ದಾಗ ಮಾತ್ರ ಉಪಯೋಗಿಸಬೇಕು.**

**ಪ್ರೊಮೆಥಾಜಿನ್‌ನ ಪ್ರಮಾಣ:**
ದಿನಕ್ಕೆ/ ಕೆ.ಜಿ.ಗೆ/೧ ಮಿ.ಗ್ರಾಂ
೧೨.೫ ಮಿ.ಗ್ರಾಂ ಮಾತ್ರೆಯನ್ನುಪಯೋಗಿಸಿ, ದಿನಕ್ಕೆ ಎರಡು ಬಾರಿ ಕೊಡಿ.
ದೊಡ್ಡವರು– ೨೫–೫೦ ಮಿ.ಗ್ರಾಂ (೨–೪ ಮಾತ್ರೆ)
೭–೧೨ ವರ್ಷದ ಮಕ್ಕಳಿಗೆ– ೧೨.೫–೨೫ ಮಿ.ಗ್ರಾಂ (೧–೨ ಮಾತ್ರೆ)
೨–೭ ವರ್ಷದ ಮಕ್ಕಳಿಗೆ–೬–೧೨ ಮಿ.ಗ್ರಾಂ (೧/೨–೧ ಮಾತ್ರೆ)
೧ ವರ್ಷದವರಿಗೆ–೪ ಮಿ.ಗ್ರಾಂ (೧/ ೩ ಮಾತ್ರೆ)
೧ ವರ್ಷದೊಳಗಿನ ಮಗುವಿಗೆ– ೩ ಮಿ.ಗ್ರಾಂ (೧/ ೪ ಮಾತ್ರೆ)
ಮಾಂಸಖಂಡದೊಳಗೆ ಕೊಡುವ ಇಂಜೆಕ್ಷನ್‌ಗಳು
ಒಮ್ಮೆ ಇಂಜೆಕ್ಷನ್ ಕೊಡಿ. ಅವಶ್ಯವಿದ್ದರೆ ಮಾತ್ರ ಮತ್ತೆ ೨–೪ ತಾಸುಗಳ ನಂತರ ಇನ್ನೊಮ್ಮೆ ಕೊಡಿ.
**೧ ಡೋಸ್ ನಲ್ಲಿ,**
ದೊಡ್ಡವರಿಗೆ; ೨೫–೫೦ ಮಿ.ಗ್ರಾಂ (೧–೨ ಮಿ.ಲಿ)
೭ – ೧೨ ವರ್ಷದ ಮಕ್ಕಳಿಗೆ; ೧೨.೫–೨೫ ಮಿ.ಗ್ರಾಂ (೧/೨ ಮಿ.ಲಿ.)
೭ ವರ್ಷದ ಒಳಗಿನ ಮಕ್ಕಳಿಗೆ; ೬–೧೨ ಮಿ.ಲಿ. (೧/೪–೧/೨ ಮಿ.ಲಿ.)
೧ ವರ್ಷದೊಳಗಿನ ಮಗುವಿಗೆ– ೨.೫ ಮಿ.ಗ್ರಾಂ (೦.೧ ಮಿ.ಲಿ.)

## ಡೈಫಿನ್‌ಹೈಡ್ರಮಿನ್
## (Diphenhydramine)

ಜನಪ್ರಿಯ ಬ್ರಾಂಡ್: ಮಾನಾಡ್ರ್ಯಲ್ (Manadryl)
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.
ಸಾಧಾರಣವಾಗಿ ೧೨.೫ ಮಿ.ಗ್ರಾಂ ಕ್ಯಾಪ್ಸೂಲ್‌ಗಳು ಅಥವಾ ೧ ಮಿ.ಲಿ. ಯಲ್ಲಿ ೧೦–೫೦ ಮಿ.ಗ್ರಾಂ ನ ಆ್ಯಂಪ್ಯೂಲ್‌ಗಳಾಗಿ ಬರುತ್ತವೆ.
**ಗರ್ಭಿಣಿಯರು ಅತಿ ಅವಶ್ಯ ಇಲ್ಲದೆ ಬಳಸಬಾರದು. ಹಾಲೂಡುವ ತಾಯಂದಿರು ಮತ್ತು ನವಜಾತ ಶಿಶುಗಳಿಗೆ ಕೊಡಬೇಡಿ.**
ಪ್ರಮಾಣ: ದಿನಕ್ಕೆ/ ಕೆಜಿಗೆ/೫ ಮಿ.ಗ್ರಾಂ

ದಿನಕ್ಕೆ ೩–೪ ಬಾರಿ ಕೊಡಿ.
ದೊಡ್ಡವರಿಗೆ–೨೫–೫೦ ಮಿ.ಗ್ರಾಂ (೧–೨ ಕ್ಯಾಪ್ಸೂಲ್)
೮–೧೨ ವರ್ಷದ ಮಕ್ಕಳಿಗೆ – ೨೫ ಮಿ.ಗ್ರಾಂ (೧ ಕ್ಯಾಪ್ಸೂಲ್).

೨-೭ ವರ್ಷದ ಮಕ್ಕಳು:- ೧೨.೫ ಮಿ.ಗ್ರಾಂ (೧/೨ ಕ್ಯಾಪ್ಸೂಲ್).
೧ ವರ್ಷದ ಮಗು- ೬ ಮಿ.ಗ್ರಾಂ (೧/೪ ಕ್ಯಾಪ್ಸೂಲ್).

ಮಾಂಸಖಂಡಗಳಿಗೆ ಕೊಡುವ ಇಂಜೆಕ್ಷನ್: ೧ ಮಿ.ಲಿ. ಯಲ್ಲಿ ೫೦ ಮಿ.ಗ್ರಾಂ

ಡೈಫೆನ್‌ಹೈಡ್ರಮಿನ್‌ನ್ನು ಕೇವಲ ಅಲರ್ಜಿಯ ಅಘಾತಕ್ಕಾಗಿ ಮಾತ್ರ ಕೊಡಬೇಕು. ಒಮ್ಮೆ ಇಂಜೆಕ್ಷನ್ ಕೊಡಿ. ಅತಿ ಅವಶ್ಯ ಬಿದ್ದರೆ ಮಾತ್ರ ೨-೪ ತಾಸುಗಳ ನಂತರ ಇನ್ನೊಮ್ಮೆ ಕೊಡಿ.
ದೊಡ್ಡವರಿಗೆ: ೨೫-೫೦ ಮಿ.ಗ್ರಾಂ (೧/೨-೧ ಮಿ.ಲಿ.)
೧೦-೨೫ ವರ್ಷದ ಮಕ್ಕಳು: ಅವರ ತೂಕಕ್ಕೆ ಅನುಗುಣವಾಗಿ ೧/ ೫ ಮಿ.ಲಿ.-೧/೨ ಮಿ.ಲಿ.)

## ಕ್ಲೋರ್‌ಫಿನರಮಿನ್ (Chlorphenrimine)

ಪೋಲಾರಮೀನ್ (Polaramine).
ನಿಮ್ಮ ಪ್ರದೇಶದಲ್ಲಿಯ ಬ್ರ್ಯಾಂಡ್ ಹೆಸರು______ಪ್ರಮಾಣ_____ಬೆಲೆ_______.
೪ ಮಿ.ಗ್ರಾಂನ ಮಾತ್ರೆಗಳು (ಬೇರೆ ಬೇರೆ ಪ್ರಮಾಣದಲ್ಲಿ ಮಾತ್ರೆಗಳು, ಮತ್ತು ದ್ರಾವಣದ ರೂಪದಲ್ಲಿ ಬರುತ್ತದೆ.
**ಪ್ರಮಾಣ:** ದಿನಕ್ಕೆ ೩-೪ ಬಾರಿ ಒಂದು ಡೋಸ್ ಕೊಡಿ.
ಒಂದು ಡೋಸ್ ನಲ್ಲಿ,
ದೊಡ್ಡವರಿಗೆ-೪ ಮಿ.ಗ್ರಾಂ (೧ ಮಾತ್ರೆ)
೧೨ ವರ್ಷದೊಳಗಿನ ಮಕ್ಕಳು - ೨ ಮಿ.ಗ್ರಾಂ (೧/೨ ಮಾತ್ರೆ).
೧ ವರ್ಷದೊಳಗಿನ ಮಕ್ಕಳು: ೧ ಮಿ.ಗ್ರಾಂ (೧/೪ ಮಾತ್ರೆ).

## ಡೈಮೆನ್‌ಹೈಡ್ರಿನೇಟ್ (Dimenhydrinate)

ಡ್ರೈಮೇನೇಟ್ (Draminate),
ಗ್ರಾವೋಲ್ (Gravol).

ನಿಮ್ಮ ಪ್ರದೇಶದಲ್ಲಿಯ ಬ್ರ್ಯಾಂಡ್ ಹೆಸರು______ಪ್ರಮಾಣ_____ಬೆಲೆ_______.
೫೦ ಮಿ.ಗ್ರಾಂ ಮಾತ್ರೆಗಳು ಮತ್ತು ಒಂದು ಚಾಚಮಚದಲ್ಲಿ ೧೨.೫ ಮಿ.ಗ್ರಾಂನ ದ್ರಾವಣವಾಗಿಯೂ ಬರುತ್ತದೆ. ಪ್ರಯಾಣದಲ್ಲಿ ವಾಂತಿಯನ್ನು ತಡೆಯಲು ಔಷಧವಾಗಿ ಇದು ಮಾರಾಟವಾಗುತ್ತದೆ. ಆದರೆ ಅಲರ್ಜಿಯ ಪ್ರತಿಕ್ರಿಯೆ ಶಮನಕ್ಕೆ ಮತ್ತು ನಿದ್ದೆ ಬರಿಸಲು ಕೂಡ ಇದನ್ನು ಬಳಸಬಹುದು.
ದಿನಕ್ಕೆ ೪ ಬಾರಿ ತೆಗೆದುಕೊಳ್ಳಬಹುದು.
**ಒಂದು ಡೋಸ್‌ನಲ್ಲಿ,**
ದೊಡ್ಡವರಿಗೆ; ೫೦-೧೦೦ ಮಿಗ್ರಾಂ (೧-೨ ಮಾತ್ರೆಗಳು)
೭-೧೨ ವರ್ಷದವರಿಗೆ; ೨೫-೫೦ ವಿ.ಗ್ರಾಂ (೧/೨-೧ ಮಾತ್ರೆ)
೨-೬ವರ್ಷದ ಮಕ್ಕಳಿಗೆ:೧೨-೨೫ ಮಿ.ಗ್ರಾಂ (೧/೪ ೧/೨ ಮಾತ್ರೆ)
೨ ವರ್ಷದೊಳಗಿನವರಿಗೆ:೬-೧೨ ಮಿ.ಗ್ರಾಂ (೧/೮-೧/೪ ಮಾತ್ರೆ)

## ಎಂಟಿಟಾಕ್ಸಿನ್ (Antitoxin) ಗಳು

ಎಚ್ಚರಿಕೆ: ಕುದುರೆಯ ರಕ್ತಸಾರದಿಂದ (ರಕ್ತದಲ್ಲಿರುವ ನೀರಿನಂಥ ತೆಳುವಾದ ರಸ) ತಯಾರಿಸಿದ ಎಲ್ಲಾ ಪ್ರತಿವಿಷ, ಹಾವಿನ ಪ್ರತಿವಿಷ, ಚೇಳಿನ ಪ್ರತಿವಿಷಗಳೆಲ್ಲವೂ ಅಲರ್ಜಿಯ ಅಘಾತವನ್ನುಂಟುಮಾಡುತ್ತವೆ. ಅಲರ್ಜಿ ಪ್ರತಿಕ್ರಿಯೆಯ ಸಾಧ್ಯತೆ ಯಾವಾಗಲೂ ಇದ್ದೇ ಇದೆ. ಜೊತೆಯಲ್ಲಿ ಎಪಿನೆಫ್ರಿನ್‌ನ್ನು ಇಟ್ಟುಕೊಂಡೇ ಈ ಔಷಧವನ್ನು ಉಪಯೋಗಿಸಿ. ಅಲರ್ಜಿ ಇರುವ ಮನುಷ್ಯರಿಗೆ, ಅಥವಾ ಕುದುರೆಯ ರಕ್ತಸಾರದ ಪ್ರತಿವಿಷವನ್ನು ಈಗಾಗಲೇ ತೆಗೆದುಕೊಂಡಿದ್ದವರಿಗೆ ೧೫ ನಿಮಿಷ ಮೊದಲು ಪ್ರೊಮೆಥಾಜಿನ್ ಇಂಜೆಕ್ಷನ್ ಕೊಟ್ಟು ನಂತರ ಈ ಪ್ರತಿವಿಷವನ್ನು ಕೊಡುವುದು ಒಳ್ಳೆಯದು.

### ಚೇಳಿನ ಕಡಿತಕ್ಕೆ ಪ್ರತಿವಿಷ

ಜಗತ್ತಿನ ವಿವಿಧ ಕಡೆಗಳಲ್ಲಿ ಬೇರೆ ಬೇರೆ ರೀತಿಯ ಪ್ರತಿವಿಷಗಳನ್ನು ತಯಾರಿಸುತ್ತಾರೆ. ಇದು ಹೆಚ್ಚಾಗಿ ಪುಡಿಯ ರೂಪದಲ್ಲಿ ಬರುತ್ತದೆ.

ಇದನ್ನು ತೀವ್ರ ವಿಷಯುಕ್ತ ಚೇಳು ಇರುವ ಪ್ರದೇಶದಲ್ಲಷ್ಟೇ ಬಳಸಬೇಕು. ಪ್ರತಿವಿಷವನ್ನು ಮಕ್ಕಳಿಗೆ ತಲೆ ಮತ್ತು ದೇಹದ ಮುಖ್ಯಭಾಗದಲ್ಲಿ ಚೇಳು ಕಚ್ಚಿದಾಗ ಉಪಯೋಗಿಸಬೇಕು. ಚೇಳು ಕಚ್ಚಿದ ತಕ್ಷಣ ಪ್ರತಿವಿಷವನ್ನು ಚುಚ್ಚಿದರೆ ಅತ್ಯುತ್ತಮ.

ಪ್ರತಿವಿಷದ ಔಷಧದೊಂದಿಗೆ ಅದನ್ನು ಉಪಯೋಗಿಸಬೇಕಾದ ಸಲಹೆ ಸೂಚನೆಗಳು ಬರೆದಿರುತ್ತವೆ. ಅವನ್ನು ಚಾಚೂ ತಪ್ಪದೇ ಅನುಸರಿಸಿ. ಮಗು ಚಿಕ್ಕದಿದ್ದಷ್ಟೂ ಅದಕ್ಕೆ ಹೆಚ್ಚು ಪ್ರತಿವಿಷ ಬೇಕಾಗುತ್ತದೆ. **ಸಾಮಾನ್ಯವಾಗಿ ದೊಡ್ಡವರಿಗೆ ಚೇಳು ಅಷ್ಟು ಅಪಾಯಕಾರಿ ಅಲ್ಲ. ಬದಲಿಗೆ ಪ್ರತಿವಿಷಗಳೇ ಹೆಚ್ಚು ಅಪಾಯಕಾರಿ ಇರಬಹುದು. ಕಾರಣ ಅವನ್ನು ಆದಷ್ಟು ಕಡಿಮೆ ಉಪಯೋಗಿಸುವುದು ಒಳ್ಳೆಯದು.**

## ಹಾವಿನ ವಿಷಕ್ಕೆ ಪ್ರತಿವಿಷ ಸ್ನೇಕ್ ಬೈಟ್ ಎಂಟಿವೆನೊಂ ಅಥವಾ ಎಂಟಿಸೆರಂ (Snakebite antivenom or antiserum)

ಇಂಜೆಕ್ಷನ್ ಸೀಸೆ ಅಥವಾ ಡಬ್ಬದಲ್ಲಿ ಬರುತ್ತದೆ.

**ವಿಷದ ಹಾವು ಕಚ್ಚಿದಾಗ ಆ ವಿಷದಿಂದ ಮನುಷ್ಯನನ್ನು ರಕ್ಷಿಸಬಲ್ಲ ಒಂದೇ ದಾರಿ ಎಂದರೆ ಹಾವಿನ ವಿಷದ ಪ್ರತಿವಿಷವನ್ನು ಕೊಡುವುದು. ಇದಲ್ಲದೆ ಇನ್ನಾವ ರೀತಿಯಿಂದಲೂ ಅವರನ್ನು ಬದುಕಿಸಲು ಸಾಧ್ಯವಿಲ್ಲ.** ಎಷ್ಟು ಬೇಗ ಈ ಚಿಕಿತ್ಸೆ ಮಾಡಿದಿರೋ ಅಷ್ಟು ಒಳ್ಳೆಯದು. ಕಚ್ಚಿರುವ ಜಾಗವನ್ನು ಅಲುಗಾಡದಂತೆ ಕಟ್ಟಿಡುವುದು ಅತಿ ಮುಖ್ಯ. ಆ ಜಾಗಕ್ಕೂ ಸ್ವಲ್ಪ ಪ್ರತಿ ವಿಷವನ್ನು ಕೊಡಿ.

ಪ್ರತಿವಿಷವನ್ನು ಜಗತ್ತಿನ ಎಲ್ಲಾ ಭಾಗಗಳಲ್ಲೂ ಉತ್ಪಾದಿಸುತ್ತಾರೆ. ನಿಮ್ಮ ಪ್ರದೇಶದಲ್ಲಿ ಹಾವು ಕಚ್ಚಿ ಯಾರಾದರೂ ಸತ್ತ ಉದಾಹರಣೆಗಳಿವೆಯೇ ಮೊದಲು ವಿಚಾರಿಸಿಟ್ಟುಕೊಳ್ಳಿ. ಮೊದಲೇ ಪ್ರತಿವಿಷವನ್ನು ತರಿಸಿಟ್ಟುಕೊಳ್ಳಿ.

ಈ ಪ್ರತಿವಿಷಗಳು ಸಿಗುವ ವಿಳಾಸ,
The Haffkine Institute,
Acharya Donde Marg,
Parel, Mumbai 400 016.

ಔಷಧದೊಂದಿಗೆ ಅದನ್ನು ಉಪಯೋಗಿಸುವ ರೀತಿಯನ್ನೂ ಬರೆದಿರುತ್ತಾರೆ. ಉಪಯೋಗಿಸುವ ಮೊದಲು ಅದನ್ನು ಚೆನ್ನಾಗಿ ಓದಿಕೊಳ್ಳಿ. ಹಾವು ದೊಡ್ಡದಿದ್ದಷ್ಟೂ, ಪ್ರತಿವಿಷ ಜಾಸ್ತಿ ಬೇಕು. ೨ ಕ್ಕಿಂತ ಹೆಚ್ಚು ಸೀಸೆಗಳು ಒಮ್ಮೆ ಬೇಕಾಗಬಹುದು. ಹಾವು ಕಚ್ಚಿದ ನಂತರ ಬೇಗ ಚುಚ್ಚಿದಷ್ಟೂ ಅದರ ಪರಿಣಾಮ ಹೆಚ್ಚಾಗಿರುತ್ತದೆ.

ಅಲರ್ಜಿಯ ಅಘಾತಗಳನ್ನು ತಡೆಯಲು ಬೇಕಾದ ಮುನ್ನೆಚ್ಚರಿಕೆಯ ಕ್ರಮಗಳನ್ನು ತಯಾರಿಟ್ಟುಕೊಂಡಿರಿ.

## ಧನುರ್ವಾಯುವಿನ ಎಂಟಿಟಾಕ್ಸಿನ್ (Antitoxin for Tetanus)

ಎರಡು ರೀತಿಯ ಎಂಟಿಟಾಕ್ಸಿನ್‌ಗಳು ಬರುತ್ತವೆ.

೧. ಗಾಯವಾಗಿದ್ದು, ಧನುರ್ವಾಯು ಆಗಬಹುದೆಂಬ ಸಾಧ್ಯತೆ ಇದ್ದರೆ ಟಿಟನಸ್ ಇಮ್ಯುನ್‌ಗ್ಲೊಬ್ಯುಲಿನ್ (ಇದು ಮನುಷ್ಯರ ರಕ್ತಸಾರದಿಂದ ಮಾಡಿದ್ದು) ೨೫೦ ಯುನಿಟ್‌ನ ಇಂಜೆಕ್ಷನ್ ಸೀಸೆಗಳಲ್ಲಿ ಬರುತ್ತದೆ.

೨. ಧನುರ್ವಾಯುವಿನ ವಿಷವನ್ನು ನಿಷ್ಕ್ರಿಯಗೊಳಿಸಲು ಕೊಡುವ ಟಿಟನಸ್ ಎಂಟಿ ಟಾಕ್ಸಿನ್ (ಇದು ಕುದುರೆಯ ರಕ್ತಸಾರದಿಂದ ಮಾಡಿದ್ದು). ೧೫೦೦, ೨೦ ಸಾವಿರ, ೪೦ ಸಾವಿರ, ೫೦ ಸಾವಿರ ಯುನಿಟ್‌ಗಳಲ್ಲಿ ಬರುತ್ತದೆ.

ಧನುರ್ವಾಯು ಪ್ರತಿರೋಧಕ ಚುಚ್ಚುಮದ್ದುಗಳು ಪ್ರಚಲಿತವಿಲ್ಲದ ಪ್ರದೇಶದಲ್ಲಿ ಔಷಧ ಪೆಟ್ಟಿಗೆಗಳಲ್ಲಿ ಇದು ಇರಲೇಬೇಕು. ಸಾಧ್ಯವಿರುವೆಡೆಯೆಲ್ಲ ಟಿಟನಸ್ ಇಮ್ಯುನ್ ಗ್ಲೊಬ್ಯುಲಿನ್ (ಮನುಷ್ಯರ ರಕ್ತ ರಸದಿಂದ ಮಾಡಿದ್ದು)ನ್ನೇ ಬಳಸಿ. ಅದಕ್ಕೆ ಅಲರ್ಜಿ ಪ್ರತಿಕ್ರಿಯೆಗಳು ಸ್ವಲ ಕಡಿಮೆ. ಧನುರ್ವಾಯು ಇನ್ನೂ ಶುರುವಾಗುವುದಕ್ಕೂ ಮೊದಲೇ ಟಿಟನಸ್ ಎಂಟಿ ಟಾಕ್ಸಿನ್ ಕೊಡುವುದು ಹೆಚ್ಚು ಪರಿಣಾಮಕಾರಿ. ಅಸ್ತಮಾ ಅಥವಾ ಇನ್ನಾವುದೇ ಅಲರ್ಜಿ ಇರುವವರಿಗೆ,

ಹಿಂದೆ ಕುದುರೆ ರಕ್ತಸಾರದ ಪ್ರತಿವಿಷ ತೆಗೆದುಕೊಂಡಿರುವವರಿಗೆ ಕುದುರೆ ರಕ್ತಸಾರದ ಪ್ರತಿವಿಷವನ್ನು ಬಳಸುವುದಾದಲ್ಲಿ ಇಂಜೆಕ್ಷನ್ ಚುಚ್ಚುವ ೧೫ ನಿಮಿಷಗಳ ಮೊದಲು ಎಂಟಿ ಹಿಸ್ಟಮಿನ್ ಇಂಜೆಕ್ಷನ್ ಕೊಡುವುದು ಒಳ್ಳೆಯದು.

ಚುಚ್ಚು ಮದ್ದು ಮಾಡಿಸಿಕೊಂಡಿರದ ವ್ಯಕ್ತಿಗೆ ಬಲವಾದ ಗಾಯವಾಗಿದ್ದರೆ ಧನುರ್ವಾಯು ಆಗುವ ಸೂಚನೆಗಳು ಕಾಣುವ ಮೊದಲೇ ಇದನ್ನು ಚುಚ್ಚಿಬಿಡಿ. ೨೫೦ ಯುನಿಟ್‌ನ ಟಿಟನಸ್ ಇಮ್ಯುನ್‌ಗ್ಲೊಬ್ಯುನ್‌ನ ಇಂಜೆಕ್ಷನ್ ಕೊಡಿ. ಟಿಟನಸ್ ಎಂಟಿ ಟಾಕ್ಸಿನ್‌ನ್ನು ಉಪಯೋಗಿಸುವುದಾದರೆ ೧೫೦೦ – ೩೦೦೦ ಯುನಿಟ್ ಗಳ ಪ್ರತಿವಿಷವನ್ನು ಕೊಡಿ.

ಧನುರ್ವಾಯುವಿನ ಲಕ್ಷಣಗಳು ಕಾಣಲಾರಂಭಿಸಿದುವೆಂದರೆ ೫೦೦೦ ಯುನಿಟ್‌ನ ಟಿಟನಸ್ ಇಮ್ಯುನ್‌ಗ್ಲೊಬ್ಯುಲಿನ್ ಅಥವಾ ೫೦,೦೦೦ ದ ಟಿಟನಸ್ ಎಂಟಿಟಾಕ್ಸಿನ್ ಇಂಜೆಕ್ಷನ್ ಕೊಡಿ. ದೇಹದ ದೊಡ್ಡ ಸ್ನಾಯುಗಳ ಬೇರೆ ಬೇರೆ ಭಾಗಗಳಲ್ಲಿ ಅನೇಕ ಇಂಜೆಕ್ಷನ್‌ಗಳನ್ನು ಕೊಡಿ.

ಎಂಟಿಟಾಕ್ಸಿನ್ ಕೊಟ್ಟ ನಂತರವೂ ಧನುರ್ವಾಯುವಿನ ಲಕ್ಷಣಗಳು ಮುಂದುವರೆಯುತ್ತವೆ. ೨೩೬ನೇ ಪುಟದಲ್ಲಿ ಹೇಳಿದಂತೆ ಇತರ ಕ್ರಮಗಳನ್ನೂ ಕೈಗೊಳ್ಳುವುದು ಅತಿ ಮುಖ್ಯ. ತಕ್ಷಣ ಚಿಕಿತ್ಸೆ ಆರಂಭಿಸಿ, ವೈದ್ಯಕೀಯ ಸಹಾಯ ಪಡೆಯಿರಿ.

## ಮೂರ್ಛೆ ರೋಗಕ್ಕೆ

**ಫಿನೋಬಾರ್ಬಿಟಾಲ್ (Phenobarbitone) ಮತ್ತು ಫೆನ್ಯೊಟಾಯಿನ್ (Phenytoin)**

ಮೂರ್ಛೆರೋಗದಲ್ಲಿ ಎಚ್ಚರದಪ್ಪುವುದನ್ನು ತಡೆಯಲು ಬಳಸುವ ಔಷಧಗಳಾಗಿವೆ. ಇದಕ್ಕೂ ದುಬಾರಿಯ ಔಷಧಗಳೂ ಲಭ್ಯವಿವೆ. ಡಾಕ್ಟರರು ಸಾಮಾನ್ಯವಾಗಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ಔಷಧಗಳನ್ನು ಬರೆಯುತ್ತಾರೆ. ಆದರೆ ಒಂದೇ ಔಷಧವು ಕೂಡ ಅಷ್ಟೇ ಅಥವಾ ಅದಕ್ಕಿಂತ ಚೆನ್ನಾಗಿ ಕೆಲಸ ಮಾಡಬಲ್ಲದು.

ಅಡ್ಡ ಪರಿಣಾಮಗಳೂ ಕಡಿಮೆ. ರಾತ್ರಿ ಮಲಗುವ ಮೊದಲು ತೆಗೆದುಕೊಂಡರೆ ನಿದ್ದೆಹೋಗುವುದರಿಂದ ಮೂರ್ಛೆ ಬೀಳುವುದನ್ನು ತಡೆಯಲು ಬಹಳ ಪರಿಣಾಮಕಾರಿ. ಬಹಳ ಕಾಲ ಮೂರ್ಛೆ ಬಿದ್ದಿರಬಾರದೆಂದರೆ ಡೈಜೆಪಾಂ ಒಳ್ಳೆಯ ಔಷಧ. ಆದರೆ ಇದನ್ನು ಹಗಲು ಹೊತ್ತು ತೆಗೆದುಕೊಳ್ಳಬಾರದು.

### ಫಿನೋಬಾರ್ಬಿಟೋನ್
### (Phenobarbitone)

ಜನಪ್ರಿಯ ಬ್ರಾಂಡ್: ಎಪಿನಿಲ್ (Epinil), ಎಪಿಟಾನ್ (Epitan).

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್

ಹೆಸರು______ಪ್ರಮಾಣ_____ಬೆಲೆ_______.

೧೫, ೩೦, ೫೦, ೧೦೦ ಮಿಗ್ರಾಂ. ಮಾತ್ರೆಗಳಲ್ಲಿ

೬೫, ೧೩೦ ಮಿ. ಗ್ರಾಂ ಅಥವಾ ೧ ಮಿ.ಲಿಯಲ್ಲಿ ೨೦೦ ಮಿ.ಗ್ರಾಂ ಆ್ಯಂಪೂಲ್‌ಗಳಾಗಿ,

ಮೂರ್ಛೆ ಬೀಳುವುದನ್ನು ಹಾಗು ಧನುರ್ವಾಯುವಿನ ಸೆಡೆತಗಳನ್ನು ತಡೆಯಲು ಫಿನೋಬಾರ್ಬಿಟೋನ್‌ನ್ನು ಬಾಯಿಯಿಂದ ತೆಗೆದುಕೊಳ್ಳಬೇಕು. ಬಹುಶಃ ಜೀವನಪರ್ಯಂತ ಈ ಔಷಧವನ್ನು ಮುಂದುವರೆಸಬೇಕಾಗುವುದು. ಮೂರ್ಛೆಯನ್ನು ತಪ್ಪಿಸುವ ಅತಿ ಕಡಿಮೆ ಪ್ರಮಾಣದ ಔಷಧವನ್ನು ನುಂಗಬೇಕು. ನಾಯಿಕೆಮ್ಮಿನ ಕೆಮ್ಮು ಮತ್ತು ವಾಂತಿಯನ್ನು ಹಿಡಿತಕ್ಕೆ ತರಲಿಕ್ಕೂ ಇದನ್ನು ಉಪಯೋಗಿಸಬಹುದು.

**ಮುನ್ನೆಚ್ಚರಿಕೆ:** ಫಿನೋಬಾರ್ಬಿಟೋನ್‌ನ್ನು ಬಹಳ ತೆಗೆದುಕೊಂಡರೆ ಉಸಿರಾಟ ಮಂದವಾಗಿ ನಿಲ್ಲಲೂ ಬಹುದು. ನಿಧಾನವಾಗಿ ಶುರುವಾದ ಔಷಧದ ಪರಿಣಾಮ ಬಹಳ ಕಾಲ ಉಳಿಯುವಂಥಾದ್ದು. (ರೋಗಿ ೨೪ ತಾಸು ಮೂತ್ರ ಮಾಡದಿದ್ದರೆ ಇನ್ನೂ ಹೆಚ್ಚು ಕಾಲ ಉಳಿಯುತ್ತದೆ). ಕಾರಣ ಬಹಳಷ್ಟು ಕೊಡಬೇಡಿ.

**ಪ್ರಮಾಣ:** ದಿನಕ್ಕೆ ೩–೬ ಮಿ.ಗ್ರಾಂ/ಕೆಜಿಗೆ.

೧೦೦ ಮಿ.ಗ್ರಾಂ ಮಾತ್ರೆಯನ್ನುಪಯೋಗಿಸಿ,

ಮಲಗುವ ಮೊದಲು ಬಾಯಿಂದ ಒಂದು ಡೋಸ್ ರೋಗಿಗೆ ನುಂಗಲು ಕೊಡಿ.

**ಪ್ರತಿ ಡೋಸ್ ನಲ್ಲಿಯೂ,**

೧೨ ವರ್ಷಕ್ಕೆ ಮೇಲ್ಪಟ್ಟವರು– ೧೦೦–೩೦೦ ಮಿ.ಗ್ರಾಂ (೧–೩ ಮಾತ್ರೆ)

೭–೧೨ ವರ್ಷದವರು– ೫೦–೧೦೦ ಮಿ.ಗ್ರಾಂ (೧/೨–೧ ಮಾತ್ರೆ)

೭ ವರ್ಷಕ್ಕೆ ಕೆಳಗಿನವರು: ೨೦–೫೦ ಮಿ.ಗ್ರಾಂ (೧/೪ ೧/೨ ಮಾತ್ರೆ)
ಮೂರ್ಛೆರೋಗದ ಮೂರ್ಛೆ ತಡೆಯಲು ಮತ್ತು ಧನುರ್ವಾಯುವಿನ ಸೆಡೆತಗಳನ್ನು ತಡೆಯಲು ಫಿನೋಬಾರ್ಬಿಟೋನ್‌ನ ಇಂಜೆಕ್ಷನ್ (Injection Phenobarbitone) ಕೊಡಬೇಕು.
ಸ್ನಾಯುವಿಗೆ ೧ ಇಂಜೆಕ್ಷನ್ ಕೊಡಿ.
ದೊಡ್ಡವರಿಗೆ: ೨೦೦ ಮಿ.ಗ್ರಾಂ (೧ ಮಿ.ಲಿ)
೭–೧೨ ವರ್ಷದ ಮಕ್ಕಳಿಗೆ–೧೫೦ ಮಿ.ಗ್ರಾಂ (೩/೪ ಮಿ.ಲಿ)
೨–೬ ವರ್ಷದ ಮಕ್ಕಳಿಗೆ– ೧೦೦ ಮಿಗ್ರಾಂ (೧/೨ ಮಾತ್ರೆ)
೨ ವರ್ಷಕ್ಕಿಂತ ಚಿಕ್ಕವರಿಗೆ–೫೦ ಮಿ.ಗ್ರಾಂ (೧/೪ ಮಿ.ಲಿ)

ಇಷ್ಟು ಪ್ರಮಾಣದಲ್ಲಿ ಪ್ರಯೋಜನವಾಗದಿದ್ದರೆ ೧೫ ನಿಮಿಷಗಳ ನಂತರ ಇನ್ನೂ ಒಂದು ಡೋಸ್ ಕೊಡಬಹುದು.

## ಫಿನಿಟೊಯಿನ್ (ಡೈಫಿನೈಲ್‌ಹೈಡೇಂಟೋನ್) (Phenytoin) (Diphenylhydantoin)

ಜನಪ್ರಿಯ ಬ್ರಾಂಡ್: ಎಪಿಲೆಪ್ಟಿನ್ (Epileptin)
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.
೨೫ , ೩೦, ಮತ್ತು ೧೦೦ ಮಿ.ಗ್ರಾಂ ಕ್ಯಾಪ್ಸೂಲ್‌ಗಳಲ್ಲಿ ಬರುತ್ತದೆ.
೫ ಮಿ.ಲಿ.ಯಲ್ಲಿ ೧೨೫ ಮಿ.ಗ್ರಾಂ ಸಿರಪ್‌ಗಳಾಗಿ ಬರುತ್ತದೆ.
ಇದು ಮಲರೋಗದ ಮೂರ್ಛೆಯನ್ನು ತಡೆಯಲು ಬಹಳ ಸಹಕಾರಿ. ಆದರೆ ಜೀವನ ಪರ್ಯಂತ ಔಷಧವನ್ನು ತೆಗೆದುಕೊಳ್ಳಬೇಕು. ಅತಿ ಕಡಿಮೆ ಪ್ರಮಾಣದ ಡೋಸ್‌ನ್ನು ಉಪಯೋಗಿಸಬೇಕು.

**ಅಡ್ಡ ಪರಿಣಾಮಗಳು:** ಬಹಳ ಕಾಲ ಉಪಯೋಗ ಮಾಡುವುದರಿಂದಾಗಿ ವಸಡುಗಳು ದಪ್ಪಗಾಗಿ ಅತಿಯಾಗಿ ಬೆಳೆಯಬಹುದು. ಇದು ಬಹಳವಾಯಿತೆಂದರೆ ಬೇರೆ ಔಷಧಕ್ಕೆ ಹೋಗಿ. ಬಾಯಿಯನ್ನು ಸ್ವಚ್ಛವಾಗಿಡುವುದರಿಂದ ಮತ್ತು ಊಟವಾದ ನಂತರ ಹಲ್ಲುಜ್ಜುವುದರಿಂದ ಕಡಿಮೆಮಾಡಬಹುದು.
ಪ್ರಮಾಣ ದಿನಕ್ಕೆ/ಕೆಜಿಗೆ/೫ ಮಿ.ಗ್ರಾಂ
೧೦೦ ಮಿಗ್ರಾಂ ಕ್ಯಾಪ್ಸೂಲ್‌ಗಳನ್ನು ಉಪಯೋಗಿಸಿ,
೧೨ ವರ್ಷದ ಮೇಲ್ಪಟ್ಟವರಿಗೆ– ೧೦೦–೩೦೦ ಮಿ.ಗ್ರಾಂ (೧–೩ ಕ್ಯಾಪ್ಸೂಲ್)
೭–೧೨ ವರ್ಷದ ಮಕ್ಕಳಿಗೆ ೧೦೦ ಮಿ.ಗ್ರಾಂ (೧ ಕ್ಯಾಪ್ಸೂಲ್)
೭ ವರ್ಷದ ಮಕ್ಕಳಿಗೆ: ೫೦ ಮಿ.ಗ್ರಾಂ (೧/೨ ಕ್ಯಾಪ್ಸೂಲ್)
ಈ ಪ್ರಮಾಣದಲ್ಲಿ (ಡೋಸ್‌ನಲ್ಲಿ) ಮೂರ್ಛೆಯನ್ನು ಪೂರ್ತಿ ತಡೆಯಲು ಸಾಧ್ಯವಾಗದಿದ್ದರೆ ಮತ್ತೆ ಒಂದು ಡೋಸ್‌ನ್ನು ತೆಗೆದುಕೊಳ್ಳಿ. ಅದಕ್ಕಿಂತ ಹೆಚ್ಚು ಬೇಡ. ಮೂರ್ಛೆ ಬರುವುದು ನಿಂತಿತೆಂದರೆ ಪ್ರಮಾಣವನ್ನು (ಡೋಸ್‌ನ್ನು) ಕಡಿಮೆ ಮಾಡಿ ನೋಡಿ. ಅತಿ ಕಡಿಮೆ ಡೋಸ್ ತೆಗೆದುಕೊಳ್ಳಬೇಕು.

## ಡೈಜೆಪಾಂ (Diazepam)

ಜನಪ್ರಿಯ ಬ್ರಾಂಡ್: ಕಾಲ್‌ಮೋಡ್ (Calmod), ವೆಲೀಯಂ (Valium).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.

೧ ಮಿಲಿಯಲ್ಲಿ ೫ ಮಿ.ಗ್ರಾಂ ,ಅಥವಾ ೨ ಮಿ.ಲಿ ಯಲ್ಲಿ ೧೦ ಮಿಗ್ರಾಂನ ಇಂಜೆಕ್ಷನ್ ಆಗಿಬರುತ್ತದೆ.

ಡೈಜೆಪಾಂನ ಉಪಯೋಗವು
ಫಿನೋಬಾರ್ಬಿಟೋನ್‌ನಂತೆಯೇ ಇದ್ದರೂ ಇದರ ಬೆಲೆ ಜಾಸ್ತಿ.
ಇಲ್ಲಿ ಇದನ್ನು ನಮೂದಿಸಿರುವುದರ ಕಾರಣವೇನೆಂದರೆ ಎಷ್ಟೋ ಬಾರಿ ಫಿನೋಬಾರ್ಬಿಟೋನ್‌ಸಿಗದಿರುವಲ್ಲಿ ಇದು ಸಿಗುತ್ತಿರುತ್ತದೆ.
**ಮಲರೋಗದ ಮೂರ್ಛೆ ತಡೆಯಲು ಪ್ರಮಾಣ:**
ವಯಸ್ಕರಿಗೆ: ೫–೧೧೦ ಮಿ.ಗ್ರಾಂ. ಕೊಡಬೇಕು.

ಪರಿಣಾಮ ಆಗದಿದ್ದರೆ ೨ ತಾಸಿನ ನಂತರ ಇನ್ನೊಮ್ಮೆ ಕೊಡಿ.

ಧನುರ್ವಾಯುವಿಗೆ ಸೆಳೆತ ತಡೆಯಲು ಬೇಕಾಗುವಷ್ಟು ಮಾತ್ರ ಕೊಡಿ. ೫ ಮಿ.ಗ್ರಾಂ ನಿಂದ ಶುರು ಮಾಡಿ. (ಮಕ್ಕಳಿಗೆ ಇನ್ನೂ ಕಡಿಮೆ.) ಸೆಳೆತ ನಿಲ್ಲದಿದ್ದರೆ ಇನ್ನಷ್ಟು ಕೊಡಿ. ಆದರೆ ಅದು ೧೦ ಮಿ.ಗ್ರಾಂ ನ್ನು ಮೀರದಿರಲಿ. ಅವಶ್ಯವಿದ್ದರೆ ಫಿನೋಬಾರ್ಬಿಟೋನ್‌ನ್ನು ಜೊತೆಗೆ ಕೊಡಿ. ಜಾಸ್ತಿ ಕೊಡಬಾರದೆನ್ನುವುದನ್ನು ಗಮನದಲ್ಲಿಡಿ.

ಅತೀ ಹೆದರಿಕೆಯಿಂದ ಉನ್ಮಾದ ಏರಿದಾಗಲೂ, ಉದ್ವೇಗಗೊಂಡಾಗಲೂ ಡೈಜೆಪಾಂನ್ನು ಕೊಡಬಹುದಾದರೂ ಬಹಳ ಬಾರಿ ಕೊಡಬಾರದು.

ಎಲುವುಗಳನ್ನು ಕೂಡಿಸುವುದಕಿಂತ ೧೫ ನಿಮಿಷ ಮೊದಲು ೧೦ ಮಿ.ಗ್ರಾಂ ನ ಇಂಜೆಕ್ಷನ್ ಕೊಟ್ಟಿದ್ದರೆ ಮಾಂಸಖಂಡಗಳು ಸಡಿಲಗೊಳ್ಳುತ್ತವೆ, ನೋವು ಕಡಿಮೆಯಾಗುತ್ತದೆ. ಮಕ್ಕಳಿಗೆ ೧೦ ಮಿ.ಗ್ರಾಂ ಮಾತ್ರೆಯನ್ನೇ ಕೊಡಿ.

**ಪ್ರಮಾಣ:**

ಡೈಜೆಪಾಂನ ಇಂಜೆಕ್ಷನ್ (Injection Diazepam) ಕೊಡುವಾಗ,

೨ ಮಿ.ಲಿ ಯಲ್ಲಿ ೧೦ ಮಿ.ಗ್ರಾಂ ಆ್ಯಂಪ್ಯೂಲ್‌ನ್ನು ಉಪಯೋಗಿಸಿ,

೧೨ ವರ್ಷ ಮೇಲ್ಪಟ್ಟವರಿಗೆ: ೫–೧೦ ಮಿ.ಗ್ರಾಂ (೧–೨ ಮಿ.ಲಿ.)

೭–೧೨ ವರ್ಷದ ಮಕ್ಕಳಿಗೆ– ೩–೫ ಮಿ.ಗ್ರಾಂ (೨/೩ – ೧ ಮಿ.ಲಿ.)

೧–೬ ವರ್ಷದ ಮಕ್ಕಳಿಗೆ– ೧–೫ ಮಿ.ಗ್ರಾಂ (೧/೫ ೧ ಮಿ.ಲಿ.)

**೧ ಕ್ಕಿಂತ ಕಡಿಮೆ ವಯಸ್ಸಿನ ಮಗುವಿಗೆ ಉಪಯೋಗಿಸಬೇಡಿ.**

ಅವಶ್ಯ ಬಿದ್ದರೆ ೩–೪ ತಾಸಿಗೆ ಮತ್ತೊಮ್ಮೆ ಕೊಡಿ.

ಇಂಜೆಕ್ಷನ್ ಡೈಜೆಪಾಂನ್ನು ಸ್ನಾಯುವಿಗೆ (ಮಾಂಸ ಖಂಡಕ್ಕೆ) ಚುಚ್ಚುವುದು ಒಳ್ಳೆಯದಾದರೂ ಇದು ಬೇಗನೆ ಕೆಲಸ ಮಾಡುವುದಿಲ್ಲ. ನರಕ್ಕೆ ಕೊಡುವುದಾದರೆ ಬಲು ನಿಧಾನವಾಗಿ ಕೊಡಬೇಕಾಗುತ್ತದೆ. ಬಹಳಷ್ಟು ಕೊಟ್ಟುಬಿಟ್ಟರೆ ಉಸಿರು ಮಂದವಾಗಿ ನಿಲ್ಲಲೂಬಹುದು. ಕಾರಣ ಬಹಳ ಕೊಡಬೇಡಿ. ಇದು ಚಟಕಾರಕ ಔಷಧ. ಕಾರಣ ಯಾವಾಗಲೂ ಬೀಗದೊಳಗೇ ಇಡಿ.

**ಪ್ರಸವದ ನಂತರ ವಿಪರೀತ ರಕ್ತ ಸ್ರಾವಕ್ಕೆ**

ಪ್ರಸವದ ನಂತರ ಉಪಯೋಗಿಸಬೇಕಾದ ಮತ್ತು ಉಪಯೋಗಿಸಬಾರದ ಔಷಧಗಳ ಬಗ್ಗೆ ೩೧೯ ನೇ ಪುಟದಲ್ಲಿಯೇ ಹೇಳಿದೆ. ಆಕ್ಸಿಟೋಸಿನ್‌ಗಳನ್ನು (ಎರ್ಗೋನೋವಿನ್ Ergonovine, ಆಕ್ಸಿಟೋಸಿನ್ Oxytocin ಮುಂತಾದವು) ಮಗು ಹುಟ್ಟಿದ ನಂತರ ಆಗುವ ಅತಿಯಾದ ರಕ್ತಸ್ರಾವ ತಡೆಯಲಿಕ್ಕಾಗಿ ಮಾತ್ರ ಉಪಯೋಗಿಸಬೇಕು. ಬೇಗ ಹೆರಿಗೆ ಆಗಲೆಂದು ಮತ್ತು ತಾಯಿಗೆ ಶಕ್ತಿ ಕೊಡಲು ಇವನ್ನು ಉಪಯೋಗಿಸಿದಾಗ ತಾಯಿ ಮತ್ತು ಮಗು ಇಬ್ಬರಿಗೂ ಅಪಾಯ ಆಗಬಹುದು ಮಗು ಹುಟ್ಟುವ ತನಕವೂ ಕೊಡಲೇಬಾರದು. ಕಸ ಬಿದ್ದ ನಂತರವೇ ಕೊಟ್ಟರೂ ಇನ್ನೂ ಒಳ್ಳೆಯದು. **ಮಗು ಬಂದ ನಂತರ, ಕಸ ಬೀಳುವ ಮೊದಲೇ ರಕ್ತಸ್ರಾವ ಜಾಸ್ತಿ ಆದರೆ,** ೧/೨ ಮಿ.ಲಿ. (೫ ಯುನಿಟ್) ಆಕ್ಸಿಟೋಸಿನ್ (Oxytocin) ಕೊಡಬಹುದು. ಮಾಂಸಖಂಡಕ್ಕೆ ಇಂಜೆಕ್ಷನ್ ಕೊಡಬೇಕು. ಎರ್ಗೋನೋವಿನ್ (Ergonovine)ನ್ನು ಕಸ ಬರುವ ಮೊದಲು ಕೊಡಬೇಡಿ.

ಪಿಟ್ಯುಟರಿನ್ (Pituitrin) ಕೂಡ, ಆಕ್ಸಿಟೋಸಿನ್‌ನಂತಹುದೆ ಒಂದು ಔಷಧವಾದರೂ ಅದರ ಬೆಲೆ ಜಾಸ್ತಿ. ಇದನ್ನು ಅತಿ ರಕ್ತಸ್ರಾವದ ತುರ್ತುಸ್ಥಿತಿಯಲ್ಲಿ ಮಾತ್ರ ಆಕ್ಸಿಟೋಸಿನ್ ಎರ್ಗೋನೋವಿನ್‌ಗಳು ಸಿಗದಿದ್ದಾಗ ಮಾತ್ರ ಬಳಸಬೇಕು.

ನವಜಾತ ಶಿಶುವಿನಲ್ಲಿ ರಕ್ತಸ್ರಾವ ಆಗಬಾರದೆಂದರೆ ವಿಟಮಿನ್ ಕೆ. ಕೊಡಿ.

ಎರ್ಗೋನೋವಿನ್/

**(Ergonovine)**

ಎರ್ಗೋಮೆಟ್ರಿನ್ ಮಾಲಿಯೇಟ್

**(Ergmetrine maleate)**

ಎರ್ಗೋಟ್ರೇಟ್

**(Ergotrate)**

ಮೆಥರ್ಜಿನ್

**(Methargine))**

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.

೧ಮಿ.ಲಿ. ಯಲ್ಲಿ ೨ ಮಿ.ಗ್ರಾಂನ ಇಂಜೆಕ್ಷನ್ ಗಳು ಬರುತ್ತವೆ.

**ಕಸ ಹೊರಗೆ ಬಂದ ನಂತರ ವಿಪರೀತ ರಕ್ತಸ್ರಾವ ತಡೆಯಲು, ರಕ್ತಸ್ರಾವವನ್ನು ಹಿಡಿತಕ್ಕೆ ತರಲು ಎರ್ಗೋನೋವಿನ್ ಇಂಜೆಕ್ಷನ್ ಪ್ರಮಾಣ:**

ತೀವ್ರ ರಕ್ತಸ್ರಾವಕ್ಕೆ (೨ ಕಪ್‌ಗಿಂತಲೂ ಜಾಸ್ತಿ), ೧–೨ ಆ್ಯಂಪ್ಯೂಲ್ (೦.೨–೦.೪ ಮಿ.ಲಿ.) ಕೊಡಿ. ಮಾಂಸಖಂಡಕ್ಕೆ ಚುಚ್ಚಿ. ಅತೀ ಗಂಭೀರವಾದ ಪರಿಸ್ಥಿತಿಯಲ್ಲಿ ರಕ್ತನಾಳಕ್ಕೆ ೧ ಆ್ಯಂಪ್ಯೂಲ್‌ನ ಇಂಜೆಕ್ಷನ್ ಕೊಡಿ. ಅವಶ್ಯಬಿದ್ದರೆ ಅರ್ಧ ಅಥವಾ ಒಂದು ತಾಸಿನ ನಂತರ ಇನ್ನೊಮ್ಮೆ ಕೊಡಿ. ರಕ್ತಸ್ರಾವ ನಿಯಂತ್ರಣಕ್ಕೆ ಬರುತ್ತಲೇ ಎರ್ಗೋನೋವಿನ್ ಮಾತ್ರೆ ಆರಂಭಿಸಿ.

**ಎರ್ಗೋನೋವಿನ್ ಮಾತ್ರೆಯ ಪ್ರಮಾಣ;**

೦.೨ ಮಿ.ಗ್ರಾಂ ನ ಮಾತ್ರೆಯನ್ನುಪಯೋಗಿಸಿ,

ಮಗು ಹುಟ್ಟಿದ ನಂತರ ತೀವ್ರ ರಕ್ತಸ್ರಾವ ತಡೆಯಲು, ರಕ್ತ ಹೀನತೆ ಇರುವ ತಾಯಿಯಿಂದ ಬಹಳಷ್ಟು ರಕ್ತ ಹೊರಹೋಗದಂತೆ ಮಾಡಲು ದಿನಕ್ಕೆ ೩.೪ ಬಾರಿ ಒಂದೊಂದು ಮಾತ್ರೆಯನ್ನು ಕೊಡಿ. ಕಸ ಬಿದ್ದ ನಂತರವೇ ಆರಂಬಿಸಬೇಕು. ರಕ್ತಸ್ರಾವ ಜಾಸ್ತಿ ಇದ್ದರೆ ಒಮ್ಮೆಗೆ ೨ ಮಾತ್ರೆ ಕೊಡಬೇಕು.

## ಆಕ್ಸಿಟೋಸಿನ್
## Oxytocin

ಜನಪ್ರಿಯ ಬ್ರಾಂಡ್: ಒಕ್ಸಿಟೋನ್ (Oxyton).
ಇವಾಟೋಸೀನ್ (Evatocin),
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.
೧ ಮಿ.ಲಿ.ಯಲ್ಲಿ ೧೦ ಆ್ಯಂಪ್ಯೂಲ್ ಯುನಿಟ್‌ನ ದ್ರಾವಣ ಬರುತ್ತದೆ.

ಮಗು ಜನಿಸಿದ ನಂತರ, ಕಸ ಹೊರಬರುವ ಮೊದಲೇ ರಕ್ತಸ್ರಾವ ಆಗುತ್ತಿದ್ದರೆ ತಡೆಯಲು ಇದನ್ನು ಕೊಡಬಹುದು. (ಕಸವನ್ನು ಹೊರ ತರಲಿಕ್ಕೂ ಅದು ಸಹಾಯಕ. ಆದರೆ ಕಸ ಬರಲು ಬಲು ತಡವಾಗಿದ್ದು ರಕ್ತಸ್ರಾವ ಜಾಸ್ತಿಯಾಗುತ್ತಿದ್ದಾಗ ಮಾತ್ರ ಅದನ್ನು ಉಪಯೋಗಿಸಬೇಕು).

**ಪ್ರಮಾಣ:**

೧/೨ ಮಿ.ಲಿ. (೫ ಯುನಿಟ್) ಚುಚ್ಚಿ. ರಕ್ತಸ್ರಾವ ಇನ್ನೂ ಕಡಿಮೆಯಾಗದಿದ್ದರೆ ೧೫ ನಿಮಿಷದ ನಂತರ ಇನ್ನೊಮ್ಮೆ ಚುಚ್ಚಿ.

## ಮೂಲವ್ಯಾಧಿಗೆ

ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.

**ಗುದದ್ವಾರದಲ್ಲಿ ಹಾಕುವ ಮಾತ್ರೆಗಳು:**

ಇವು ಗುಂಡಿನ ಆಕಾರದ ವಿಶೇಷ ಮಾತ್ರೆಗಳು. ಮೂಲವ್ಯಾಧಿಯ ಗಂಟಾದ ರಕ್ತನಾಳಗಳನ್ನು ಸಣ್ಣದು ಮಾಡಿ ನೋವನ್ನು ಕಡಿಮೆ ಮಾಡುತ್ತವೆ. ಈ ಔಷಧದಲ್ಲಿ ಅನೇಕ ರೀತಿಯ ತಯಾರಿಕೆಗಳು ಬರುತ್ತವೆ. ಕೆಲವು ಒಳ್ಳೆಯ ಉಪಯುಕ್ತವಿದ್ದು, ಆ ಹೊತ್ತಿಗೆ ಮಾತ್ರ ಸಹಾಯಕವಾಗಿದ್ದು ಬೆಲೆ ಜಾಸ್ತಿ, ಇವುಗಳಲ್ಲಿ ಕಾರ್ಟಿಕೋಸ್ಟಿರಾಯಿಡ್ ಇರುತ್ತದೆ. ಈ ರೋಗಕ್ಕೆ ವಿಶೇಷ ಮುಲಾಮು ಕೂಡ ಬರುತ್ತದೆ. ಆದರೆ ಮಲವನ್ನು ಮೃದುಗೊಳಿಸುವಂಥ ಆಹಾರವನ್ನು ತಿನ್ನುವುದೇ ಎಲ್ಲಕ್ಕಿಂತ ಹೆಚ್ಚು ಪ್ರಯೋಜನಕಾರಿ ಔಷಧ.

**ಪ್ರಮಾಣ:**

ನಿತ್ಯದ ಮಲವಿಸರ್ಜನೆಯ ನಂತರ ಒಂದು ಮಾತ್ರೆಯನ್ನು ಮಲದ್ವಾರದೊಳಗೆ ಹಾಕಿಡಿ. ರಾತ್ರಿ ಮಲಗುವ ಮುನ್ನ ಇನ್ನೊಂದನ್ನು ಹಾಕಿ.

## ಅಪೌಷ್ಟಿಕತೆ ಮತ್ತು ರಕ್ತ ಹೀನತೆಗೆ

## ವಿಟಮಿನ್ ಎ
## (Vitamin A)

ಜನಪ್ರಿಯ ಬ್ರಾಂಡ್: ಫೋಲಿಟಾಬ್ (Folitab).
ಎಕ್ವಾಸೋಲ್ ಎ (Aquasol A),
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್
ಹೆಸರು______ಪ್ರಮಾಣ_____ಬೆಲೆ_______.
೨ ಲಕ್ಷ ಯುನಿಟ್ ನ ಕ್ಯಾಪ್ಸೂಲ್‌ಗಳಾಗಿ ಬರುತ್ತದೆ,

೬೦ ಮಿ.ಗ್ರಾಂ. ನ ರೆಟಿನಾಲ್‌ನಲ್ಲಿ.
(ಕಡಿಮೆ ಪ್ರಮಾಣದಲ್ಲೂ ಬರಬಹುದು)
ಇಂಜೆಕ್ಷನ್ನು ೧ ಲಕ್ಷ ಯುನಿಟ್‌ದ್ದು ಬರುತ್ತದೆ.

**ಮುನ್ನೆಚ್ಚರಿಕೆ: ವಿಟಮಿನ್ ಎ ಜಾಸ್ತಿಯಾದರೆ ಮೂರ್ಛೆ ಬರಬಹುದು. ಅತಿ ಹೆಚ್ಚು ಕೊಡಬೇಡಿ. ಮಕ್ಕಳಿಗೆ ಸಿಗದಂತೆ ಇಡಿ.**

ತಡೆಯಲು: ಮಕ್ಕಳಲ್ಲಿ ಇರುಳುಗುರುಡುತನ ಸಮಸ್ಯೆ ಇರುವ ಪ್ರದೇಶಗಳಲ್ಲಿ ಹಳದಿ ಬಣ್ಣದ ತರಕಾರಿ ಮತ್ತು ಹಣ್ಣುಗಳನ್ನು ಹಸಿರು ಪಲ್ಲೆಗಳನ್ನು, ತತ್ತಿ ಮತ್ತು ಯಕೃತ್ತುಗಳನ್ನು ತಿನ್ನಲು ಕೊಡಬೇಕು. ಮೀನೆಣ್ಣೆಯಲ್ಲಿ ವಿಟಮಿನ್ ಬಹಳ ಇರುತ್ತದೆ. ಆರು ತಿಂಗಳಿಗೊಮ್ಮೆ ಒಂದು ಕ್ಯಾಪ್ಸೂಲ್ ಕೊಟ್ಟರೆ ಇರುಳುಗುರುಡುತನ ತಡೆಗೆ ಸಾಕು. ಹೆಚ್ಚಿಗೆ ಬೇಡ.

ಜನಿಸಿದ ಶಿಶುವಿನಲ್ಲಿ ಇರುಳುಗುರುಡುತನ ತಡೆಯಲು ತಾಯಿಯು ಹಡೆದ ನಂತರ ಒಂದು ತಿಂಗಳೊಳಗಾಗಿ ವಿಟಮಿನ್ ಎ ಯ ಒಂದು ಕ್ಯಾಪ್ಸೂಲ್‌ನ್ನು ನುಂಗಿದರೆ ಸಾಕು.

ಗೊಬ್ಬರ ಆಗಿರುವ ಮಕ್ಕಳಲ್ಲಿ ವಿಟಮಿನ್ ಎ ಯ ಕೊರತೆಯಾಗುವ ಸಂಭವ ಹೆಚ್ಚು. ಕಾರಣ ಗೊಬ್ಬರ ಆದ ಮಕ್ಕಳಿಗೆ ಕೂಡಲೇ ಒಂದು ವಿಟಮಿನ್ ಎ ಮಾತ್ರೆಯನ್ನು ಕೊಟ್ಟುಬಿಡುವುದೊಳ್ಳೆಯದು.

ಮಕ್ಕಳಿಗೆ ಸಾಕಷ್ಟು ವಿಟಮಿನ್ ಎ ಸಿಗದಂಥ ಪ್ರದೇಶಗಳಲ್ಲಿ ವಿಟಮಿನ್ ಎ ಯುಕ್ತ ಆಹಾರವನ್ನು ಹೆಚ್ಚಿಗೆ ಕೊಡುವ ಮತ್ತು ವಿಟಮಿನ್ ಎ ಕ್ಯಾಪ್ಸೂಲ್‌ಗಳನ್ನು ನುಂಗಿಸುವ ಏರ್ಪಾಡು ಆಗಬೇಕು. ಇದರಿಂದ ಗೊಬ್ಬರ ಮತ್ತು ಇನ್ನಿತರ ಗಂಭೀರ ಕಾಯಿಲೆಗಳ ವಿರುದ್ದ ಹೋರಾಡುವ ತಾಕತ್ತು ಅವರಲ್ಲಿ ಬರುತ್ತದೆ.

**ಚಿಕಿತ್ಸೆಗೆ:**

೨ ಲಕ್ಷ ಯುನಿಟ್‌ನ ಒಂದು ಕ್ಯಾಪ್ಸೂಲ್ ಅಥವಾ ೧ ಲಕ್ಷ ಯುನಿಟ್‌ನ ಒಂದು ಇಂಜೆಕ್ಷನ್ ಕೊಡಿ. ಮರುದಿನ ಮತ್ತೆ ೨ ಲಕ್ಷ ಯುನಿಟ್‌ನ ಒಂದು ಕ್ಯಾಪ್ಸೂಲ್ ಕೊಡಿ. ಒಂದೆರಡು ವಾರದ ನಂತರ ಇನ್ನೊಂದು ಕ್ಯಾಪ್ಸೂಲ್ ಕೊಡಿ.
೧ ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಅರ್ಧದಷ್ಟನ್ನು ಕೊಡಿ.

## <u>ಐರನ್ ಸಲ್ಫೇಟ್</u>
## <u>(ಫೆರಸ್ ಸಲ್ಫೇಟ್)</u>
## <u>(Ferrous sulphate)</u>

ಜನಪ್ರಿಯ ಬ್ರಾಂಡ್: ಈ ಔಷಧದ ಬ್ರಾಂಡು ಸಿಕ್ಕುವದು ಕಷ್ಟ, (ಬಹಳ ದುಬಾರಿ, ಇಲ್ಲವೆಂದರೆ ಅನಾವಶ್ಯಕ ಸಂಯೋಜಿತ), ಆದರಿಂದ ಇದನ್ನು ನಿಮ್ಮ ಹತ್ತಿರದ ಸರ್ಕಾರಿ ಆಸ್ಪತ್ರೆಯಿಂದ ಅಥವಾ ಸರ್ಕಾರಿ ಆರೋಗ್ಯ ಕಾರ್ಯಕರ್ತರಿಂದ ಪಡೆಯುವದು ಉತ್ತಮ. ೨೦೦, ೩೦೦,೫೦೦ ಮಿ.ಗ್ರಾಂ. ಮಾತ್ರೆಗಳಾಗಿ ಬರುತ್ತವೆ. ಮಕ್ಕಳಿಗಾಗಿ ಡ್ರಾಪಗಳು, ಸಿರಪ್‌ಗಳು ಬರುತ್ತವೆ.
ರಕ್ತ ಹೀನತೆ ಗುಣಪಡಿಸಲು ಫೆರಸ್ ಸಲ್ಫೇಟ್ ಉಪಯುಕ್ತ. **ಚಿಕಿತ್ಸೆಯನ್ನು ೩ ತಿಂಗಳ ಕಾಲ ಮಾಡಬೇಕು.** ಏನೂ ಗುಣ ಕಾಣದಿದ್ದರೆ ರಕ್ತ ಹೀನತೆಗೆ ಕಾರಣ ಕಬ್ಬಿಣಾಂಶದ ಕೊರತೆ ಅಲ್ಲ. ವೈದ್ಯಕೀಯ ಚಿಕಿತ್ಸೆ ಪಡೆಯಿರಿ. ಆಗದಿದ್ದರೆ ಫೋಲಿಕ್ ಆಸಿಡ್ (Folic acid) ಕೊಟ್ಟು ನೋಡಿ.
ರಕ್ತ ಹೀನತೆ ಇರುವ ಗರ್ಭಿಣಿಯರಿಗೆ ಫೆರಸ್ ಸಲ್ಫೇಟ್ ತೆಗೆದುಕೊಳ್ಳುವುದು ಅತಿ ಉಪಯುಕ್ತ. ಇಲ್ಲವೆಂದರೆ ಹೆರಿಗೆಯಲ್ಲಿ ಅತಿಯಾದ ರಕ್ತಸ್ರಾವವಾಗಿ ಬಹಳ ತ್ರಾಸಾಗುತ್ತದೆ.
ಕೆಲವೊಮ್ಮೆ ಫೆರಸ್ ಸಲ್ಫೇಟ್‌ನಿಂದ ಹೊಟ್ಟೆಯಲ್ಲಿ ತ್ರಾಸಾಗಬಹುದಾದ್ದರಿಂದ, ಊಟದ ಜೊತೆ ಅದನ್ನು ತೆಗೆದುಕೊಳ್ಳುವುದೊಳ್ಳೆಯದು. ೩ ವರ್ಷದೊಳಗಿನ ಮಕ್ಕಳಿಗೆ ಮಾತ್ರೆಯ ೧/೪ ಭಾಗವನ್ನು ಅರೆದು ಊಟದಲ್ಲಿ ಸೇರಿಸಿ ಕೊಡಬೇಕು.
**ಎಚ್ಚರಿಕೆ: ಪ್ರಮಾಣ ಸರಿಯಾಗಿದೆಯೋ ನೋಡಿ ಕೊಡಿ. ಬಹಳಷ್ಟು ಫೆರಸ್ ಸಲ್ಫೇಟ್ ವಿಷವಾಗಲೂಬಹುದು ಮಕ್ಕಳಿಗೆ ಸಿಗದಂತೆ ಇಟ್ಟಿರಿ.**
ಫೆರಸ್ ಸಲ್ಫೇಟಿನ ಪ್ರಮಾಣ:
೨೦೦ ಮಿ.ಗ್ರಾಂ ಮಾತ್ರೆ ದಿನಕ್ಕೆ ಮೂರು ಬಾರಿ ಕೊಡಿ.
**ಒಂದು ಡೋಸ್ ನಲ್ಲಿ,**
ದೊಡ್ಡವರಿಗೆ: ೨೦೦–೪೦೦ ಮಿ.ಗ್ರಾಂ (೧–೨ ಮಾತ್ರೆ)
೬ ವರ್ಷದ ಮೇಲ್ಪಟ್ಟವರಿಗೆ–೨೦೦ ಮಿ.ಗ್ರಾಂ (೧ ಮಾತ್ರೆ)
೩–೬ ವರ್ಷದ ಮಕ್ಕಳಿಗೆ– ೧೦೦ ಮಿ.ಗ್ರಾಂ (೧/೨ ಮಾತ್ರೆ)

೩ ವರ್ಷದೊಳಗಿನ ಮಕ್ಕಳಿಗೆ-೨೫.-೩೦ ಮಿ.ಗ್ರಾಂ (೧/೮ ೧/೪ ಮಾತ್ರೆ) ಸಣ್ಣಗೆ ಪುಡಿ ಮಾಡಿ ಆಹಾರದಲ್ಲಿ ಸೇರಿಸಿ ಕೊಡಿ.

## ಫೋಲಿಕ್ ಆಸಿಡ್
## (Folic acid)

ಜನಪ್ರಿಯ ಬ್ರಾಂಡ್: ಫೋಲ್-೫ (Fol – 5), ಫೋಲಸೋನ್ (Folson).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.

**ಕೆಲವು ರೀತಿಯ ರಕ್ತ ಹೀನತೆಗೆ:**
೫ ಮಿ.ಗ್ರಾಂ ಮಾತ್ರೆ ಬರುತ್ತದೆ.

ಮಲೇರಿಯಾದಲ್ಲಿ ಆಗುವಂತೆ ರಕ್ತನಾಳಗಳಲ್ಲಿ ಕೆಂಪು ರಕ್ತ ಕಣಗಳು ನಾಶವಾಗಿ ಆಗುವ ರಕ್ತ ಹೀನತೆಯ ಚಿಕಿತ್ಸೆಗೆ ಫೋಲಿಕ್ ಆಸಿಡ್ ಬೇಕು. ಆಡಿನ ಹಾಲು ಕುಡಿಯುವ ಮಗು, ಮತ್ತು ಬಸುರಿ ಹೆಂಗಸರು ರಕ್ತ ಹೀನತೆ ಮತ್ತು ಅಪೌಷ್ಟಿಕತೆಯಿಂದ ಬಳಲುತ್ತಿದ್ದರೆ ಕಬ್ಬಿಣಾಂಶ ಮತ್ತು ಫೋಲಿಕ್ ಆಸಿಡ್ ಎರಡನ್ನೂ ಕೊಡಬೇಕು.
ಹಸಿರು ಪಲ್ಯ, ಮಾಂಸ, ಯಕೃತ್ತು ತೆಗೆದುಕೊಳ್ಳುತ್ತಿದ್ದರೆ ಫೋಲಿಕ್ ಆಸಿಡ್ ಸೇವಿಸುವ ಅಗತ್ಯವಿಲ್ಲ. ಮಕ್ಕಳಿಗೆ ಮಾತ್ರೆಗಳನ್ನು ೨ ವಾರಕಾಲ ಕೊಡಬೇಕು. ಆದರೆ ಕೆಲವು ಕಡೆ ಥಾಲಾಸೇಮಿಯಾ ಜಾತಿಯ ರಕ್ತ ಹೀನತೆ ಮತ್ತು ಅಪೌಷ್ಟಿಕತೆ ಎರಡೂ ಇರುವ ಹೆಂಗಸರು ಹಡೆಯುವವರೆಗೂ ಫೋಲಿಕ್ ಆಸಿಡ್ ಮಾತ್ರೆ ನುಂಗುವುದು ಒಳಿತು.

**ಪ್ರಮಾಣ :**
೫ ಮಿ.ಗ್ರಾಂ ಮಾತ್ರೆ ಉಪಯೋಗಿಸಿ,
ದಿನಕ್ಕೆ ಒಮ್ಮೆ ಕೊಡಿ. ದೊಡ್ಡವರು ಮತ್ತು ೩ ವರ್ಷದ ಮೇಲಿನ ಮಕ್ಕಳು-೧ ಮಾತ್ರೆ (೫ ಮಿ.ಗ್ರಾಂ)

## ವಿಟಮಿನ್ ಬಿ೧೨

ಇದು ಪರ್ನಿಶಿಯಸ್ ಎನಿಮಿಯಾ ಎಂಬ ಒಂದು ಅಪರೂಪದ ಕಾಯಿಲೆಗಾಗಿ ಉಪಯೋಗಿಸುವ ವಿಟಮಿನ್. ೩೫ ವರ್ಷದೊಳಗಿನ ಯಾರಲ್ಲೂ ಅದು ಕಾಣದು. ಉಷ್ಣ ಪ್ರದೇಶದಲ್ಲೂ ಕಾಣುವುದಿಲ್ಲ. ಹೆಚ್ಚು **ಡಾಕ್ಟರರು ರೋಗಿಗೆ ಏನಾದರೂ ಕೊಟ್ಟು ಸಾಗಹಾಕಲಿಕ್ಕಾಗಿ ಮಾತ್ರ ಅದನ್ನು ಅವಶ್ಯಲ್ಲದಿದ್ದರೂ ಬರೆದುಕೊಡುತ್ತಾರೆ. ನಿಮ್ಮ ಹಣವನ್ನು ವಿಟಮಿನ್ ಬಿ೧೨ ಮಾತ್ರೆಗಳಿಗಾಗಿ ವ್ಯರ್ಥ ವ್ಯಯ ಮಾಡಬೇಡಿ.** ನಿಮ್ಮ ರಕ್ತಪರೀಕ್ಷೆ ಮಾಡದೇ ಡಾಕ್ಟರರು ಇದನ್ನು ಬರೆದುಕೊಟ್ಟರೆ ಸ್ವೀಕರಿಸಲೂ ಬೇಡಿ.

## ವಿಟಾಮಿನ್ ಬಿ೬
## (Vitamin B6)

ಜನಪ್ರಿಯ ಬ್ರಾಂಡ್: ಬಿ-ಲಾಂಗ (B-Long), ಪ್ರೆಗ್ಡೊಕ್ಸ (Pregdox).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.
ಕ್ಷಯ ರೋಗಿಗಳಿಗೆ ಐಸೋನಿಯಾರಿಝಡ್ ಔಷಧ ನುಂಗುವಾಗ ಅವರಲ್ಲಿ ವಿಟಮಿನ್೬ ಕೊರತೆ ಆಗುತ್ತದೆ. ಕಾರಣ ಐಸೋನಿಯಾರಿಝಡ್ ಜೊತೆ ೧೦ ಮಿ.ಗ್ರಾಂ ವಿಟಮಿನ್ ಬಿ೬ನ್ನು ದಿನಕ್ಕೊಂದರಂತೆ ಸೇವಿಸುವ ಅವಶ್ಯಕತೆ ಬೀಳುತ್ತದೆ. ವಿಟಮಿನ್ ಬಿ೬ ನ ಕೊರತೆ ಆಗಿರುವವರಿಗೆ ಮಾತ್ರ ಅದನ್ನು ಕೊಡಿ. ಸುಮ್ಮನೆ ತೆಗೆದುಕೊಂಡರೆ ಹಣವು ವ್ಯರ್ಥವೇ ಹೊರತು ಇನ್ನೇನೂ ಪ್ರಯೋಜನವೂ ಇಲ್ಲ. ಕೈ ಮತ್ತು ಪಾದಗಳಲ್ಲಿ ಜಿಂಜರಿಕೆ, ಮಾಂಸಖಂಡಗಳ ಕುಣಿಯುವಿಕೆ, ನರದೌರ್ಬಲ್ಯ, ನಿದ್ದೆ ಮಾಡಲಿಕ್ಕಾಗದಿರುವುದು ಇನ್ನೂ ಕೆಲವು ಚಿನ್ಹೆಗಳು ವಿಟಮಿನ್ ಬಿ೬ ನ ಕೊರತೆಯ ಸೂಚನೆ.
**ಪ್ರಮಾಣ:** ಐಸೋನಿಯಾರಿಝಡ್ ಜೊತೆಗೆ, ದಿನಕ್ಕೆ ೧ ಮಿ.ಗ್ರಾಂ ಮಾತ್ರೆ.

## ಆನೆಕಾಲು ರೋಗಕ್ಕೆ
## ಡೈಇಥೈಲ್‌ಕಾರ್ಬಮಝಿನ್ (Diethylcarbamazine)

ಜನಪ್ರಿಯ ಬ್ರಾಂಡ್: ಟ್ರೋಝಾನ್-೧೫೦ (Trozan-150).
ನಿಮ್ಮ ಪ್ರದೇಶದಲ್ಲಿಯ ಬ್ರಾಂಡ್ ಹೆಸರು______ಪ್ರಮಾಣ_____ಬೆಲೆ_______.
ಸಾಮಾನ್ಯವಾಗಿ ೫೦ ಮಿ.ಗ್ರಾಂ ಮಾತ್ರೆಗಳಾಗಿ ಬರುತ್ತದೆ.
**ಅಡ್ಡ ಪರಿಣಾಮ:** ತೀವ್ರವಾದ ಅಲರ್ಜಿ ಪ್ರತಿಕ್ರಿಯೆಗಳು ಆಗಬಹುದು. ಎಂಟಿಹಿಸ್ಟಮೀನ್‌ನಿಂದ ಸ್ವಲ್ಪ ಮಟ್ಟಿಗೆ ಅಲರ್ಜಿ ಪ್ರತಿಕ್ರಿಯೆಯನ್ನು ಹಿಡಿತಕ್ಕೆ ತರಬಹುದು. ಅನುಭವಸ್ಥ ಆರೋಗ್ಯ ಕಾರ್ಯಕರ್ತರ ಸಲಹೆ ಪಡೆಯಿರಿ.
**ಪ್ರಮಾಣ (ಡೋಸ್)**
೬ ಮಿ.ಗ್ರಾಂ/ಕೆ.ಜಿ./ದಿನಕ್ಕೆ
೭-೨೧ ದಿನಗಳ ಕಾಲ, ದಿವಸಕ್ಕೆ ೩ ಬಾರಿ.
ಒಂದು ಡೋಸ್‌ನಲ್ಲಿ: ವಯಸ್ಕರಿಗೆ ೧೫೦ ಮಿ.ಗ್ರಾಂ (೩ ಮಾತ್ರೆಗಳು). ೧೨ ವರ್ಷದೊಳಗಿನವರಿಗೆ ೬ ಮಿ.ಗ್ರಾಂ/ಕೆ.ಜಿ./ದಿನಕ್ಕೆ ಇದನ್ನು ೩ ಡೋಸ್‌ನಲ್ಲಿ ವಿಭಾಗಿಸಿ ಕೊಡಿ.

# ನೀಲಿ ಪುಟಗಳು

## ಹೊಸ ಸಮಸ್ಯೆಗಳು–ಸವಾಲುಗಳು

ವರ್ಷದಿಂದ ವರ್ಷಕ್ಕೆ ಹೊಸ ಹೊಸ ರೋಗಗಳು, ಹೊಸ ಹೊಸ ಆರೋಗ್ಯ ಸಮಸ್ಯೆಗಳು ಮನುಷ್ಯ ಜನಾಂಗವನ್ನು ಕಾಡುತ್ತಲೇ ಇವೆ. ಹಿಂದೆ ಈ ಪುಸ್ತಕವು ಪ್ರಕಟವಾದಾಗ ಇದ್ದ ಆರೋಗ್ಯ ಸಮಸ್ಯೆಗಳ ಜೊತೆಗೆ ಇಂದು ಇನ್ನೂ ಅಷ್ಟು ಸೇರಿಕೊಂಡಿವೆ. ಜೊತೆಗೆ ಆರೋಗ್ಯ ಸೇವೆಯ ವಿಷಯದಲ್ಲಿ ಹೊಸ ಹೊಸ ಸಮಸ್ಯೆಗಳು ಉದ್ಭವಿಸಿವೆ. ಅಂಥವುಗಳಲ್ಲಿ ನಮ್ಮ ಭಾರತಕ್ಕೆ ಪ್ರಸ್ತುತವೆನಿಸಿರುವ ಕೆಲವನ್ನು ಸೇರಿಸಿ **ನೀಲಿ ಪುಟಗಳಲ್ಲಿ** ಹೊಸ ಸಮಸ್ಯೆಗಳು–ಸವಾಲುಗಳು ಎಂದು ಬೇರೆಯದೇ ಅಧ್ಯಾಯ ಮಾಡಿ ಸೇರಿಸುತ್ತಿದ್ದೇವೆ.

ಹೊಸ ಕಾಯಿಲೆಗಳಲ್ಲಿ ಇಡೀ ಜಗತ್ತಿನಲ್ಲಿಯೇ ಅತ್ಯಂತ ಕರಾಳ ರೂಪದಲ್ಲಿ ಹಬ್ಬುತ್ತಿರುವ ಎಚ್.ಐ.ವಿ. /ಏಡ್ಸ್ ಪ್ರಥಮ ಸ್ಥಾನದಲ್ಲಿ ನಿಲ್ಲುತ್ತದೆ. ಪುರುಷ ಪ್ರಧಾನ ಮೌಲ್ಯಗಳಿಂದಾಗಿ ಹೆಣ್ಣು ಮಗುವನ್ನು ಹೆರಲು ಹೆದರುವ ಹಿನ್ನೆಲೆಯಲ್ಲಿ ಇಂದು ಅತ್ಯಂತ ವ್ಯಾಪಕವಾಗಿರುವ ಹೆಣ್ಣು ಭ್ರೂಣ ಹತ್ಯೆ ಮತ್ತು ಗರ್ಭಪಾತಗಳಿಂದ ಆಗುವ ಸಮಸ್ಯೆಗಳು ಇನ್ನೊಂದು ಪ್ರಮುಖ ವಿಷಯ. ಈ ಆರೋಗ್ಯ ಸಮಸ್ಯೆಗಳ ಕುರಿತು ಪುಸ್ತಕದ ಈ ಪುಟಗಳಲ್ಲಿ ಸೇರಿಸುತ್ತಿದ್ದೇವೆ.

### ಎಚ್.ಐ.ವಿ.(HIV)/ ಏಡ್ಸ್ (AIDS)

**ಹ್ಯೂಮನ್ ಇಮ್ಯುನೋ ಡೆಫಿಶಿಯನ್ಸಿ ವೈರಸ್ / ಅಕ್ವಾಯರ್ಡ್ ಇಮ್ಯುನೋ ಡೆಫಿಶಿಯನ್ಸಿ ಸಿಂಡ್ರೋಮ್ – ರೋಗ ಪ್ರತಿರೋಧಕ ಗುಣ ಕಳೆದುಕೊಂಡಂಥ ದೇಹದ ಪರಿಸ್ಥಿತಿ.**

ಎಚ್.ಐ.ವಿ. ವೈರಸ್‌ಗಳು ಸೋಂಕಿದಾಗ ತಗುಲುವ ರೋಗ ಏಡ್ಸ್. ಜಗತ್ತಿನಲ್ಲೆಲ್ಲ ಬಲು ವೇಗದಿಂದ ಒಬ್ಬರಿಂದೊಬ್ಬರಿಗೆ ಹರಡುತ್ತಿದೆ. ಅನೇಕ ಬಡ ದೇಶಗಳಲ್ಲಂತೂ ಜನರ ಜೀವಗಳನ್ನು ತಿನ್ನುವ ಮೊದಲ ಮಾರಕ ಅಸ್ತ್ರ ಇದಾಗಿದೆ. ದೇಹದ ರೋಗ ಪ್ರತಿಬಂಧಕ ಸಾಮರ್ಥ್ಯವನ್ನೇ ಏಡ್ಸ್ ರೋಗಾಣು ಕಡಿಮೆ ಮಾಡಿಬಿಡುತ್ತದೆ. ಏಡ್ಸ್ ತಗುಲಿತ್ತೆಂದರೆ ಆ ವ್ಯಕ್ತಿ ಬಹಳ ಸುಲಭವಾಗಿ ಭೇದಿ, ನ್ಯುಮೋನಿಯಾ, ಕ್ಷಯ, ಚರ್ಮದ ಕ್ಯಾನ್ಸರ್ ಮುಂತಾದ ರೋಗಗಳಿಗೆ ಈಡಾಗಬಹುದು. ಬಹಳ ಸುಲಭವಾಗಿ ಆ ರೋಗಗಳಿಂದ ಸಾಯಬಹುದು.

**ಹರಡುವ ರೀತಿ**

ಏಡ್ಸ್ ಇರುವವರ ರಕ್ತ, ವೀರ್ಯ, ಹೆಣ್ಣಿನ ಯೋನಿಯ ರಸ ಇವುಗಳಲ್ಲಿ ಯಾವುದೇ ಒಂದು ಆರೋಗ್ಯವಂತರ ದೇಹ ಪ್ರವೇಶಿಸಿತೆಂದರೆ ಅವರಿಗೆ ಏಡ್ಸ್ ತಗುಲುತ್ತದೆ.

**ಏಡ್ಸ್ ಹರಡುವ ಮೂರು ಮುಖ್ಯ ರೀತಿ :–**

೧. ಏಡ್ಸ ಇರುವವರೊಂದಿಗೆ ಲೈಂಗಿಕ ಸಂಪರ್ಕ

೨. ಅವರು ಉಪಯೋಗಿಸಿದ ಸೂಜಿಯಿಂದ ಚುಚ್ಚಿಕೊಳ್ಳುವುದು

೩. ಏಡ್ಸ ರೋಗವಿರುವ ತಾಯಿಯ ಗರ್ಭದಿಂದ ಜನಿಸಿದ ಮಗು.

ಏಡ್ಸ್ ಇದೆಯೆಂಬುದು ಹೊರನೋಟಕ್ಕೆ ಗೊತ್ತಾಗದೆ ಇರಬಹುದು. ಕಾರಣ, ನೋಡಲು ಆರೋಗ್ಯವಂತರಾಗಿ ಕಾಣುವವರಿಂದ ಕೂಡ ರೋಗವನ್ನು ಇನ್ನೊಬ್ಬರು ಪಡೆಯಬಹುದು. ದೇಹ ಪ್ರವೇಶಿಸಿದ ಎಷ್ಟೋ ತಿಂಗಳು, ವರ್ಷಗಳ ನಂತರ ರೋಗದ ಮೊದಲ ಚಿನ್ಹೆಗಳು ಕಾಣಹುದು. ಆ ವೇಳೆಯಲ್ಲಿ ಏಡ್ಸ್ ಇರುವ ವ್ಯಕ್ತಿ ರೋಗವನ್ನು ಹರಡುತ್ತಿರುತ್ತಾರೆ. ಹಾಗೆಂದು ನಿತ್ಯ ಭೇಟಿಯಾಗುವುದರಿಂದ, ಮೈ ಮುಟ್ಟುವುದರಿಂದ, ಜೊತೆಯಲ್ಲಿ ಊಟ ಮಾಡುವುದರಿಂದ, ಅವರ ಚಹಾ ಕಪ್ಪುಗಳನ್ನು ಬಳಸುವುದರಿಂದ ಏಡ್ಸ್ ರೋಗ ಹಬ್ಬುವುದಿಲ್ಲ. ಆಹಾರ, ನೀರು, ನೊಣ, ಜಂತು, ಪಾಯಖಾನೆ ಮತ್ತು ಚಹಾದ ಲೋಟ ಇವುಗಳಿಂದ ರೋಗವು ಹರಡುವುದಿಲ್ಲ.

**ಲಕ್ಷಣಗಳು:**

ಇಂಥವೇ ಲಕ್ಷಣಗಳು ಎಂದಿಲ್ಲ. ಎಲ್ಲ ಏಡ್ಸ್ ರೋಗಿಗಳಿಗೂ ಒಂದೇ ರೀತಿಯ ಲಕ್ಷಣ ಕಾಣುವುದಿಲ್ಲ. ಬದಲಿಗೆ ಸಾಮಾನ್ಯ ರೋಗಗಳು ಕಾಣಿಸಿಕೊಳ್ಳಬಹುದು.

೧. ಬಂದ ರೋಗ ಕಡಿಮೆಯೇ ಆಗದಿರುವುದು

೨. ಮತ್ತೆ ಮತ್ತೆ ಇನ್ನೂ ಜೋರಾಗಿ ಬರುವುದು

೩. ಬಂದು ಬಹುಕಾಲ ಉಳಿಯುವುದು.

ಏಡ್ಸ್ ಇರಬಹುದೆಂದು ನೀವು ವಿಚಾರ ಮಾಡಲು ಇವು ಕೆಲವು ಸಾಮಾನ್ಯ ಲಕ್ಷಣಗಳು. **ರಕ್ತ ಪರೀಕ್ಷೆ ಮಾಡಿಸಿ ಖಾತ್ರಿ ಮಾಡಿ ಕೊಳ್ಳಿ.**

ಈ ಮೂರು ಲಕ್ಷಣಗಳು ಒಟ್ಟಿಗೆ ಕಾಣುತ್ತವೆ:–

೧. ದೇಹದ ತೂಕ ದಿನದಿಂದ ದಿನಕ್ಕೆ ಕ್ರಮೇಣ ಕಡಿಮೆಯಾಗುತ್ತಿರುವದು. ದಿನದಿನಕ್ಕೆ ರೋಗಿ ಸೊರಗುತ್ತಿರುತ್ತಾನೆ.

೨. ಒಂದು ತಿಂಗಳಿಗಿಂತ ಹೆಚ್ಚಾಗಿ ಇರುವ ಭೇದಿ.

೩. ಒಂದು ತಿಂಗಳಿಗಿಂತ ಹೆಚ್ಚಾಗಿ ಇರುವ ಜ್ವರ, ಕೆಲವೊಮ್ಮೆ ಛಳಿಜ್ವರ ಬರುತ್ತಿರಬಹುದು, ರಾತ್ರಿ ಚೆನ್ನಾಗಿ ಮೈ ಬೆವರಬಹುದು.

**ಇಷ್ಟಲ್ಲದೆ ರೋಗಿ ಈ ಕೆಳಗಿನ ಚಿನ್ಹೆಗಳಲ್ಲಿ ಯಾವುದಾದರೊಂದನ್ನು ತೋರಿಸಬಹುದು:–**

೧. ತಿಂಗಳಿಗಿಂತ ಹೆಚ್ಚು ಕಾಲ ಇರುವ ಕೆಮ್ಮು.

೨. ಬಾಯಲ್ಲಿ ಯೀಸ್ಟ್‌ನ ಸೋಂಕು.

೩. ದೇಹದ ಯಾವುದೇ ಭಾಗದಲ್ಲಿ ಹಾಲ್ರಸ ಗ್ರಂಥಿಗಳು ದಪ್ಪವಾಗಿರುವುದು.

೪. ದೇಹದ ಯಾವುದೇ ಭಾಗದಲ್ಲಿ ಚರ್ಮವು ಬಣ್ಣಗೆಟ್ಟು ಕಪ್ಪಾಗಿರುವುದು.

೫. ಲೈಂಗಿಕ ಅಂಗಗಳ ಸುತ್ತ ಮತ್ತು ಕುಂಡೆಯ ಮೇಲೆ ಪದೇ ಪದೇ ಕಾಣಿಸಿಕೊಳ್ಳುವ ನರೂಲಿ ಅಥವಾ ಹುಣ್ಣು.

೬. ಯಾವಾಗ ನೋಡಿದರೂ ಸುಸ್ತಾಗಿರುವುದು.

ಏಡ್ಸ್ ಇರುವವರಿಗೆ ಕ್ಷಯವು ಸಾಮಾನ್ಯವಾಗಿ ಕಾಡುವ ಒಂದು ಕಾಯಿಲೆ.

**ಚಿಕಿತ್ಸೆ**

ಏಡ್ಸ್ ರೋಗ ಗುಣಪಡಿಸಲು ಔಷಧ ಇನ್ನೂ ಬಂದಿಲ್ಲ. ಇವರು ಒಂದಲ್ಲಾ ಒಂದು ರೋಗಗಳಿಂದ ನರಳುತ್ತಿರುವುದರಿಂದ ಆಯಾ ರೋಗಗಳ ಚಿಕಿತ್ಸೆಯನ್ನು ಮಾಡುತ್ತಿರಬೇಕಷ್ಟೇ.

- ಭೇದಿಯಾಗುತ್ತಿದ್ದರೆ ಜೀವನ ಜಲವನ್ನು ಕುಡಿಯಲು ಸತತ ಕೊಡುತ್ತಿರಿ.
- ಬಾಯಲ್ಲಿ ಯೀಸ್ಟಿನ ಸೋಂಕು ತಗುಲಿದ್ದರೆ ಜೆಂಶಿನ್ ವೈಯೋಲೆಟ್ ಹಾಗು ನಿಸ್ಟಾಟಿನ್ ಮಾತ್ರೆಗಳನ್ನು ಉಪಯೋಗಿಸಿ ಸ್ವಚ್ಛ ಮಾಡುತ್ತಿರಿ.
- ನರೂಲಿ ಅಥವಾ ಹುಣ್ಣುಗಳಾಗಿದ್ದರೆ ಬೈಕ್ಲೋರೋ ಅಸಿಟಿಕ್ ಆಸಿಡ್ ಅಥವಾ ಟ್ರೈಕ್ಲೋರೋ ಅಸಿಟಿಕ್ ಆಸಿಡ್ (೪೨೩ ನೇ ಪುಟ ನೋಡಿ) ಅಥವಾ ಪೊಡೋಫಿಲಿನ್‌ಗಳನ್ನು (೪೨೩ ನೇ ಪುಟ ನೋಡಿ) ಉಪಯೋಗಿಸಿ.
- ಜ್ವರ ಬರುತ್ತಿದ್ದರೆ ಬಹಳಷ್ಟು ನೀರು ಕೊಡಿ, ಕಡಿಮೆ ಜ್ವರವಿದ್ದರೆ ಆಸ್ಪಿರಿನ್‌ನ್ನೂ, ಜೋರು ಜ್ವರವಿದ್ದರೆ ತಣ್ಣೀರ ಬಟ್ಟೆ ಸುತ್ತುವುದನ್ನೂ ಮಾಡಿ.
- ಕೆಮ್ಮು, ನ್ಯುಮೋನಿಯಾಗಳಿಗೆ ಜೀವಿರೋಧಕಗಳ ಚಿಕಿತ್ಸೆ ಮಾಡಿ. ಕೆಮ್ಮು ಮತ್ತು ಜ್ವರವು ಹಾಗೆಯೇ ಮುಂದುವರೆದರೆ ಕ್ಷಯವಿದೆಯೇ ಪರೀಕ್ಷೆ ಮಾಡಿಸಿ. ಏಡ್ಸ್ ಇರುವವರಿಗೆ ಕ್ಷಯ ಬಾರದಂತೆ ಮತ್ತು ಬಂದರೆ ಮಾಡಬೇಕಾದ ಚಿಕಿತ್ಸೆಯ ಬಗ್ಗೆ ಆರೋಗ್ಯ ಕಾರ್ಯಕರ್ತರ ಜೊತೆ ಮಾತನಾಡಿ.
- ಚರ್ಮವು ಬಹಳ ತುರಿಸುತ್ತಿದ್ದರೆ ಎಂಟಿ ಹಿಸ್ಟಮೀನ್‌ಗಳನ್ನು ಕೊಡಿ. ಇನ್ನಾವುದೇ ಸೋಂಕು ತಗುಲಿದ್ದರೆ ಅದಕ್ಕೆ ಚಿಕಿತ್ಸೆ ಮಾಡಿ.
- ಆದಷ್ಟೂ ಆರೋಗ್ಯವಾಗಿರಲು ಪ್ರಯತ್ನಿಸಿ. ಚೆನ್ನಾಗಿ ತಿಂದುಂಡು ಮಾಡಬೇಕು. ಶೆರೆ ಕುಡಿಯಬಾರದು, ಚಟ ಮಾಡಬಾರದು, ತಂಬಾಕು ಅಗಿಯಬಾರದು. ಒಳ್ಳೆಯ ವಿಶ್ರಾಂತಿ, ನಿದ್ದೆ ಮಾಡುತ್ತಿರಬೇಕು. ಒಟ್ಟಾರೆ ಯಾವುದೇ ರೋಗ ಸನಿಹ ಸುಳಿಯದಂತೆ ಸದಾ ಎಚ್ಚರಿಕೆಯಿಂದ ದೇಹವನ್ನು ಕಾಯ್ದುಕೊಳ್ಳುತ್ತಿರಬೇಕು. ಲೈಂಗಿಕ ಸಂಪರ್ಕ ಮಾಡುವಾಗ ಕಂಡೋಮ್‌ಗಳನ್ನು ಉಪಯೋಗಿಸಬೇಕು.

ಈಗ ಎಂಟಿ ರೆಟ್ರೊವೈರಲ್ಸ್ (ಎ.ಆರ್.ವಿ)ಗಳು ಏಡ್ಸ್ ಚಿಕಿತ್ಸೆಗಾಗಿ ಬಂದಿವೆ. ಝಿಡೋವುಡೀನ್, ನೆವಿರಪೀನ್

ಮತ್ತು ಬೇರೆ ಬೇರೆ ಔಷಧಗಳ ಸಂಯುಕ್ತಗಳ ಟ್ರಿಪಲ್ ಥೆರಪಿಗಳು ಬಂದಿವೆ. ಆದರೆ ಇವು ಯಾವವೂ ರೋಗಾಣುಗಳನ್ನು ಕೊಲ್ಲುವುದಿಲ್ಲ, ರೋಗವನ್ನು ಗುಣ ಮಾಡುವುದಿಲ್ಲ. ಬದಲಿಗೆ ಏಡ್ಸ್ ಇದ್ದ ವ್ಯಕ್ತಿಯು ಯಾವುದೇ ಸಾಮಾನ್ಯ ರೋಗ ಬಾರದಂತೆ ತಡೆದುಕೊಂಡು ಆರೋಗ್ಯವಾಗಿ ಹೆಚ್ಚು ಕಾಲ ಬದುಕಿರಲು ಸಹಾಯ ಮಾಡುತ್ತವಷ್ಟೇ. ಆದರೆ ಸಮಸ್ಯೆಯೆಂದರೆ ಈ ಔಷಧಗಳೆಲ್ಲ ಅತೀ ದುಬಾರಿಯಾಗಿದ್ದು ಜನಸಾಮಾನ್ಯರ ಕೈಗೆಟುಕದಂತಿವೆ. ಶ್ರೀಮಂತ ದೇಶಗಳ ದೊಡ್ಡ ದೊಡ್ಡ ಕಂಪನಿಗಳು ಈ ಔಷಧಗಳನ್ನೆಲ್ಲ ಪೇಟೆಂಟ್ ಮಾಡಿಟ್ಟುಕೊಂಡಿದ್ದು ಔಷಧಗಳ ಬೆಲೆಯನ್ನು ಏರಿಸಿ ಕುಳಿತಿವೆ. ಬಡ ದೇಶಗಳ ಬಡ ರೋಗಿಗಳ ಕೈಗೆ ಅವು ನಿಲುಕುತ್ತಿಲ್ಲ. ನಿಮ್ಮಲ್ಲಿ ಇವು ಸಿಗುತ್ತವೆಯೇ ವಿಚಾರಿಸಿ.

**ಏಡ್ಸ್ ಇರುವಂಥ ತಾಯಿ ಗರ್ಭಿಣಿಯಾದರೆ,**

ಹೆಣ್ಣುಮಗಳಿಗೆ ಏಡ್ಸ್ ಇತ್ತೆಂದರೆ ಆಕೆ ಗರ್ಭಿಣಿಯಾದಾಗ ತನ್ನ ಮಗುವಿಗೆ ರೋಗವನ್ನು ದಾಟಿಸುತ್ತಾಳೆ. ಆದರೆ ನೆವಿರಪೀನ್ ಎಂಬ ಔಷಧವು ಗರ್ಭದೊಳಗಿನ ಶಿಶುವಿಗೆ ರೋಗ ತಗುಲದಂತೆ ರಕ್ಷಿಸಬಲ್ಲದು.

ಆ ತಾಯಿಯು ಹೆರಿಗೆ ನೋವು ಆರಂಭವಾಗುತ್ತಲೇ ೨೦೦ ಮಿ.ಗ್ರಾಂ ನೆವಿರಪೀನ್ ಮಾತ್ರೆಯನ್ನು ನುಂಗಬೇಕು. ಅಕಸ್ಮಾತ್ ಅದು ಸಾಧ್ಯವಾಗದಿದ್ದರೆ ಮಗು ಹುಟ್ಟಿದ ೭ ದಿವಸದೊಳಗಾಗಿ ಅದಕ್ಕೆ ಕೆ.ಜಿ.ಗೆ ೨ ಗ್ರಾಂ ನಂತೆ ನೆವಿರಪೀನ್‌ನ್ನು ದ್ರಾವಣ ಮಾಡಿ ಕೊಡಿ. ಎಷ್ಟು ಬೇಗ ಸಾಧ್ಯವೋ ಅಷ್ಟು ಒಳ್ಳೆಯದು.

**ಏಡ್ಸ್ ರೋಗಿಗಳು ಒಬ್ಬಂಟಿಯಾಗಿ ಮಲಗುವ ಅವಶ್ಯಕತೆ ಇಲ್ಲ. ಅವರ ಚರ್ಮದ ಮೂಲಕವಾಗಲೀ ಅಥವಾ ಉಸಿರಾಟದ ಮೂಲಕವಾಗಲೀ ರೋಗವು ಇನ್ನೊಬ್ಬರಿಗೆ ಹರಡುವುದಿಲ್ಲ.**

ರೋಗವು ತೀವ್ರವಾಗಿದ್ದಾಗ ಮನೆಯವರು ಮತ್ತು ಮಿತ್ರರು ರೋಗಿಗೆ ಪ್ರೀತಿಯ ಆಸರೆ ಕೊಡುವುದು ಬಹಳ ಅವಶ್ಯವಿದೆ. ಏಡ್ಸ್ ಆದ ರೋಗಿಗಳನ್ನು ಕಡೆಗಣಿಸಬಾರದು.

**ಏಡ್ಸ್ ತಡೆ**

- ಒಂದೇ ಜೀವನ ಸಂಗಾತಿಯಿರಲಿ.
- ನಿಮ್ಮಿಬ್ಬರಲ್ಲಿ ಯಾರೊಬ್ಬರಿಗೆ ಏಡ್ಸ್ ಇರಬಹುದೆಂಬ ಸಂಶಯವಿದ್ದರೂ ಲೈಂಗಿಕ ಸಂಪರ್ಕ ಮಾಡುವಾಗ ಕಂಡೋಮ್‌ಗಳನ್ನು ಬಳಸಿ. **ಕಂಡೋಮ್‌ಗಳ ಬಳಕೆ ಮಾತ್ರವೇ ರೋಗದ ಸಾಧ್ಯತೆಯನ್ನು ಕಡಿಮೆ ಮಾಡಬಲ್ಲದು.**
- ಬೇರೆ ಬೇರೆ ಜನರ ಜೊತೆ ಮಲಗುವ ವ್ಯಕ್ತಿಯೊಂದಿಗೆ (ಹೆಣ್ಣು ಅಥವಾ ಗಂಡು ಸೂಳೆ) ಎಂದೂ ಲೈಂಗಿಕ ಸಂಪರ್ಕ ಮಾಡಬೇಡಿ. ಡ್ರಗ್ಸ್ ತೆಗೆದುಕೊಳ್ಳುವವರ ಜೊತೆ ಕೂಡ ಲೈಂಗಿಕ ಸಂಪರ್ಕ ಸಲ್ಲದು.
- ಯಾವುದೇ ಲೈಂಗಿಕ ರೋಗವಾಗಲೀ ಅದನ್ನು ಬೇಗ ಚಿಕಿತ್ಸೆಗೊಳಪಡಿಸಿ. ಲೈಂಗಿಕ ಹುಣ್ಣುಗಳು ಕಾಣಿಸಿಕೊಂಡರಂತೂ ತಡ ಮಾಡಲೇಬಾರದು.
- ಅತ್ಯವಶ್ಯಕತೆ ಇಲ್ಲದೆ ಇಂಜೆಕ್ಷನ್‌ನ್ನು ಎಂದೂ ತೆಗೆದುಕೊಳ್ಳಬೇಡಿ. ಆವಶ್ಯಕವಿದ್ದು ತೆಗೆದುಕೊಳ್ಳುವಾಗಲೂ ಸಹ ಸೂಜಿಯನ್ನು ನೀರಲ್ಲಿ ಚೆನ್ನಾಗಿ ಕುದಿಸಿ ಶುದ್ದೀಕರಿಸಿದ್ದರೆ ಮಾತ್ರ ತೆಗೆದುಕೊಳ್ಳಬಹುದು. **ಆರೋಗ್ಯ ಕಾರ್ಯಕರ್ತರು ಒಮ್ಮೆ ಉಪಯೋಗಿಸಿದ ಸೂಜಿ ಮತ್ತು ಸಿರಿಂಜನ್ನು ಕುದಿಸಿ ಶುದ್ಧ ಮಾಡದೇ ಎಂದೂ ಉಪಯೋಗಿಸಲೇಕೂಡದು.**
- ತೆರೆದ ಹುಣ್ಣು, ರಕ್ತ, ರಕ್ತಸಿಕ್ತ ಭೇದಿ, ರಕ್ತಸಿಕ್ತ ವಾಂತಿ ಇವೆಲ್ಲವೂ ವೈರಾಣುಗಳನ್ನು ಹರಡಬಹುದು. ಕಾರಣ ಅವನ್ನು ಕೈಯಿಂದ ಮಟ್ಟದೆ ಪ್ಲಾಸ್ಟಿಕ್ ಕೈಚೀಲಗಳನ್ನು ಹಾಕಿಕೊಂಡೇ ಕೆಲಸ ಮಾಡಿ. ಮತ್ತೆ ಮತ್ತೆ ಕೈಗಳನ್ನು ತೊಳೆದುಕೊಳ್ಳಿ.
- ರಕ್ತಸಿಕ್ತ ಬಟ್ಟೆಗಳನ್ನು, ಹಾಸಿಗೆಗಳನ್ನು, ಟವೆಲ್‌ಗಳನ್ನು ಬಿಸಿ ಸೋಪು ನೀರಲ್ಲಿ ತೊಳೆದು ಕ್ಲೋರಿನ್ ಹಾಕಿ ಬ್ಲೀಚ್ ಮಾಡಿ.

ಏಡ್ಸ್ ಇರುವವರಿಗೆ ಅತಿಯಾದ ಜ್ವರ, ಭೇದಿ, ನೋವುಗಳಿದ್ದರೆ ಹೆಚ್ಚಿನ ಕಾಳಜಿ ತೆಗೆದುಕೊಳ್ಳಬೇಕಾಗುತ್ತದೆ. ಅದು ಸಾಧ್ಯ. ಏಡ್ಸ್ ಹರಡದಂತೆ ತಡೆಯಲು ಇನ್ನೂ ಹೆಚ್ಚಿನ ಕೆಲವು ಕೆಲಸಗಳಾಗಲೇಬೇಕು. ಅವೆಂದರೆ,

- ಮಾದಕ ಔಷಧಗಳನ್ನು ಚುಚ್ಚಿಕೊಳ್ಳುವುದು ತಪ್ಪು. ಹಾಗೆ ಚುಚ್ಚಿಕೊಳ್ಳುವವರಿದ್ದರೆ ಎಂದೂ ಇನ್ನೊಬ್ಬರು ಉಪಯೋಗಿಸಿದ ಸೂಜಿಯನ್ನು ಕನಿಷ್ಟ ೨೦ ನಿಮಿಷಗಳ ಕಾಲ ಕುದಿಸದೆ ಉಪಯೋಗಿಸಬಾರದು.

- ಕಿವಿ, ಮೂಗು ಚುಚ್ಚುವುದು, ಕೆಲವು ಜಾತಿಗಳಲ್ಲಿ ಜಾರಿಯಲ್ಲಿ ಇರುವ ಗಂಡು ಮಗುವಿನ ಲೈಂಗಿಕ ಅಂಗದ ತುದಿಯನ್ನು ಕತ್ತರಿಸುವುದು, ಮುಂತಾದ ಸಾಂಪ್ರದಾಯಿಕ ಪದ್ದತಿಗಳ ಆಚರಣೆಯಲ್ಲಿ ದೇಹದೊಳಗೆ ಚುಚ್ಚುವ ಯಾವುದೇ ರೀತಿಯ ಸಾಧನಗಳು ಶುದ್ದೀಕರಿಸಿವೆಯೇ ನೋಡಿಕೊಳ್ಳಿ. ದೇಹಕ್ಕೆ ಬೇರೆಯವರ ರಕ್ತವನ್ನು ಅತ್ಯಂತ ಅವಶ್ಯಕತೆ ಇಲ್ಲದೆ ತೆಗೆದುಕೊಳ್ಳಬಾರದು.

- ನಮ್ಮ ಸುತ್ತ ಇರುವ ಬೀದಿ ಮಕ್ಕಳು, ಚಿಂದಿ ಆಯುವವರು, ಅಲೆಮಾರಿ ಜನರು, ಮಾದಕ ಡ್ರಗ್ ಬಳಸುವವರು, ವೇಶ್ಯೆಯರು, ಮುಂತಾದ ಅತ್ಯಧಿಕ ಅಪಾಯದಲ್ಲಿರುವ ಗುಂಪಿನ ಜನರನ್ನು ಏಡ್ಸ್ ಬಗ್ಗೆ ಎಚ್ಚರಿಸುವ ಪ್ರಯತ್ನ ಮಾಡಿ.

- ಏಡ್ಸ್‌ನ ತಡೆಗೆ ಸಾಮಾಜಿಕ ಸಮಾನತೆಯೂ ಮುಖ್ಯ ಸಾಧನವಾಗಿ ಕೆಲಸ ಮಾಡಬಲ್ಲದು. ಗಂಡಸರು ಕೆಲಸ ಹುಡುಕಿಕೊಂಡು ಕುಟುಂಬವನ್ನು ತೊರೆದು ದೂರ ದೂರ ಸಾಗಿ ಹೋಗಬೇಕಾದ ಪ್ರಸಂಗ ಬಾರದಿದ್ದರೆ ವೇಶ್ಯಾವಾಟಿಕೆ ಹೆಚ್ಚಲಿಕ್ಕಿಲ್ಲ. ವೇಶ್ಯಾಗೃಹಗಳಿಗೆ ಹೋಗುವ ಪ್ರಸಂಗಗಳು ಕಡಿಮೆಯಾದರೆ ಏಡ್ಸ್ ಹರಡುವುದೂ ತಾನೇ ಕಡಿಮೆಯಾಗುತ್ತದೆ.

**ಏಡ್ಸ್ ರೋಗಿಗಳೊಂದಿಗೆ ಕರುಣೆಯಿಂದ ವರ್ತಿಸಿ.**

## ಏಡ್ಸ್‌ನ ಜಾಗತಿಕ ಮುಖಗಳು

ಏಡ್ಸ್ ರೋಗವು ಆಫ್ರಿಕಾದಲ್ಲಿ ಮೊಟ್ಟ ಮೊದಲಿಗೆ ಶುರುವಾಯಿತು ಎನ್ನುತ್ತಾರೆ. ಪ್ರಾಣಿಗಳಿಂದ ಮನುಷ್ಯರಿಗೆ ತಗುಲಿದ ಕಾಯಿಲೆ ಇದು. ಮುಂದೆ ಅಮೆರಿಕಾ, ಯುರೋಪುಗಳಿಗೂ ಅತಿ ವೇಗವಾಗಿ ಹಬ್ಬಿದ ಕಾಯಿಲೆ. ಅಲ್ಲಿನ ಪ್ರವಾಸಿಗಳಿಂದ ಏಶಿಯಾದ ದೇಶಗಳಿಗೂ ಕಾಲಿಟ್ಟಿತು. ಇಂದು ಏಡ್ಸ್ ಇಲ್ಲದ ದೇಶವಿಲ್ಲ.

ಲೈಂಗಿಕ ಸಂಪರ್ಕ ಮತ್ತು ಡ್ರಗ್‌ಗಳ ಅತಿ ಬಳಕೆಯಿಂದ ಹಬ್ಬುವ ರೋಗವಿದು. ಅಮೆರಿಕಾ ಯುರೋಪುಗಳಲ್ಲಿ ಜನಸಾಮಾನ್ಯರಿಗೆಲ್ಲ ರೋಗದ ಮಾಹಿತಿಯನ್ನು ಕೊಟ್ಟು, ಪ್ರಚಾರ ಮಾಡಿ, ಪ್ರತಿಬಂಧಕ ಕ್ರಮಗಳನ್ನು ಜಾರಿಯಲ್ಲಿ ತಂದು ರೋಗವನ್ನು ಹತೋಟಿಗೆ ತಂದರು. ಅಷ್ಟರಲ್ಲಿಯೇ ರೋಗವನ್ನು ನಿಯಂತ್ರಣದಲ್ಲಿಡುವ ಔಷಧವನ್ನು ಕಂಡುಹಿಡಿದು ಪರಿಚಯಿಸಿದರು. ಇಂದು ಅಮೆರಿಕಾ ಯುರೋಪುಗಳಲ್ಲಿ ಏಡ್ಸ್ ರೋಗವು ನಿಯಂತ್ರಣದಲ್ಲಿದೆ.

ಬಡದೇಶಗಳಲ್ಲಿ ಒಂದೆನಿಸಿದ ಬ್ರೆಝಿಲ್ ದೇಶವು ಕೂಡ ಏಡ್ಸ್ ವಿರುದ್ದ ದೊಡ್ಡದೊಂದು ಸಮರವನ್ನೇ ಸಾರಿತು. ಅಲ್ಲಿನ ಔಷಧ ಕಂಪನಿಗಳು ಔಷಧಗಳನ್ನು ತಯಾರು ಮಾಡಿ ಅವನ್ನು ದೇಶದ ತುಂಬೆಲ್ಲ ಪುಕ್ಕಟೆ ಹಂಚುತ್ತಿವೆ. ದೇಶದ ಮೂಲೆ ಮೂಲೆಗೂ ಏಡ್ಸ್ ಜಾಗೃತಿಯಾಗಿ ಜನರಿಗೆಲ್ಲ ಔಷಧವು ಲಭ್ಯವಾಗಿ ಇಂದು ಏಡ್ಸ್‌ನ್ನು ನಿಯಂತ್ರಣಕ್ಕೆ ತಂದಿರುವ ಏಕೈಕ ಬಡದೇಶ ಬ್ರೆಝಿಲ್.

ಆಫ್ರಿಕಾ ಖಂಡದಲ್ಲಿ ಬಡತನ ಹಾಗು ಅನಕ್ಷರತೆಗಳು ಇಂದಿಗೂ ತಾಂಡವವಾಡುತ್ತದೆ. ಇಲ್ಲಿ ಏಡ್ಸ್ ರೋಗವು ಅತಿ ಜೋರಾದ ಆಕ್ರಮಣ ನಡೆಸಿದೆ. ದಕ್ಷಿಣ ಅಫ್ರಿಕಾ, ಉಗಾಂಡಾ, ಕೀನ್ಯಾ ದೇಶಗಳಲ್ಲಿ ಜನರ ಸಾವಿನ ಸಂಖ್ಯೆ ಮಿತಿ ಮೀರಿದೆ. ಅಲ್ಲಿನ ಹೆಚ್ಚಿನ ಜನರಿಗೆ ಮಾಹಿತಿಯೂ ಸಿಗುತ್ತಿಲ್ಲ. ಪ್ರತಿಬಂಧಕೋಪಾಯಗಳೂ ಸಾಮಾನ್ಯವಾಗಿ ಗೊತ್ತಿಲ್ಲ ಮತ್ತು ಔಷಧವಂತೂ ಬಹಳಷ್ಟು ಜನರಿಗೆ ಇಲ್ಲವೇ ಇಲ್ಲ. ದೇಶದ ಬೆನ್ನೆಲುಬಾದ, ದುಡಿಯುವ ಜನತೆ ಪೂರ್ಣವಾಗಿ ಅಳಿಸಿ ಹೋಗುತ್ತಿದೆ.

ಆಫ್ರಿಕಾದಲ್ಲಿ ಅಥವಾ ಜಗತ್ತಿನ ಬಹು ಭಾಗಗಳಲ್ಲಿ ಏಡ್ಸ್ ಔಷಧಗಳು ಸಿಗದಿರುವುದಕ್ಕೆ ಮೂಲ ಕಾರಣವೆಂದರೆ ಅಮೆರಿಕಾ ಮತ್ತು ಯುರೋಪಿನ ಔಷಧ ಕಂಪನಿಗಳು ಆ ಔಷಧವನ್ನು ಪೇಟೆಂಟ್ ಮಾಡಿಟ್ಟುಕೊಂಡಿರುವುದು. ಅಲ್ಲಿನ

ಪೇಟೆಂಟಿನ ಕಾರಣದಿಂದಾಗಿ ಬೇರೆ ಕಂಪನಿಗಳಿಗೆ ಆ ಔಷಧ ತಯಾರಿಸಲು ಪರವಾನಿಗಿ ಇಲ್ಲ, ಆ ಕಂಪನಿಗಳಿಗೆ ಸ್ಪರ್ಧೆಯೇ ಇಲ್ಲವಾದ್ದರಿಂದ ಅವು ಔಷಧಗಳ ಬೆಲೆಯನ್ನು ಗಗನಕ್ಕೇರಿಸಿ ಕುಳಿತಿವೆ. **ಒಬ್ಬ ರೋಗಿಯ ಒಂದು ವರ್ಷದ ಔಷಧದ ಬೆಲೆ ೧೫,೦೦೦ ಡಾಲರುಗಳು ಅಂದರೆ ಸುಮಾರು ೬೦,೦೦೦ ರೂಪಾಯಿಗಳು!** ಬಡದೇಶದ ಯಾವುದೇ ವ್ಯಕ್ತಿಗೂ ಜೀವನ ಪರ್ಯಂತ ಇಂಥ ದುಬಾರಿ ಔಷಧವನ್ನು ಖರೀದಿಸಿ ಸೇವಿಸುವುದು ಸಾಧ್ಯವೇ ಇಲ್ಲ.

ಭಾರತದ ಪೇಟೆಂಟ್ ಕಾಯಿದೆಯೊಳಗಡೆ ಅದೇ ಔಷಧವನ್ನು ಬೇರೆ ರೀತಿಯಲ್ಲಿ ಭಾರತದಲ್ಲಿ ತಯಾರಿಸಲು ಬರುತ್ತದೆ. ದಕ್ಷಿಣ ಆಫ್ರಿಕಾ ಸರಕಾರವು ಭಾರತದ ಸಿಪ್ಲಾ ಎಂಬ ಕಂಪನಿಯು ತಯಾರಿಸಿದ ಔಷಧಗಳನ್ನು ತರಿಸಿಕೊಂಡಿತು. ಔಷಧಗಳ ಬೆಲೆಯನ್ನು ಮಾನವೀಯ ದೃಷ್ಟಿಯಿಂದ ಭಾರತದ ಕಂಪನಿಯು ೩೫೦ ಡಾಲರಿಗೆ ಇಳಿಸಿತ್ತು. ಆದರೆ ಇದಕ್ಕೆ ಸಿಟ್ಟಿಗೆದ್ದ ಬಹುರಾಷ್ಟ್ರೀಯ ಕಂಪನಿಗಳು ದಾವೆ ಹೂಡಿದವು. ತಾವು ಪೇಟೆಂಟ್ ಮಾಡಿಟ್ಟುಕೊಂಡ ಔಷಧಗಳನ್ನು ತಮ್ಮ ಬಳಿ ಖರೀದಿಸದೇ ಬೇರೊಂದು ದೇಶದ ಕಂಪನಿಯಿಂದ, ಅದೂ ಕಡಿಮೆ ಬೆಲೆಗೆ ಖರೀದಿಸಿದ್ದು ಈ ದಾವೆಗೆ ಕಾರಣ.

ಆಫ್ರಿಕಾದ ಏಡ್ಸ್ ಜಾಗತಿಕವಾಗಿ ಬಹಳಷ್ಟು ಸುದ್ದಿ ಮಾಡಿತು. ಆವಶ್ಯಕ ಔಷಧಗಳು ಜನರಿಗೆ ಸಿಗುವಂತೆ ಮಾಡುವುದು ಮುಖ್ಯವೇ? ಅಥವಾ ಶ್ರೀಮಂತ ಕಂಪನಿಗಳ ಪೇಟೆಂಟ್ ಮತ್ತು ಲಾಭ ಮುಖ್ಯವೇ? ಎಂಬ ವಿಷಯಗಳನ್ನು ಬಹುವಾಗಿ ಚರ್ಚೆಗೆ ತಂದಿತು. ಔಷಧಗಳನ್ನು ಪೇಟೆಂಟ್ ಮಾಡಿಟ್ಟುಕೊಳ್ಳುವುದನ್ನು ಬೆಂಬಲಿಸುವ ವಿಶ್ವ ವ್ಯಾಪಾರ ಸಂಸ್ಥೆಯ ಉದ್ದೇಶವನ್ನೇ ಹೀಗಳೆಯಲಾಯ್ತು. ಇದರಿಂದಾಗಿ ಜಾಗತೀಕರಣಕ್ಕೆ ವಿರೋಧ ಜಾಸ್ತಿಯಾಯ್ತು.

## ಭಾರತದಲ್ಲಿ ಏಡ್ಸ್ ರೋಗ

ಭಾರತದಲ್ಲಿಯೂ ಏಡ್ಸ್ ರೋಗವು ಕಾಡಿನ ಬೆಂಕಿಯಂತೇ ವೇಗವಾಗಿ ಎಲ್ಲೆಡೆ ಹಬ್ಬುತ್ತಿದೆ. ಅತ್ತ ಈಶಾನ್ಯದ ಮಣಿಪುರ, ನಾಗಲ್ಯಾಂಡ್, ಇತ್ತ ಪಶ್ಚಿಮದ ಮುಂಬಯಿಗಳಿಂದ ರೋಗವು ದೇಶವನ್ನು ಪ್ರವೇಶಿಸಿದ್ದು ಎಲ್ಲಾ ಕಡೆ ಪಸರಿಸುತ್ತಿದೆ. ೨೦೧೦ರ ವೇಳೆಗೆ ಜಗತ್ತಿನಲ್ಲಿಯೇ ಅತಿ ಹೆಚ್ಚು ಏಡ್ಸ್ ರೋಗಿಗಳಿರುವ ದೇಶವಾಗಿ ಭಾರತ ನಿಲ್ಲಲಿದೆ. ಇಲ್ಲಿ ಏಡ್ಸ್ ರೋಗದ ಬಗ್ಗೆ, ಅದರ ಪ್ರತಿಬಂಧಕೋಪಾಯಗಳ ಬಗ್ಗೆ ಸಾಕಷ್ಟು ಪ್ರಚಾರ, ಆಂದೋಲನಗಳಿದ್ದರೂ ಕೂಡ ಔಷಧವು ನಮ್ಮಲ್ಲಿಯೂ ಜನರ ಕೈಗೆಟಕುತ್ತಿಲ್ಲ.

ಏಡ್ಸ್ ರೋಗದ ಸಮಸ್ಯೆಯು ಮುಖವೇ ಬೇರೆ. ಲೈಂಗಿಕ ಸಂಪರ್ಕ ಮತ್ತು ಮಾದಕ ಔಷಧಗಳ ಚುಚ್ಚಿಕೊಳ್ಳುವುದರಿಂದ ಬರುವ ರೋಗ ಇದಾದುದರಿಂದ ಇದೊಂದು ಹೇಳಿಕೊಳ್ಳಲು ನಾಚಿಕೆ ಬರುವ ರೋಗ. ಇಲ್ಲಿ ಯಾರೂ ತನಗೆ ಏಡ್ಸ್ ಇರಬಹುದೆಂದು ಹೇಳಿಕೊಳ್ಳುವಂತಿಲ್ಲ. ಗೊತ್ತಾದರೆ ಕೆಲಸದಿಂದ ಹೊರತೆಗೆಯುತ್ತಾರೆ, ಏಡ್ಸ್ ಇರುವವರ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುವುದಿಲ್ಲ. ಅಷ್ಟೇ ಏನು, ಏಡ್ಸ್ ಇರುವ ರೋಗಿಗಳಿಗೆ ಆಸ್ಪತ್ರೆಯಿಂದಲೂ ಹೊರಹಾಕುತ್ತಾರೆ, ಡಾಕ್ಟರಗಳು ಮುಟ್ಟಿಸಿಕೊಳ್ಳುವುದಿಲ್ಲ. ಮನೆಯವರು ಮನೆಯಲ್ಲಿ ಇಟ್ಟುಕೊಳ್ಳಬಯಸುವುದಿಲ್ಲ. ಹೀಗೆ <u>**ಇಡೀ ಸಮಾಜವೇ ರೋಗಿಯನ್ನು ಬಹಿಷ್ಕರಿಸುತ್ತಿದೆ. ಇದು ತಪ್ಪು**</u>. ರೋಗ ಹರಡುವುದರ ಬಗ್ಗೆಯೂ ಜನರಿಗೆ ಇನ್ನಿಲ್ಲದ ತಪ್ಪು ಕಲ್ಪನೆಗಳಿವೆ. ಮುಟ್ಟಿದರೆ, ಜೊತೆಗೆ ಆಟವಾಡಿದರೆ, ಜೊತೆಗೆ ಕೂತು ಉಂಡರೆ ಅವರ ಬಟ್ಟೆಗಳನ್ನು ತೊಳೆದರೆ ಹಬ್ಬುತ್ತದೆ ಎಂದು. ರೋಗದ ಬಗ್ಗೆ ಸಮಾಜದ ಈ ದೃಷ್ಟಿಕೋನ ಬದಲಾಗಬೇಕು. ಅದಕ್ಕೆ ಮೊದಲು ಪ್ರತಿಯೊಬ್ಬರ ದೃಷ್ಟಿಕೋನವೂ ಬದಲಾಗಬೇಕು.

ರೋಗವು ಯಾವ ಮೂಲದಿಂದಲೇ ಬಂದಿರಲಿ, ಒಮ್ಮೆ ವ್ಯಕ್ತಿ ರೋಗಿಯಾದರೆಂದರೆ ಅವರಿಗೆ ರೋಗವನ್ನು ನಿಭಾಯಿಸಲು ಮನೆಯವರ ಬೆಂಬಲ ಬೇಕು, ಔಷಧಗಳನ್ನು ಖರೀದಿಸಲು ಕೆಲಸ ಮಾಡುವಲ್ಲಿನವರ ಬೆಂಬಲ ಬೇಕು, ರೋಗವನ್ನೆದುರಿಸಲು ಸಮಾಜದ ಬೆಂಬಲ ಬೇಕು. ಇವೆಲ್ಲವೂ ಸಿಗಲಿಲ್ಲವೆಂದರೆ ಔಷಧವೂ ಇಲ್ಲದೆ, ಉಪಚಾರವೂ ಇಲ್ಲದೇ ರೋಗವನ್ನು ತಡೆಯುವ ಶಕ್ತಿಯೂ ಇಲ್ಲದೇ, ಸಮಾಜವನ್ನು ಎದುರಿಸುವ ಸ್ಥೈರ್ಯವೂ ಇಲ್ಲದೇ ಆ ವ್ಯಕ್ತಿ ಇನ್ನಷ್ಟು ಬೇಗ ಸಾಯುತ್ತಾರೆ, ಅದೂ ನರಳಿ ನರಳಿ, ಸಾಯಬಾರದ ರೀತಿಯಲ್ಲಿ.

ಏಡ್ಸ್ ರೋಗಕ್ಕೆ ಮಾಹಿತಿ, ರೋಗ ಪ್ರತಿಬಂಧಕೋಪಾಯಗಳು, ಔಷಧಗಳು ಮತ್ತು ಸಮಾಜದ ಸಾಂತ್ವನ ಇವೆಲ್ಲವೂ ಬೇಕು. ರೋಗಿಗಳನ್ನು ಅಸ್ಪೃಶ್ಯರಂತೆ ಕಾಣಬಾರದು. ಅವರಿಗೆ ಉಪಚಾರ, ಬೆಂಬಲ ಎರಡೂ ಸಿಗಬೇಕು.

# ಸ್ತ್ರೀ ಭ್ರೂಣ ಹತ್ಯೆ

ಭಾರತದಲ್ಲಿ ಸ್ತ್ರೀಗೆ ಪೂಜ್ಯ ಸ್ಥಾನವಿದೆ. ಮಾತೆ ಎಂಬ ಗೌರವವಿದೆ. ಅವಳನ್ನು ಭೂತಾಯಿಗೆ ಮತ್ತು ಶಕ್ತಿ ದೇವತೆಗೆ ಹೋಲಿಸಲಾಗುತ್ತದೆ. ಆದರೂ ಈ ದೇಶದಲ್ಲಿ ವರ್ಷದಿಂದ ವರ್ಷಕ್ಕೆ ಸ್ತ್ರೀಯರ ಸಂಖ್ಯೆ ಕಡಿಮೆಯಾಗುತ್ತಲೇ ಇದೆ.

ನಿಸರ್ಗದಲ್ಲಿ ೧೦೦೦ ಗಂಡು ಇದ್ದರೆ ಹೆಣ್ಣಿನ ಸಂಖ್ಯೆ ೧೦೫೦ ಇರುತ್ತದೆ. ಇದಕ್ಕೆ ಕಾರಣ ಗಂಡಿಗಿಂತಲೂ ಹೆಣ್ಣು ನಿಸರ್ಗದತ್ತವಾಗಿಯೇ ಹೆಚ್ಚು ಶಕ್ತಿವಂತಳು. ಬದುಕುವ ಸಾಮರ್ಥ್ಯ ಹೆಚ್ಚು ಉಳ್ಳವಳು ಆಗಿದ್ದಾಳೆ. ಎಲ್ಲಿ ಮಹಿಳೆ ಮತ್ತು ಪುರುಷನಿಗೆ ಬದುಕಲು ಸಮಾನ ಸ್ಥಾನ ಇದೆಯೋ ಅಲ್ಲಿ ಮಾತ್ರ ಇದು ಸಾಧ್ಯ.

ಆದರೆ ಭಾರತದಲ್ಲಿ ಯಾವಾಗಲೂ ಸ್ತ್ರೀಯರ ಸಂಖ್ಯೆ ಪುರುಷರಿಗಿಂತ ಕಡಿಮೆಯೇ ಇದೆ. ೧೯೦೧ ರಲ್ಲಿ ೧೦೦೦ ಗಂಡಿಗೆ ೯೬೧ ಹೆಣ್ಣುಮಕ್ಕಳ ಸಂಖ್ಯೆ ಇತ್ತು. ಅದು ೨೦೦೧ ರ ಹೊತ್ತಿಗೆ ೧೦೦೦ ಗಂಡಿಗೆ ಹೆಣ್ಣಿನ ಸಂಖ್ಯೆ ೯೩೩ ಕ್ಕೆ ಇಳಿದಿದೆ. ಈ ಸಂಖ್ಯೆ ವರ್ಷದಿಂದ ವರ್ಷಕ್ಕೆ ಇಳಿಯುತ್ತಲೇ ಇದೆ.

ಇದಕ್ಕೆ ಕಾರಣಗಳು ಹಲವಾರು,

ನಮ್ಮದು ಪುರುಷ ಪ್ರಧಾನ ಸಮಾಜ. ಪ್ರತಿಯೊಬ್ಬ ತಾಯಿ ತಂದೆಗೆ ಗಂಡು ಮಗು ಬೇಕು. ಅಜ್ಜ ಅಜ್ಜಿಯರಿಗೆ ಗಂಡು ಮೊಮ್ಮಗ ಹುಟ್ಟಿದಾಗಲೇ ಸಂತೋಷ. ಗಂಡೆಂದರೆ ಕುಲದೀಪಕ, ಹೆಣ್ಣಾದರೆ ಕುಲಕ್ಕೆ ಹೊರಗೆ ಎನ್ನುವ ಹಳೆ ಕಾಲದ ಭಾವನೆ ಇನ್ನೂ ಗಟ್ಟಿಯಾಗಿ ಬೇರು ಬಿಟ್ಟಿರುವುದು ಇದಕ್ಕೆ ಕಾರಣ.

### ಸರಕಾರದ ಕಾನೂನುಗಳ ತಡೆ ಇದ್ದರೂ ಬಾಲ್ಯವಿವಾಹ ಇನ್ನೂ ನಮ್ಮಲ್ಲಿ ಜಾರಿಯಲ್ಲಿದೆ.

ಗಂಡು ಮಗುವನ್ನೇ ಹಡೆಯಬೇಕೆಂಬ ಒತ್ತಡ ಸೊಸೆಯ ಮೇಲೆ ಸದಾ ಇದ್ದೇ ಇರುತ್ತದೆ. ಗಂಡು ಮಗುವನ್ನು ಹಡೆಯದ್ದರೆ ಅದಕ್ಕೆ ತಾಯಿಯನ್ನು ಜವಾಬ್ದಾರಳನ್ನಾಗಿ ಮಾಡಿ ಅವಳನ್ನು ಮನೆಯಿಂದ ಹೊರ ಹಾಕುವ, ಅವಳಿಗೆ ನಾನಾ ರೀತಿಯ ಹಿಂಸೆ ಕೊಡುವ, ಕಡೆಗೆ ಮಗನಿಗೆ ಇನ್ನೊಂದು ಮದುವೆಯನ್ನು ಮಾಡಿಸುವ ಜನರೂ ನಮ್ಮಲ್ಲಿ ಬೇಕಾದಷ್ಟು ಸಿಗುತ್ತಾರೆ.

### ಸರಕಾರದ ಕಾನೂನಿನ ತಡೆ ಇದ್ದರ ಕೂಡ ವರದಕ್ಷಿಣೆ ಕೊಡುವ ಮತ್ತು ತೆಗೆದುಕೊಳ್ಳುವುದು ನಡೆದೇ ಇದೆ.

ಹೆಣ್ಣುಮಕ್ಕಳಿಗೆ ನಾಳೆ ವರದಕ್ಷಿಣೆ ತೆತ್ತು ಮದುವೆ ಮಾಡಿಸಬೇಕು, ಗಂಡಿನವರ ಮುಂದೆ ತಲೆ ತಗ್ಗಿಸಿ ಅವರ ಬೇಡಿಕೆಗಳನ್ನೆಲ್ಲ ಪೂರೈಸಬೇಕು ಎಂದೆಲ್ಲ ಹೆದರಿ ತಾಯ್ತಂದೆಯರು ಹೆಣ್ಣು ಹೆರಲಿಕ್ಕೇ ಭಯಪಡುತ್ತಾರೆ. ಹೆಣ್ಣು ಹುಟ್ಟುವದು ಬೇಡವಾಗುತ್ತದೆ. ಹಿಂದೆ, ಹುಟ್ಟಿದ ಶಿಶು ಹೆಣ್ಣೆಂದು ತಿಳಿಯುತ್ತಲೇ ಸೂಲಗಿತ್ತಿಗೆ ಅದನ್ನು ದೂರ ಎಸೆದು ಬರಲು ಅಪ್ಪಣೆ ಇರುತ್ತಿತ್ತು. ಇಲ್ಲವೇ ಬಾಯಲ್ಲಿ ಭತ್ತ ತುರುಕಿ ಶಿಶುವನ್ನು ಕೊಲ್ಲಲಾಗುತ್ತಿತ್ತು. ಇದಕ್ಕೆಲ್ಲ ಇಂದು ಆಧುನಿಕ ಸೌಕರ್ಯಗಳು ಬಂದಿವೆ. ಶಿಶು ಇನ್ನೂ ತಾಯಿಯ ಗರ್ಭದಲ್ಲಿ ಇದ್ದಾಗಲೇ ಅದು ಗಂಡೋ ಹೆಣ್ಣೋ ಎಂದು ತಿಳಿಯುವ, ಹೆಣ್ಣಾಗಿದ್ದರೆ ಭ್ರೂಣಹತ್ಯೆ ಮಾಡಿಸುವ ಆಧುನಿಕ ಪದ್ದತಿಯು ಹೆಣ್ಣುಗಳನ್ನು ಸಮಾಜದಿಂದ ನಿವಾರಣೆ ಮಾಡಿಸಲು ಸಹಾಯ ಮಾಡುತ್ತಿದೆ.

೧೯೮೦ ರ ದಶಕದಲ್ಲಿ ಗರ್ಭದಲ್ಲಿರುವ ಭ್ರೂಣದ ಸ್ಥಿತಿಯನ್ನು ತಿಳಿಯಲು ಸ್ಕ್ಯಾನಿಂಗ್ ಬಂತು. ಅಮೃತಸರದಲ್ಲಿ ಭ್ರೂಣದ ಲಿಂಗ ಪತ್ತೆಗೆ ಸ್ಕ್ಯಾನಿಂಗ್‌ನ್ನು ಬಳಸಲಾಯಿತು. ಬಲು ಬೇಗನೆ ಅದು ದಿಲ್ಲಿ, ಪಂಜಾಬು, ಗುಜರಾತ, ಮುಂಬೈಗಳಿಗೆ ಹರಡಿತು. ಮುಂಬಯಿಯ ಲೋಕಲ್ ಟ್ರೇನುಗಳಲ್ಲಿ ಜಾಹೀರಾತುಗಳು ಕೂಡ ಕಾಣಿಸಿಕೊಂಡವು. ಹಳ್ಳಿ ಹಳ್ಳಿಗೆ ಸ್ಕ್ಯಾನಿಂಗ್ ಯುನಿಟ್ ಗಳನ್ನು ತೆಗೆದುಕೊಂಡು ಹೋಗಿ ಭ್ರೂಣ ಪರೀಕ್ಷೆ ಮಾಡಿಸಿ ತಾಯಂದಿರಿಗೆ ಹೇಳುವ ಸ್ತ್ರೀ ತಜ್ಞರು ತಯಾರಾದರು.

ಹೀಗೆ ಸಮಾಜದಲ್ಲಿದ್ದ ಮೂಢನಂಬಿಗೆಯನ್ನು ತೊಡೆಯಲು ಪ್ರಯತ್ನಿಸಬೇಕಾದ ಶಿಕ್ಷಿತ ಸಮಾಜ ಅದನ್ನು ಇನ್ನೂ

ಗಟ್ಟಿಯಾಗಿ ಪೋಷಿಸಿ ಅದರಿಂದ ದುಡ್ಡು ಮಾಡಿಕೊಳ್ಳಲು ಆರಂಭಿಸಿತು.

ಇವೆಲ್ಲವುಗಳ ಪರಿಣಾಮವಾಗಿ ೨೦೦೧ ರಲ್ಲಿ ಭಾರತದ ಪುರುಷ: ಮಹಿಳೆಯರಿಗಿರುವ ಅನುಪಾತ ೧೦೦೦: ೯೨೭ ಕ್ಕಿಳಿಯಿತು. ಕರ್ನಾಟಕದಲ್ಲಿ ಅದು ೧೦೦೦: ೯೪೭ ಇದ್ದರೆ ಬೆಳಗಾವಿ ಜಿಲ್ಲೆಯಲ್ಲಿ ೧೦೦೦: ೯೧೭ ಕಿಳಿದಿದೆ. ಮಹಾರಾಷ್ಟ್ರದಲ್ಲಿ ೧೦೦೦: ೯೧೭ ಇದ್ದರೆ ಸಾಂಗ್ಲಿ ಜಿಲ್ಲೆಯಲ್ಲಿ ೧೦೦೦: ೮೫೦ ಇದೆ.

ಈ ವಿಷಯವನ್ನು ಬೆಳಕಿಗೆ ತಂದಾಗ ಸರಕಾರವು ಎಚ್ಚೆತ್ತು ಸ್ತ್ರೀ ಭ್ರೂಣ ಹತ್ಯೆ ನಿಷೇಧ ಕಾನೂನನ್ನು ಜಾರಿ ಮಾಡಿತು. ಆದರೇನು, ಸ್ತ್ರೀ ಭ್ರೂಣ ಹತ್ಯೆ ಇನ್ನೂ ನಿಂತಿಲ್ಲ. ಹೆಣ್ಣು ಮಕ್ಕಳ ಸಂಖ್ಯೆ ಏರುತ್ತಿಲ್ಲ.

**ಇದು ಹೀಗೆಯೇ ಮುಂದುವರೆದರೆ,**

–ಮುಂದೆ ಗಂಡಿಗೆ ಮದುವೆಯಾಗಲು ಹೆಣ್ಮಕ್ಕಳು ಸಿಗಲಿಕ್ಕಿಲ್ಲ.

–ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರಗಳು ಇನ್ನಷ್ಟು ಹೆಚ್ಚಬಹುದು.

–ಹುಡುಗಿಯರ ಮಾರಾಟ, ವೈಶ್ಯಾವಾಟಿಕೆ ಇವೆಲ್ಲ ಇನ್ನಷ್ಟು ಹೆಚ್ಚಬಹುದು.

## ಗರ್ಭಪಾತದಿಂದಾಗುವ ಅಪಾಯಗಳು

ಗರ್ಭಿಣಿ ಹೊಟ್ಟೆಯಲ್ಲಿರುವ ಮಗು ಪೂರ್ತಿ ಬೆಳೆಯುವುದಕ್ಕೂ ಮೊದಲು ಗರ್ಭದಿಂದ ಹೊರ ಬರುವುದಕ್ಕೆ ಗರ್ಭಪಾತ ಎನ್ನುತ್ತಾರೆ. ಕೆಲವೊಮ್ಮೆ ಇದು ನೈಸರ್ಗಿಕವಾಗಿಯೇ ಆಗಬಹುದು. ಕೆಲವೊಮ್ಮೆ ತಾಯಿಯೇ ತನಗೆ ಈ ಮಗು ಬೇಡವೆಂದು ಗರ್ಭ ತೆಗೆಸಲು ಮುಂದಾಗಬಹುದು. ಅನೈತಿಕ ಗರ್ಭವಾಗಿದ್ದರೆ ಸಮಾಜಕ್ಕೆ ಹೆದರಿ ಗರ್ಭಿಣಿ ಅದನ್ನು ಗುಪ್ತ ಸ್ಥಳಗಳಲ್ಲಿ, ಗುಟ್ಟಾಗಿ ಮಾಡುವ ಜನರಿಂದ ತೆಗೆಸಿಕೊಳ್ಳಲು ಪ್ರಯತ್ನಿಸಬಹುದು. **ಇಂದು ಹೊಟ್ಟೆಯೊಳಗಿನ ಮಗುವು ಹೆಣ್ಣಾಗಿದೆಯೆಂದು ತಿಳಿದುಬಂದರೆ ಗಂಡ ಹೆಂಡತಿ ಸೇರಿಯೇ ಅದನ್ನು ತೆಗೆಸುವ ಕಾರ್ಯವೂ ಬಹುವಾಗಿ ಅನೈತಿಕವಾಗಿ ಸಾಗಿದೆ.**

ಗರ್ಭಪಾತ ಮಾಡಿಸಬೇಕೇ ಬೇಡವೇ ಎಂದು ನಿರ್ಧರಿಸುವುದು ಬಲು ಕಷ್ಟಕರವಾದುದು. ಅಂಥ ಹೊತ್ತಿನಲ್ಲಿ ಮಹಿಳೆಗೆ ಬೆಂಬಲ ಮತ್ತು ಆಪ್ತ ಸಲಹೆ ನೀಡಲು ಗೆಳತಿಯೊಬ್ಬಳ ಅವಶ್ಯಕತೆ ಅತ್ಯಂತ ಜರೂರಾಗಿರುತ್ತದೆ. ಆಸ್ಪತ್ರೆಗಳಲ್ಲಿ ನುರಿತ ವೈದ್ಯರಿಂದ, ದಾದಿಯಿಂದ ಅಥವಾ ಆರೋಗ್ಯ ಕಾರ್ಯಕರ್ತರಿಂದ ಗರ್ಭಪಾತ ನಡೆದರೆ ಅದು ಹೆಂಗಸಿನ ಜೀವಕ್ಕೆ ಹೆಚ್ಚು ಸುರಕ್ಷಿತವಿರಬಹುದು. ಗರ್ಭ ಧರಿಸಿದ ಮೊದಲ ಮೂರು ತಿಂಗಳೊಳಗೆ ತೆಗೆಸಿದರೆ ಹೆಚ್ಚು ಸುರಕ್ಷಿತ. ಭ್ರೂಣ ಬೆಳೆದಂತೆ ಗರ್ಭಪಾತ ಕ್ಲಿಷ್ಟವಾಗುತ್ತ ಹೋಗುತ್ತದೆ.

ತರಬೇತಿ ಇರದ ವ್ಯಕ್ತಿಯು, ಸ್ವಚ್ಛವಿಲ್ಲದ ವಾತಾವರಣದಲ್ಲಿ, ಸುರಕ್ಷಿತವಲ್ಲದ, ಶುದ್ಧವಿರದ ಸಾಧನಗಳನ್ನು ಬಳಸಿ ಗರ್ಭಪಾತ ಮಾಡಿಸಲು ಕೈ ಹಾಕಿದರೆ ಅದು ಆ ಹೆಂಗಸಿಗೆ ಅತ್ಯಧಿಕ ಅಪಾಯ ತರಬಹುದು. ಇಂದು ೧೨ ರಿಂದ ೫೦ ವರ್ಷದ ಮಹಿಳೆಯರ ಅತಿ ಹೆಚ್ಚಿನ ಸಾವಿಗೆ ಇದು ಕಾರಣವಾಗಿದೆ.

ಕೆಲುವು ಕಡೆ ಗರ್ಭಪಾತ ಮಾಡಿಸಲು ಯೋನಿಯೊಳಗೆ ಕಟ್ಟಿಗೆಯಂಥ ಗಟ್ಟಿ ವಸ್ತುಗಳನ್ನು ದೂಡಿ ಗರ್ಭವನ್ನೊಡೆಯಲು ಪ್ರಯತ್ನಿಸುತ್ತಾರೆ. ಹೊಟ್ಟೆಯನ್ನು ಚೆನ್ನಾಗಿ ತಿಕ್ಕಿಯೂ ಮಾಡಬಹುದು. ಹೊಸ ಔಷಧವನ್ನೇನಾದರೂ ಉಪಯೋಗಿಸಿ ಕೂಡ ಪ್ರಯತ್ನಿಸಬಹುದು. ಆದರೆ ಇವೆಲ್ಲವುಗಳಿಂದಲೂ ಅತಿಯಾದ ರಕ್ತಸ್ರಾವವಾಗಿ, ಸೋಂಕಾಗಿ ಕಡೆಯಲ್ಲಿ ಮಹಿಳೆಯ ಸಾವಿನಲ್ಲಿ ಅದು ಪರ್ಯವಸಾನವಾಗಬಹುದು.

**ಗರ್ಭಪಾತದಲ್ಲಿ ಅಪಾಯದ ಚಿನ್ಹೆಗಳು;**

- ಜ್ವರ
- ಹೊಟ್ಟೆಯಲ್ಲಿ ಅಪಾರವಾದ ನೋವು
- ಅತಿಯಾದ ರಕ್ತಸ್ರಾವ

ಗರ್ಭಿಣಿಯರಲ್ಲಿ ಈ ಲಕ್ಷಣಗಳು ಕಂಡು ಬಂದುವೆಂದರೆ ಗರ್ಭಪಾತವಾಗುತ್ತಿರಬಹುದು ಗರ್ಭಕೋಶದ ಹೊರಗೆ

ಮಗು ಬೆಳೆಯುತ್ತಿರುವ ಸೂಚನೆ ಇರಬಹುದು ಅಥವಾ ಸೊಂಟದ ಎಲುಬಿಗೆ ಸೋಂಕು ತಗುಲಿರಬಹುದು. ಗರ್ಭಪಾತದ ಸೂಚನೆ ಕಾಣುತ್ತಲೇ ಕೆಲವು ಮಹಿಳೆಯರು ಡಾಕ್ಟರರಲ್ಲಿಗೆ ಹೋಗುತ್ತಾರಾದರೂ ಇನ್ನು ಕೆಲವರು ನಾಚಿಕೆ ಸಂಕೋಚಗಳಿಂದ, ಅವಮಾನದ ಹೆದರಿಕೆಗಳಿಂದ ತಮಗಾಗುತ್ತಿರುವುದನ್ನು ಹೇಳದೇ ಹೋಗಬಹುದು. ಆದರೆ ಹೀಗೆ ಮಾಡುವುದರಿಂದ ಅವರ ಜೀವಕ್ಕೆ ಅಪಾಯವಿದೆ. **ಮುಟ್ಟಾದಾಗ ಆಗುವುದಕ್ಕಿಂತ ಜಾಸ್ತಿ ರಕ್ತಸ್ರಾವ ಆದರೆ, ಸೋಂಕು ತಗುಲಿತೆಂದರೆ ಅದು ಆ ತಾಯಿಯ ಜೀವಕ್ಕೆ ಅಪಾಯದ ಸೂಚನೆ.** ತಕ್ಷಣ ವೈದ್ಯಕೀಯ ಸಹಾಯ ಪಡೆಯಿರಿ!

ಈ ಕೆಳಗಿನದನ್ನು ಮಾಡಿರಿ.

- ರಕ್ತಸ್ರಾವವನ್ನು ತಡೆಯುವ ಪ್ರಯತ್ನ ಮಾಡಿ. ಎರ್ಗೋನೋವಿನ್ ಇಂಜೆಕ್ಷನ್ ಕೊಡಿ.
- ಅಘಾತಕ್ಕೆ ಚಿಕಿತ್ಸೆ ಮಾಡಿ.
- ಸೋಂಕು ತಗುಲಿರುವ ಲಕ್ಷಣಗಳು ಕಂಡರೆ ಪ್ರಸವ ಜ್ವರಕ್ಕೆ ಮಾಡುವಂತೆ ಜೀವಿರೋಧಕ ಕೊಡಿ.

**ಇವೆಲ್ಲವನ್ನೂ ತಡೆಯಲು:**

- ಗರ್ಭಪಾತದ ನಂತರ ಎಂಪಿಸಿಲಿನ್ ಅಥವಾ ಟೆಟ್ರಾಸೈಕ್ಲಿನ್ ಕೊಡಿ. ಅಂದರೆ ಸೋಂಕಿನ ಅಪಾಯದಿಂದ ತಾಯಿಯನ್ನು ರಕ್ಷಿಬಹುದು.
- ಬೇಡದ ಗರ್ಭ ಧರಿಸದಂತೆ ಎಚ್ಚರಿಕೆ ವಹಿಸಿ. ಹೆಣ್ಣಾಗಲೀ, ಗಂಡಾಗಲೀ ಕುಟುಂಬ ಯೋಜನಾ ಸಾಧನಗಳು, ಮಾಹಿತಿ ಇಬ್ಬರಿಗೂ ಲಭ್ಯವಿರಬೇಕು.
- ಗರ್ಭಪಾತಗಳಿಂದ ಮಹಿಳೆಯರು ಸಾಯುವುದನ್ನು ತಡೆಯಲು, ಮಹಿಳೆಗೆ ಗೌರವದಿಂದ ಬದುಕಲು ಈ ಸಮಾಜ ಬಿಡಬೇಕು. ಸಮಾಜದಲ್ಲಿ ಮಹಿಳೆಯ ಸ್ಥಾನಮಾನಗಳು ಹೆಚ್ಚಬೇಕು. ಹೆಣ್ಣಾಗಲೀ ಗಂಡಾಗಲೀ ಇಬ್ಬರಿಗೂ ಬದುಕಲು, ಉಣ್ಣಲು, ಶಿಕ್ಷಣ ಪಡೆಯಲು, ಉದ್ಯೋಗ ಮಾಡಲು, ಮದುವೆಗೆ ತನ್ನ ಸಂಗಾತಿಯನ್ನು ಆಯ್ದುಕೊಳ್ಳಲು ಸಮಾನ ಹಕ್ಕಿರಬೇಕು. **ಅಂದಾಗ ಮಾತ್ರವೇ ಹೊಟ್ಟೆಯೊಳಗಿನ ಹೆಣ್ಣು ಭ್ರೂಣವನ್ನು ಚಿವುಟಿ ಎಸೆಯಲು ತಾಯಿ ತಂದೆಯರು ಮುಂದಾಗುವುದಿಲ್ಲ. ಆಗಲೇ ಗರ್ಭಪಾತದಿಂದ ಮಹಿಳೆಯರ ಸಾವುಗಳು ಕಡಿಮೆಯಾದಾವು.**
- ಬೇಡದ ಗರ್ಭವನ್ನು ತೆಗೆಸಲು ಸ್ವಚ್ಛವಾದ ತಾಣಗಳು, ತರಬೇತಿ ಹೊಂದಿದ ಆರೋಗ್ಯ ಕಾರ್ಯಕರ್ತೆಯರು ಮಹಿಳೆಯರಿಗೆ ಪುಕ್ಕಟೆಯಾಗಿ ಅಥವಾ ಅತಿ ಕಡಿಮೆ ಬೆಲೆಯಲ್ಲಿ ಲಭ್ಯವಿರಬೇಕು. ಅಂದಾಗ ಮಾತ್ರವೇ ಮಹಿಳೆಯರು ಅನೈತಿಕ ಗರ್ಭ ತೆಗೆಸುವ ಸಂದರ್ಭ ಬಂದಾಗ ಕತ್ತಲೆಯ, ಗುಪ್ತ ಜಾಗವನ್ನರಸಿ ಹೋಗುವುದಿಲ್ಲ.
- ಗರ್ಭಪಾತ ಆಸ್ಪತ್ರೆಯಲ್ಲಾಗಲೀ, ಮನೆಯಲ್ಲಾಗಿರಲಿ, ನಂತರ ಆ ಮಹಿಳೆಗೆ ಯಾವುದೇ ರೀತಿಯ ತೊಂದರೆ ಶುರುವಾಯಿತೆಂದರೆ ತಕ್ಷಣ ವೈದ್ಯಕೀಯ ಸಹಾಯವನ್ನು ಪಡೆಯಬೇಕು. ಇದು ಸಾಧ್ಯವಾಗಲು **ಗರ್ಭಪಾತ ಆದ ಮಹಿಳೆಯರನ್ನು ಕೀಳಾಗಿ <u>ನಡೆಸಿಕೊಳ್ಳದಿರುವುದು</u> ಅತ್ಯಂತ ಮುಖ್ಯ. ಆಗಲೇ ಮಹಿಳೆಗೆ ವೈದ್ಯಕೀಯ ಸಹಾಯದಲ್ಲಿ ಭರವಸೆ, ವಿಶ್ವಾಸ ಬಂದೀತು.**

***

# ಹಿಪಾಟಿಟಿಸ್ ಬಿ

ಹಿಪಾಟಿಟಿಸ್ ಎಂದರೆ ಪಿತ್ಥಕೋಶಕ್ಕೆ ಸೋಂಕು ತಗುಲುವುದು. ಹಿಪಾಟಿಟಿಸ್ ರೋಗ ತರುವ ಐದು (ಎ, ಬಿ, ಸಿ, ಡಿ ಹಾಗು ಇ) ರೀತಿಯ ವೈರಸ್‌ಗಳಿವೆ. ಅದರಲ್ಲಿ ಹಿಪಾಟಿಟಿಸ್ ಎ ಮತ್ತು ಇ ಇವೆರಡು ಆಹಾರ ಮತ್ತು ನೀರಿನಿಂದ ಹರಡುತ್ತವೆ. ಉಳಿದವು ರಕ್ತದ ಸೋಂಕಿನಿಂದ ಒಬ್ಬರಿಂದೊಬ್ಬರಿಗೆ ಹರಡುವವು.

ನೀರು ಮತ್ತು ಆಹಾರಗಳಿಂದ ಹರಡುವ ಸಾಮಾನ್ಯ ಕಾಮಾಲೆಯ ಬಗ್ಗೆ ೨೨೭ ನೇ ಪುಟದಲ್ಲಿ ಬರೆಯಲಾಗಿದೆ. ಇನ್ನುಳಿದ ರೋಗಗಳಲ್ಲಿ ಹಿಪಾಟಿಟಿಸ್ ಬಿ ರೋಗವು ಇಂದು ಹೆಚ್ಚು ಸುದ್ದಿಯಲ್ಲಿರುವ ರೋಗ. ಏಡ್ಸ್ ರೋಗದಂತೆಯೇ ರೋಗಿಯ ರಕ್ತ ಅಥವಾ ದೇಹದ ದ್ರವ ಅಂಗಾಂಶಗಳು ಇನ್ನೊಬ್ಬ ವ್ಯಕ್ತಿಯ ದೇಹವನ್ನು ಪ್ರವೇಶಿಸಿದಾಗ ಇನ್ನೊಬ್ಬರಿಗೂ ಆ ರೋಗ ತಗುಲುವುದು. ಆದರೆ ರೋಗ ಹರಡುವ ವೇಗ ಏಡ್ಸ್ ಗಿಂತಲೂ ಹೆಚ್ಚಿನದೆನ್ನುತ್ತಾರೆ.

- ತಾಯಿಯಿಂದ ಶಿಶುವಿಗೆ ಹುಟ್ಟುವಾಗಲೇ ರೋಗ ತಗುಲಬಹುದು.
- ಒಬ್ಬರು ಬಳಸಿದ ಸೂಜಿಯನ್ನು ಶುದ್ದೀಕರಿಸದೇ ಇನ್ನೊಬ್ಬರು ಬಳಸುವುದರಿಂದ ರೋಗ ಹರಡುತ್ತದೆ.
- ಲೈಂಗಿಕ ಸಂಪರ್ಕದಿಂದಲೂ ರೋಗ ಸುಲಭವಾಗಿ ಇನ್ನೊಬ್ಬರಿಗೆ ದಾಟುತ್ತದೆ.
- ರಕ್ತದೊಟ್ಟಿಗೆ ಸಂಪರ್ಕ ಬರುವ ವ್ಯಕ್ತಿಗಳು, ಉದಾಹರಣೆಗೆ:– ಬ್ಲಡ್ ಬ್ಯಾಂಕಿನಲ್ಲಿ ಕೆಲಸ ಮಾಡುವವರು, ಪದೇ ಪದೇ ರಕ್ತ ದಾನ ಮಾಡುವವರು ಮತ್ತು ಸ್ವೀಕರಿಸುವವರು, ಹಲ್ಲಿನ ಡಾಕ್ಟರುಗ(ಡೆಂಟಿಸ್ಟ್)ಳಾಗಿ ಕೆಲಸ ಮಾಡುವವರು ಹೆಚ್ಚು ಅಪಾಯದಲ್ಲಿ ಇರುತ್ತಾರೆ.

ಹಿಪಾಟಿಟಿಸ್ ಬಿ ಒಂದೆರಡು ವಾರ ಕಾಡುವ ರೋಗ. ಆರು ತಿಂಗಳಿಗಿಂತಲೂ ಹೆಚ್ಚುಕಾಲ ಇತ್ತೆಂದರೆ ಪಿತ್ತಕೋಶಗಳಲ್ಲಿ ಹುಣ್ಣಾಗಿ ಅದು ಪಿತ್ಥಕೋಶದ ಕ್ಯಾನ್ಸರಾಗಿಯೂ ಮುಂದುವರೆಯಬಹುದು. ಪಿತ್ಥಕೋಶದ ಕ್ಯಾನ್ಸರಾದರೆ ರೋಗಿಯು ಬದುಕುವುದು ಬಲು ಕಷ್ಟ.

**ರೋಗ ಲಕ್ಷಣಗಳು;**

- ವಾಂತಿ ಬಂದಂತಾಗುವುದು, ಸುಸ್ತು, ವಾಂತಿಯಾಗುವುದು, ತಲೆನೋವು, ಸಂದುಗಳಲ್ಲಿ ನೋವು, ಸ್ವಲ್ಪ ಜ್ವರ ಕೆಮ್ಮು ಇವು ಆರಂಭದಲ್ಲಿ ಕಾಣಿಸಿಕೊಳ್ಳುತ್ತವೆ.
- ಮುಂದೆ ಪಿತ್ಥಕೋಶದಲ್ಲಿ ನೋವು ಕಾಣಿಸಿಕೊಳ್ಳುತ್ತದೆ. ಈ ನೋವು ಮೂರ್ನಾಲ್ಕು ವಾರ ಇರುತ್ತದೆ. ಮನೆಯಲ್ಲೇ ಉಪಚಾರ ಮಾಡಬಹುದು. ರೋಗ ತಗುಲಿದವರಲ್ಲಿ ೫% ಜನರಿಗೆ ರೋಗವು ಮುಂದಿನ ಹಂತಕ್ಕೆ ಹೋಗಬಹುದು.
- ಆ ಶೇಕಡಾ ೫ ಜನರಲ್ಲಿ ಕಾಲು ಭಾಗ ಜನರಿಗೆ ಕ್ಯಾನ್ಸರಾಗಬಹುದು. ಅವರಲ್ಲಿ ೧% ರೋಗಿಗಳು ಕ್ಯಾನ್ಸರಿನಿಂದ ಸಾಯಬಹುದು.
- ಒಮ್ಮೆ ಹಿಪಾಟಿಟಿಸ್ ಬಿ ರೋಗ ಬಂದು ಗುಣವಾಯಿತೆಂದರೆ ಅವರಿಗೆ ಜೀವನ ಪೂರ್ತಿ ರೋಗ ನಿರೋಧಕ ಶಕ್ತಿ ಇರುತ್ತದೆ.

ತಾಯಿಯಿಂದ ಹಿಪಾಟಿಟಿಸ್ ಬಿ ರೋಗವನ್ನು ಪಡೆದ ಮಗುವಿಗೆ ಶೈಶವಾವಸ್ಥೆಯಲ್ಲಿಯೇ ಹಿಪಾಟಿಟಿಸ್ ಬಿ ಕಾಣಿಸಿಕೊಂಡಿತೆಂದರೆ ಅದರ ಪಿತ್ಥಕೋಶ ಪೂರ್ತಿ ಹಾಳಾಗುವ ಸಂಭವವಿದೆ.

ಬೇರೆ ವಯಸ್ಸಿನ ರೋಗಿಗಳಿಗೆ ಈ ಸಾಧ್ಯತೆ ಬಹಳ ಕಡಿಮೆ.

ಉಸಿರಾಟದಿಂದ, ಗಾಳಿಯಿಂದ ಅಥವಾ ಸ್ಪರ್ಷದಿಂದ ಹರಡುವ ರೋಗವಿದಲ್ಲ.

ನೂರಕ್ಕೆ ಹತ್ತು ಜನರಲ್ಲಿ ರೋಗಾಣುಗಳು ಜೀವಮಾನ ಪೂರ್ತಿ ಇರಬಹುದು. ಹಿಪಾಟಿಟಿಸ್ ಬಿ ರೋಗದಿಂದಲೇ ಸಾಯುವುದು ಬಹಳ ಕಡಿಮೆ.

## ಹಿಪಾಟಿಟಿಸ್ ಬಿ ಚುಚ್ಚುಮದ್ದಿನ ರಾಜಕೀಯ

ಜಗತ್ತಿನಲ್ಲಿ ಪೂರ್ವ ಏಶಿಯಾ, ಆಫ್ರಿಕಾಗಳಲ್ಲಿ ಹಿಪಾಟಿಟಿಸ್ ಬಿ ಜಾಸ್ತಿ. ಅಮೆರಿಕಾ, ಯುರೋಪುಗಳಲ್ಲಿಯೂ ಏಡ್ಸ್ ರೋಗದಂತೆ ಇದು ಬಹಳವಾಗಿ ಹಬ್ಬುತ್ತಿದ್ದರೂ ರೋಗ ನಿರೋಧಕ ಚುಚ್ಚುಮದ್ದುಗಳ ತೀವ್ರ ಉಪಯೋಗದಿಂದ ಮತ್ತು ಪಿತ್ಥಕೋಶದ ಕ್ಯಾನ್ಸರಿಗೂ ಅಲ್ಲಿ ಉಪಚಾರ ಸಾಧ್ಯವಾದುದರಿಂದ ರೋಗವನ್ನು ನಿಯಂತ್ರಿಸುವುದು ಸಾಧ್ಯವಾಗಿದೆ.

ಇಂದು ಹಿಪಾಟಿಟಿಸ್ ಬಿ ಚುಚ್ಚುಮದ್ದು ಹಾಕಿಸಬೇಕೆಂದು ವಿಶ್ವ ಆರೋಗ್ಯ ಸಂಸ್ಥೆಯು ಹೇಳುತ್ತದೆ. ಆದರೆ ಈ

ಚುಚ್ಚುಮದ್ದು ಪೋಲಿಯೋ ಅಥವಾ ಬಿಸಿಜಿಗಳಂತೆ ಕಡಿಮೆ ಖರ್ಚಿನದಲ್ಲ. ಬಲು ದುಬಾರಿಯದು.

ಭಾರತದಲ್ಲಿ ಹಿಪಾಟಿಟಿಸ್ ಬಿ ಚುಚ್ಚುಮದ್ದಿನ ಪ್ರಚಾರ ಈಗ ಸುಮಾರು ಐದು ವರ್ಷಗಳ ಹಿಂದೆ ಆರಂಭವಾಯಿತು. ರೋಟರಿ, ಲೈನ್ಸ್ ಕ್ಲಬ್ ಮತ್ತು ಐ.ಎಂ.ಎ ಗಳು ಬಹಳ ಆಸಕ್ತಿಯಿಂದ ಹಿಪಾಟಿಟಿಸ್ ಬಿ ಚುಚ್ಚುಮದ್ದು ಹಾಕಿಸಲು ಮುಂದಾದವು. ಶಾಲೆಗಳಲ್ಲಿ ಚುಚ್ಚುಮದ್ದಿನ ಕ್ಯಾಂಪ್‌ಗಳಾದವು, ಇನ್ನೂ ಆಗುತ್ತಿವೆ. ಪ್ರತಿಯೊಬ್ಬ ಮಗುವೂ ಹಲವು ರೂಪಾಯಿಗಳನ್ನು ಕೊಡಬೇಕಾದ ಅವಶ್ಯಕತೆ ಬೀಳುವ ಈ ಪ್ರಕಾರ ಕ್ಯಾಂಪ್‌ನಲ್ಲಿ ಚುಚ್ಚುಮದ್ದಿನ ಪ್ರಯೋಜನದ ಬಗ್ಗೆ ಈಗಾಗಲೇ ಬಹಳ ವಿರೋಧವೆದ್ದಿದೆ.

ವಿಶ್ವ ಆರೋಗ್ಯ ಸಂಸ್ಥೆಯು ಹಿಪಾಟಿಟಿಸ್ ಬಿ ಚುಚ್ಚುಮದ್ದನ್ನು ತಮ್ಮ ದೇಶದ ಚುಚ್ಚುಮದ್ದು ಕಾರ್ಯಕ್ರಮಗಳಲ್ಲಿ ಹಾಕಿಕೊಳ್ಳಲು ಮಾರ್ಗದರ್ಶಕ ಸೂತ್ರವನ್ನು ಕೊಟ್ಟಿದೆ. ಭಾರತ ಸರಕಾರವೂ ಕೂಡ ಹಂತ ಹಂತವಾಗಿ ಇದನ್ನು ಚಾಲನೆಯಲ್ಲಿ ತರತ್ತಿದೆ. ಆದರೆ ಈ ಚಚ್ಚುಮದ್ದಿನ ಬಗ್ಗೆ ಪ್ರಶ್ನೆಗಳು ಮಾತ್ರ ಹಾಗೆಯೇ ಉಳಿದುಕೊಂಡಿವೆ.

- ಗರ್ಭಿಣಿ ತಾಯಿಯಲ್ಲಿ ಹಿಪಾಟಿಟಿಸ್ ಬಿ, ರೋಗವಿತ್ತೆಂದರೆ ಮಗುವಿಗೆ ಹುಟ್ಟುವಾಗಲೇ ರೋಗ ತಗುಲುತ್ತದೆ. ತಗುಲಬಾರದೆಂದರೆ ಅದೇ ಜನಿಸಿದ ಮಗುವಿಗೆ ೧೨ – ೨೪ ಗಂಟೆಯೊಳಗಾಗಿ ಚುಚ್ಚುಮದ್ದು ನೀಡಬೇಕು. ನವಜಾತ ಶಿಶುವಿಗೂ ಚುಚ್ಚುಮದ್ದು ನೀಡಿದರೆ ಅದು ಹಿಪಾಟಿಟಿಸ್ ಬಿ ಯಿಂದ ಪಾರಾಗಬಹುದು. ಆದರೆ ನಮ್ಮ ದೇಶದಲ್ಲಿ ನೂರಕ್ಕೆ ೭೭ ಹೆರಿಗೆಗಳು ಮನೆಯಲ್ಲಿ, ಹಳ್ಳಿಗಳಲ್ಲಿ, ಯಾವುದೇ ನರ್ಸ್, ಡಾಕ್ಟರರ ಸಹಾಯವಿಲ್ಲದೆಯೇ ಜರುಗುತ್ತವೆ. ದೂರದ ಹಳ್ಳಿಗಳಲ್ಲಿ ೧೨ – ೨೪ ತಾಸುಗಳೊಳಗಾಗಿ ಚುಚ್ಚುಮದ್ದು ತಲುಪಿಸಲು ಸಾಧ್ಯವೇ?
- ರೋಗ ಹರಡುವ ಎರಡನೆಯ ಗುಂಪೆಂದರೆ ಮಾದಕ ಔಷಧಗಳನ್ನು ಚುಚ್ಚಿಕೊಳ್ಳುವವರು, ಅನೈತಿಕ ಲೈಂಗಿಕ ಸಂಪರ್ಕ ಮಾಡುವವರು. ಮತ್ತು ರಕ್ತದ ಸಂಪರ್ಕದಲ್ಲಿ ಇರುವವರು (ಡಾಕ್ಟರರು, ಬ್ಲಡ್ ಬ್ಯಾಂಕಿನಲ್ಲಿ ಕೆಲಸ ಮಾಡುವವರು). ಇವರು ಹಿಪಾಟಿಟಿಸ್ ಬಿ ಚುಚ್ಚುಮದ್ದು ತೆಗೆದುಕೊಳ್ಳುವ ಅವಶ್ಯಕತೆ ಇದೆ.

ಪ್ರತಿಷ್ಠಿತ ಸಂಘ ಸಂಸ್ಥೆಗಳು ಹಿಪಾಟಿಟಿಸ್ ಬಿ ಚುಚ್ಚುಮದ್ದಿನ ಕ್ಯಾಂಪುಗಳನ್ನು ನಡೆಸುತ್ತಾರೆ. ಕ್ಯಾಂಪಿನಲ್ಲಿ ಗರ್ಭಿಣಿಯರ ರಕ್ತ ತಪಾಸಣೆ, ರೋಗ ಇರುವ ಬಗ್ಗೆ, ನವಜಾತ ಶಿಶುಗಳಿಗೆ ಅಥವಾ ರಕ್ತದ ಸಂಪರ್ಕದಲ್ಲಿ ಬರುವವರಿಗೆ ಎಂದು ಸರಿಯಾದ ಗುರಿಗುಂಪು ಇರುವುದಿಲ್ಲ. ಕ್ಯಾಂಪನಲ್ಲಿ ಹಿಪಾಟಿಟಿಸ್ ಬಿ ಚುಚ್ಚುಮದ್ದು ಕೊಡಿಸಿದರೆ ಅದು ಈ ಯಾವ ಗುಂಪನ್ನೂ ಮುಟ್ಟುವುದಿಲ್ಲ. ಹೀಗಾಗಿ ಈ ಕ್ಯಾಂಪುಗಳು ಯಾವ ಉದ್ದೇಶವನ್ನೂ ಈಡೇರಿಸದೇ ವ್ಯರ್ಥ ಹಣ ವ್ಯಯದ ಕ್ಯಾಂಪುಗಳಾಗುತ್ತವೆ. ಹಿಪಾಟಿಟಿಸ್ ಚುಚ್ಚುಮದ್ದುಗಳು ಅತಿ ದುಬಾರಿಯ ಚುಚ್ಚುಮದ್ದುಗಳಗಿರುವುದರಿಂದ ಅವಶ್ಯಕವಿದ್ದೆಡೆ ಕೊಡುವುದು ಅತಿ ಮಹತ್ವದ್ದು.

**ಹಾಗಾದರೆ ಏನು ಮಾಡಬೇಕು?**

ತಾಯಿಗೆ ಹಿಪಾಟಿಟಿಸ್ ಬಿ ಇತ್ತೆಂದರೆ ಅದು ಮಗುವಿಗೆ ಹುಟ್ಟಿನಿಂದಲೇ ಸೋಂಕುವ ಸಾಧ್ಯತೆ ಇರುವುದರಿಂದ ನವಜಾತ ಮಗುವಿಗೆ ಚುಚ್ಚುಮದ್ದು ಕೊಡುವುದು ಯೋಗ್ಯ. ಆದರೆ ಚುಚ್ಚುಮದ್ದು ಬಹಳ ದುಬಾರಿ ಆಗಿರುವುದರಿಂದಲೂ, ಹೆರಿಗೆಗಳೆಲ್ಲ ಆಸ್ಪತ್ರೆಯಲ್ಲಿ ಆಗದಿರುವುದರಿಂದಲೂ ಬೇರೊಂದು ಪರ್ಯಾಯ ಮಾರ್ಗವನ್ನು ಅನುಸರಿಸುವುದು ಅವಶ್ಯವಿದೆ.

- ಎಲ್ಲ ಗರ್ಭಿಣಿ ಸ್ತ್ರೀಯರನ್ನೂ ಹಿಪಾಟಿಟಿಸ್ ಬಿ ಇದೆಯೇ ಎಂದು ರಕ್ತ ಪರೀಕ್ಷೆ ಮಾಡಿ ನೋಡಬೇಕು. (ಟಿಟಿ ಇಂಜೆಕ್ಷನ್ ಹಾಕಿಸಿಕೊಳ್ಳಲು ಮತ್ತು ತಪಾಸಣೆಗೆಂದು ಮಹಿಳೆಯರು ಆರೋಗ್ಯ ಕೇಂದ್ರಗಳಿಗೆ ಬಂದೇ ಬರುವುದರಿಂದ ಇದು ಸಾಧ್ಯವಿದೆ). ಯಾವ ತಾಯಿಗೆ ಹಿಪಾಟಿಟಿಸ್ ಬಿ ರೋಗವಿದೆಯೋ ಗುರುತಿಸಿ ಅವರ ಹೆರಿಗೆ ಸಮಯದಲ್ಲಿ ಆರೋಗ್ಯ ಕಾರ್ಯಕರ್ತರು ಹಾಜರಿದ್ದು ಮಗುವಿಗೆ ಚುಚ್ಚುಮದ್ದು ಹಾಕಬೇಕು.
- ಎರಡನೆಯದಾಗಿ ಯಾವ ವ್ಯಕ್ತಿ ಈ ರೋಗಕ್ಕೆ ಗುರಿಯಾಗುವ ಸಾಧ್ಯವಿದೆಯೋ (ಉದಾಹರಣೆಗೆ, ಡೆಂಟಿಸ್ಟಗಳು, ಬ್ಲಡ್ ಬ್ಯಾಂಕಿನಲ್ಲಿ ಕೆಲಸ ಮಾಡುವವರು), ಅವರಿಗೆ ಚುಚ್ಚುಮದ್ದು ಕೊಡಿಸಬೇಕು.

ಪ್ರಾಥಮಿಕ ಆರೋಗ್ಯವೆಂದರೆ ಆಯಾ ಪ್ರದೇಶದ ಪರಿಸ್ಥಿತಿಗೆ ಅನುಗುಣವಾಗಿ ಹಾಗು ಎಲ್ಲರಿಗೂ ಒಪ್ಪಿಗೆಯಾಗುವಂಥ ವೈಜ್ಞಾನಿಕವಾದ ಆರೋಗ್ಯ ಸೇವೆ. ಅದು ವಿಶ್ವದ ಎಲ್ಲಾ ಕಡೆ ಜನರಿಗೆ ಲಭ್ಯವಾಗುವಂಥ ತಂತ್ರಜ್ಞಾನವಿರಬೇಕು. ಜನರಿಗೆ ಅದು ಅವರ ಪೂರ್ಣ ಸಹಭಾಗಿತ್ವದಿಂದ ಸಿಗುವಂತಾಗಬೇಕು. ಆಯಾ ಸಮುದಾಯಕ್ಕೆ ಆಯಾ ದೇಶದ ಸರಕಾರಕ್ಕೆ, ಅವರು ಅಭಿವೃದ್ಧಿಯ ಯಾವುದೇ ಹಂತದಲ್ಲಿರಲಿ, ಸ್ವಯಂ ನಿರ್ಧಾರದಿಂದ, ಬೇರೆಯವರನ್ನು ಅವಲಂಬಿಸದೆ ಅದು ಅವರ ಕೈಗೆಟಕುತ್ತಿರಬೇಕು.

ಮಲೇಶಿಯಾ, ಕ್ಯೂಬಾ, ಕೊಸ್ಟಾರಿಕಾ, ಚೈನಾ ಮತ್ತು ಶ್ರೀಲಂಕಾಗಳಲ್ಲಿ ಜನಸಮುದಾಯದ ಭಾಗವಹಿಸುವಿಕೆಯಿಂದ

ಆರೋಗ್ಯವನ್ನು ಸಾಧಿಸವುದು ಸಾಧ್ಯವಾಗಿತ್ತು. ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡಿ ಈ ಸಮಗ್ರವಾದ, ಎಲ್ಲರಿಗೂ ತಲುಪಬಲ್ಲ ಆರೋಗ್ಯ, ಶಿಕ್ಷಣ, ನೀರು, ಸಾಮಾಜಿಕ ಭದ್ರತೆಯ ಸೇವೆಗಳನ್ನು ಅಳವಡಿಸಿಕೊಂಡಾಗ ಆರೋಗ್ಯವು ತನ್ನಿಂದ ತಾನೇ ಬರುತ್ತದೆ ಎಂದು ಈ ದೇಶಗಳು ತೋರಿಸಿಕೊಟ್ಟಿದ್ದವು. ಈ ಉದಾಹರಣೆಗಳಿಂದ ಕಲಿತ ಪಾಠವನ್ನು ವಿಶ್ವಕ್ಕೆಲ್ಲ ಅನ್ವಯಿಸಬೇಕೆಂಬುದೇ ಈ ಘೋಷಣೆಯ ಹಿಂದಿನ ಉದ್ದೇಶ.

ಅಲ್ಮಾ ಆಟಾ ಘೋಷಣೆಯು ಒಂದು ಕ್ರಾಂತಿಕಾರಿ ಯೋಜನೆಯಾಗಿತ್ತು. ಈ ಘೋಷಣೆಯಲ್ಲಿ ಆರೋಗ್ಯವನ್ನು ಮೂಲಭೂತ ಹಕ್ಕೆಂದು ಒಪ್ಪಿಕೊಳ್ಳಲಾಗಿತ್ತು. ಈ ಮಹತ್ವಾಕಾಂಕ್ಷಿ ಯೋಜನೆಯ ಗುರಿ ಮುಟ್ಟಲು ಅನೇಕ ಕಾರ್ಯಕ್ರಮಗಳನ್ನು ಹಾಕಲಾಯಿತು. ಇದರ ಪ್ರಕಾರ ಪ್ರಾಥಮಿಕ ಅರೋಗ್ಯವೆಂದರೆ ಜನರ ಎಲ್ಲಾ ಮೂಲಭೂತ ಅವಶ್ಯಕತೆಗಳನ್ನೂ ಪೂರೈಸುವುದು. ಈ ಆರೋಗ್ಯ ವ್ಯವಸ್ಥೆಯಲ್ಲಿ ಆರೋಗ್ಯ ಸೇವೆಯ ಕೇಂದ್ರಬಿಂದು ಜನರೇ ಆಗಿರುತ್ತಾರೆ. ಆರೋಗ್ಯ ಕಾಯಕರ್ತರಿಂದ ಹಿಡಿದು ಮಂತ್ರಿಗಳವರೆಗೆ ಎಲ್ಲರೂ ಜನರಿಗೆ ಜವಾಬ್ದಾರರಾಗಿರಬೇಕು. ಆಹಾರದ ಬೇಡಿಕೆಯಿಂದ ಹಿಡಿದು ಎಲ್ಲಾ ಮೂಲಭೂತ ಅವಶ್ಯಕತೆಗಳೂ ಸಂಪೂರ್ಣವಾಗಿ ಪೂರೈಕೆ ಆಗಬೇಕು.

ಇದಕ್ಕೆ ಎಲ್ಲಾ ರಾಷ್ಟ್ರಗಳೂ ಸಹಿ ಹಾಕಿದ್ದರೂ ಕೂಡ ಕೆಲವೇ ದೇಶದ ಸರ್ಕಾರಗಳು ಜನರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವತ್ತ ದೃಷ್ಟಿ ಹಾಯಿಸಿದವು. ಉಳಿದೆಲ್ಲ ಕಡೆ ಸಮುದಾಯದೊಂದಿಗೆ ಕೆಲಸ ಮಾಡುವ ಸ್ವಯಂ ಸೇವಾ ಸಂಸ್ಥೆಗಳು ಮಾತ್ರ ಈ ನಿಟ್ಟಿನಲ್ಲಿ ಕೆಲಸ ಮಾಡಿದವು.

ಇಂಥದ್ದೊಂದು ಮಹತ್ವ ಪೂರ್ಣ ಯೋಜನೆಗೆ ಸಹಿ ಮಾಡಿದ್ದರೂ ಕೂಡ ಮುಂದುವರೆದ ದೇಶಗಳಿಗೆ ಇದು ಒಪ್ಪಿಗೆಯಾಗಿರಲಿಲ್ಲ. ಬಡದೇಶಗಳ ಮೇಲೆ ಹೊಸ ಆರ್ಥಿಕ ನೀತಿ, ಖಾಸಗೀಕರಣ, ಜಾಗತೀಕರಣ ಹಾಗು ಉದಾರೀಕರಣ ನೀತಿಗಳನ್ನೆಲ್ಲ ಹೇರಿ ಅವು ಜನಪರ ನೀತಿಯಿಂದ ಸರಕಾರಗಳನ್ನು ದೂರ ಎಳೆದವು. ವಿಶ್ವ ಮಾರುಕಟ್ಟೆಗೆ ಎಲ್ಲ ದೇಶಗಳನ್ನೂ ಎಳೆದು ತಂದು ಮಾರುಕಟ್ಟೆಯ ನೀತಿಯು ದೇಶಗಳನ್ನು ಆಳುವಂತೆ ಮಾಡಿದವು. ಹಳ್ಳಿಗಳಿಂದ ರೈತರು ಶಹರದ ಕೊಳಚೆ ಪ್ರದೇಶಗಳನ್ನು ಸೇರಿದರು. ಶಹರದಲ್ಲೂ ಹೆಚ್ಚೆಚ್ಚು ಜನರು ಕೆಲಸ ಕಳೆದುಕೊಂಡು ನಿರುದ್ಯೋಗಿಗಳಾದರು. ಶ್ರೀಮಂತ ಇನ್ನಷ್ಟು ಶ್ರೀಮಂತನಾದ, ಬಡವ ಮತ್ತಷ್ಟು ಬಡವನಾದ. ನಿರುದ್ಯೋಗ, ಬಡತನ, ನಿರ್ವಸತಿ ಹಾಗು ಹಸಿವೆ ಇವು ಆರೋಗ್ಯದಿಂದ ಜನರನ್ನು ಹೆಚ್ಚೆಚ್ಚು ಅನಾರೋಗ್ಯದತ್ತ ದೂಡಿದವು. ಹಲವಾರು ದೇಶಗಳಲ್ಲಿಂದು ಅನಾರೋಗ್ಯ ಸೂಚಿಗಳಾದ ಕ್ಷಯ, ಕಾಲರಾ ಹಾಗು ಅಪೌಷ್ಟಿಕತೆಗಳು ಒಂದೇ ಸಮ ಹೆಚ್ಚುತ್ತಿವೆ.

ಜಗತ್ತಿನ ಬಡ ಜನರ ಆರೋಗ್ಯವು ಒಂದೇಸಮ ಹದಗೆಡುತ್ತಿರುವ ಈ ಸನ್ನಿವೇಶದಲ್ಲಿ ಎಲ್ಲಾ ಜನಪರ ಸಂಘಟನೆಗಳೂ ಸೇರಿಕೊಂಡು, ನವೆಂಬರ್ ೨೦೦೦, ಢಾಕಾದಲ್ಲಿ (ಬಾಂಗ್ಲಾದೇಶ) ಜನರ ಆರೋಗ್ಯ ಸನ್ನದನ್ನು (ದಿಕ್ಸೂಚಿ) ತಯಾರಿಸಿ ಅದನ್ನು ಸ್ವೀಕರಿಸಿವೆ. ಪ್ರಾಥಮಿಕ ಆರೋಗ್ಯದಲ್ಲಿ ವಿಕೇಂದ್ರಿತ, ಸ್ವತಂತ್ರ ಮಾರ್ಗವನ್ನು ಮುನ್ನಡೆಸಿಕೊಂಡು ಹೋಗಲು ಜನಾರೋಗ್ಯ ಸನ್ನದು (ದಿಕ್ಸೂಚಿ) ಕೆಲವು ಮುಖ್ಯ ನೀತಿ ನಿಯಮಗಳನ್ನು ಹಾಕಿಕೊಂಡು ಮುಂದುವರೆಯುತ್ತಿದೆ. ಎಲ್ಲರಿಗೂ ಆರೋಗ್ಯವೆಂಬ ಗುರಿ ಮುಟ್ಟಬೇಕೆಂದರೆ ಸಮಾನತೆ, ಬದ್ಧತೆ ಹಾಗು ಭಾಗವಹಿಸುವಿಕೆಯುಳ್ಳ ಪ್ರಜಾಪ್ರಭುತ್ವಗಳಿಗಾಗಿ ಜನರ ಸತತ ಹೋರಾಟವೊಂದೇ ದಾರಿ ಎನ್ನುತ್ತದೆ ಜನಾರೋಗ್ಯ ಸನ್ನದು.

ಇದು ಜನರೇ ರಚಿಸಿಕೊಂಡ ಆರೋಗ್ಯ ಸನ್ನದು (ದಿಕ್ಸೂಚಿ). ಇದರ ಧ್ಯೇಯಗಳು ಇಂತಿವೆ;

೧. ವ್ಯಕ್ತಿಯ ಬಣ್ಣ, ಜಾತಿ, ಹಿನ್ನೆಲೆ, ಮತ, ಲಿಂಗ, ವಯಸ್ಸು, ವರ್ಗ ಹಾಗು ಸಾಮರ್ಥ್ಯ ಇವೆಲ್ಲ ಏನೇ ಇದ್ದರೂ ಅವರು ಮೂಲಭೂತ ಹಕ್ಕಾಗಿರುವ ಆರೋಗ್ಯವನ್ನು ಪೂರ್ಣವಾಗಿ ಪಡೆಯುವುದು.

೨. ಆರೋಗ್ಯ ಸಂಬಂಧಿ ನೀತಿ ರೂಪಿಸುವಾಗ ಅಲ್ಮಾ ಆಟಾದಲ್ಲಿ ಘೋಷಿತ ಸಮಗ್ರ ಪ್ರಾಥಮಿಕ ಆರೋಗ್ಯ ತತ್ವಗಳು ಮೂಲಭೂತವಾಗಿರಬೇಕು. (ಹಿಂದೆಂದಿಗಿಂತಲೂ ಅದರ ಅವಶ್ಯಕತೆ ಇಂದು ಅದು ಅತಿ ಹೆಚ್ಚಾಗಿದೆ).

೩. ಜನರಿಗೆ ದುಡ್ಡುಕೊಡುವ ಸಾಮರ್ಥ್ಯವಿರಲಿ, ಬಿಡಲಿ ಅವರಿಗೆ ಉತ್ತಮ ಗುಣಮಟ್ಟದ ಅರೋಗ್ಯ ಸೇವೆ, ಶಿಕ್ಷಣ ಮತ್ತು ಇತರ ಸಾಮಾಜಿಕ ಸೇವೆಗಳನ್ನು ಜನರಿಗೆ ದೊರಕಿಸಿಕೊಡುವುದು ಸರಕಾರದ ಆದ್ಯ ಕರ್ತವ್ಯ.

೪. ಆರೋಗ್ಯ ಮತ್ತು ಸಾಮಾಜಿಕ ನೀತಿ ಸಂಹಿತೆ ರೂಪಿಸುವಾಗ ಮತ್ತು ಜಾರಿಯಲ್ಲಿ ತರುವಾಗ ಅದರಲ್ಲಿ ಜನರು ಮತ್ತು ಜನ ಸಂಘಟನೆಗಳ ಭಾಗವಹಿಸುವಿಕೆಯು ಇರಲೇಬೇಕು.

೫. ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ನೀತಿಗಳನ್ನು ರೂಪಿಸುವಾಗ ಆರೋಗ್ಯವು ಅವುಗಳ ಆದ್ಯತೆಯಾಗಿರಬೇಕು.